ಮಾನವಿಕ ಕರ್ನಾಟಕ

ಸಂಪುಟ ೩೩

ಸಂಚಿಕೆ ೩

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು ೫೭೦ ೦೦೬
೨೦೦೩

ಮಾನವಿಕ ಕರ್ಣಾಟಕ

ಸಂಪುಟ ೩೩, ಸಂಚಿಕೆ ೩

ಪ್ರಸಾರಾಂಗ

ಮೈಸೂರು ವಿಶ್ವವಿದ್ಯಾನಿಲಯ,

ಮೈಸೂರು

೨೦೦೩

MANAVIKA KARNATAKA : A Kannada Quarterly of the University of Mysore, Volume 33, Number 3, Edited by Prof. Ambalike Hiriyanna and Dr. R. Ramakrishna. Published by the Director, Prasaranga, University of Mysore, Manasagangotri, Mysore 570 006

ಪ್ರಧಾನ ಸಂಪಾದಕರು

ಪ್ರೊ. ಲಕ್ಷ್ಮೀನಾರಾಯಣ ಅರೋರಾ

ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು - ೫೭೦ ೦೦೬

ಸಂಪಾದಕರು

ಪ್ರೊ. ಅಂಬಳಿಕೆ ಹಿರಿಯಣ್ಣ

ಡಾ. ಆರ್. ರಾಮಕೃಷ್ಣ

ಮುದ್ರಕರು

ನಿರ್ದೇಶಕರು

ಮೈ.ವಿ.ವಿ. ಮುದ್ರಣಾಲಯ, ಮೈಸೂರು ೫೭೦ ೦೦೬

ಪ್ರಕಾಶಕರ ಮಾತು

'ಮಾನವಿಕ ಕರ್ನಾಟಕ' ದ ೩೩ನೇ ಸಂಪುಟದ ಮೂರನೆಯ ಸಂಚಿಕೆ ಇದೀಗ ಓದುಗರ ಕೈ ಸೇರುತ್ತಿದೆ. ಮಾನವಿಕ ವಿಭಾಗದ ಕೆಲವಾರು ಕ್ಷೇತ್ರಗಳಿಗೆ ಸಂಬಂಧಪಟ್ಟ ೧೦ ಲೇಖನಗಳು ಈ ಹೊತ್ತಗೆಯಲ್ಲಿ ಅಡಕವಾಗಿವೆ. ಸಂಶೋಧನಾತ್ಮಕ ದೃಷ್ಟಿಯಿಂದ ಲೇಖನಗಳು ಜಿಜ್ಞಾಸು ಓದುಗರ ಕುತೂಹಲವನ್ನು ತಣಿಸುವಲ್ಲಿ ಸಾಕಷ್ಟು ನೆರವಾಗುತ್ತವೆ.

ವಿಶ್ವವಿದ್ಯಾನಿಲಯದಲ್ಲಿ ಮಾತ್ರವಲ್ಲದೆ ಹೊರಗಡೆಯ ಬಗೆಬಗೆಯ ಕ್ಷೇತ್ರಗಳಲ್ಲಿ ಕಾರ್ಯನಿರತರಾಗಿರುವ ವಿದ್ವಾಂಸರಿಗೆ ಮತ್ತು ಸಂಶೋಧಕರಿಗೆ 'ಮಾನವಿಕ ಕರ್ನಾಟಕ' ಒಂದು ಮಹತ್ವದ ವೇದಿಕೆಯನ್ನು ಕಲ್ಪಿಸುವಲ್ಲಿ ಸಮರ್ಥವಾಗಿದೆ. ಈ ಸದಾವಕಾಶವನ್ನು ಸಮರ್ಥವಾಗಿ ಓದುಗ ಬಂಧುಗಳು ಬಳಸಿಕೊಳ್ಳುತ್ತಾರೆಂದು ನಿರೀಕ್ಷಿಸಲಾಗಿದೆ.

ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಯವರಾದ ಪ್ರೊ. ಜೆ. ಶಶಿಧರ ಪ್ರಸಾದ್ ಅವರು ಹಾಗೂ ಕುಲಸಚಿವರಾದ ಶ್ರೀ ಎನ್. ಡಿ. ತಿವಾರಿಯವರು ಈ ಪತ್ರಿಕೆಗಳನ್ನು ಹೊರತರುವಲ್ಲಿ ವಿಶೇಷ ಆಸ್ಥೆ ವಹಿಸಿದ್ದಾರೆ. ಅವರಿಗೂ, ಈ ಹೊತ್ತಗೆಯನ್ನು ಸಂಪಾದಿಸಿಕೊಟ್ಟಿರುವ ಪ್ರೊ. ಅಂಬಳಿಕೆ ಹಿರಿಯಣ್ಣ ಮತ್ತು ಡಾ. ಆರ್. ರಾಮಕೃಷ್ಣ ಅವರಿಗೂ, ಲೇಖನಗಳನ್ನು ಬರೆದುಕೊಟ್ಟು, ಸಂಶೋಧನ ಕ್ಷೇತ್ರದಲ್ಲಿ ತಮ್ಮನ್ನು ವಿಶೇಷವಾಗಿ ತೊಡಗಿಸಿಕೊಂಡಿರುವ ಲೇಖಕ ಬಂಧುಗಳಿಗೂ, ಈ ಹೊತ್ತಗೆಯ ಡಿ.ಟಿ.ಪಿ. ಕೆಲಸವನ್ನು ನಿರ್ವಹಿಸಿಕೊಟ್ಟಿರುವ 'ಶ್ರೀನಿವಾಸ ಕಂಪ್ಯೂಟರ್ಸ್'ನ ಶ್ರೀ ಡಿ. ವಿ. ಶ್ರೀವತ್ಸ ಅವರಿಗೂ, ಅಚ್ಚಿಸಿಕೊಟ್ಟಿರುವ ವಿಶ್ವವಿದ್ಯಾನಿಲಯ ಮುದ್ರಣಾಲಯದ ಸಿಬ್ಬಂದಿ ವರ್ಗದವರಿಗೂ, ಎಂದಿನಂತೆ ಈ ಕೆಲಸ ಕಾರ್ಯಗಳಲ್ಲಿ ಸಹಕರಿಸುತ್ತಿರುವ ಪ್ರಸಾರಾಂಗದ ಉಪನಿರ್ದೇಶಕರಾದ ಶ್ರೀ ಬಾ. ವೇ. ಶ್ರೀಧರ ಮತ್ತು ಇತರ ಸಹೋದ್ಯೋಗಿಗಳಿಗೂ ನನ್ನ ಹಾರ್ದಿಕ ವಂದನೆಗಳು.

ಪ್ರೊ. ಲಕ್ಷ್ಮೀ ನಾರಾಯಣ ಅರೋರಾ
ಪ್ರಧಾನ ಸಂಪಾದಕರು

ಸಂಪಾದಕೀಯ

ಪ್ರಕೃತ ಸಂಚಿಕೆ ಒಟ್ಟು ಹತ್ತು ಬರಹಗಳನ್ನು ಒಳಗೊಂಡಿದ್ದು ಅವು ಮುಖ್ಯವಾಗಿ ಸಾಮಾಜಿಕವಿಜ್ಞಾನ ಕ್ಷೇತ್ರಗಳಿಗೆ ಸಂಬಂಧಿಸಿವೆ. ಮಾಹಿತಿ ಸಂಗ್ರಹ, ಮಂಡನೆ ಹಾಗೂ ಫಲಿತಗಳ ದೃಷ್ಟಿಯಿಂದ ಭಾಷೆ, ತತ್ವಶಾಸ್ತ್ರ, ಮನೋವಿಜ್ಞಾನಕ್ಕೆ ಸಂಬಂಧಿಸಿದ ಬರಹಗಳು ಮಹತ್ವದ್ದಾಗಿವೆ.

ಎಂ.ಪಿ. ಮಹಾದೇವಯ್ಯನವರ 'ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ಜೈನ ಬಸದಿಗಳು' ಲೇಖನ ಗಂಗರ ಮತ್ತು ಚೋಳರ ಕಾಲಕ್ಕೆ ಸೇರಿದ ಜೈನ ಬಸದಿಗಳ ಒಂದು ಸ್ಥೂಲ ಅವಲೋಕನವಾಗಿದೆ. ಆ ಕಾಲದ ಜೈನಬಸದಿಗಳ ಮುಖ್ಯ ವಾಸ್ತು ಲಕ್ಷಣಗಳನ್ನು ವೈದಿಕ ಧರ್ಮದ ವಾಸ್ತು ಲಕ್ಷಣಗಳೊಂದಿಗೆ ಹೋಲಿಸಿ ಇಲ್ಲಿ ಅಧ್ಯಯನ ಮಾಡಲಾಗಿದೆ. ಮೈಸೂರು ಮತ್ತು ಚಾಮರಾಜನಗರ ಭಾಗದಲ್ಲಿ ಶಾಸನಾಧಾರವಿಲ್ಲದ ಭಗ್ನ ಜೈನ ಅವಶೇಷಗಳೂ ಲಭ್ಯವಿದ್ದು ಅವೆಲ್ಲವನ್ನೂ ಪಟ್ಟಿಮಾಡಿ ಕ್ರಿ.ಶ.ದ ಮೊದಲನೆಯ ಸಹಸ್ರಮಾನದಲ್ಲಿ ಕರ್ನಾಟಕದಲ್ಲಿ ಜೈನಧರ್ಮಕ್ಕೆ ಪ್ರಾಪ್ತವಾಗಿದ್ದ ಪೋಷಣೆ, ಸ್ಥಾನಮಾನಗಳ ಬಗೆಗೆ ಆಳವಾದ ಅಧ್ಯಯನ ನಡೆಸುವ ಅಗತ್ಯವನ್ನು ಇಲ್ಲಿ ಮನಗಾಣಿಸಿ ಕೊಡಲಾಗಿದೆ.

'ಕನ್ನಡ ವೃತ್ತಪತ್ರಿಕೆಗಳಲ್ಲಿ ಭಾಷೆಯ ಬಳಕೆ' ಎಂಬ ಲೇಖನ ಎಲ್. ಮಂಜುಳಾಕ್ಷಿ ಅವರಿಂದ ರಚಿತವಾದುದು. ಈ ಲೇಖನದಲ್ಲಿ ಪತ್ರಿಕೆಗಳಲ್ಲಿ ಭಾಷೆಯ ಬಗ್ಗೆ ಇರುವ ಕಾಳಜಿಯ ಸ್ವರೂಪವನ್ನು ತಿಳಿಸಿಕೊಡಲು ಯತ್ನಿಸಲಾಗಿದೆ. ಇಲ್ಲಿ ಭಾಷೆಯ ಸದ್ಬಳಕೆ ಹಾಗೂ ದುರ್ಬಳಕೆಗಳನ್ನು ವೈದೃಶ್ಯವಾಗಿ ನೋಡಿರುವುದು ಗಮನಾರ್ಹ. ಟಿ.ಎಸ್. ರಾಮಚಂದ್ರರಾವ್ ಅವರ 'ಛೂ ಬಾಣ' ಅಂಕಣ ಬರಹ 'ಪ್ರಜಾವಾಣಿ' ದಿನಪತ್ರಿಕೆಗೆ ವಿಶೇಷ ಮೆರಗನ್ನು ಗೌರವವನ್ನು ತಂದುಕೊಟ್ಟದ್ದು ಭಾಷೆಯ ಸದ್ಬಳಕೆಯಿಂದ ಎಂದು ಅಭಿಪ್ರಾಯಪಟ್ಟಿರುವ ಲೇಖಕರು ಭಾಷೆಯ 'ಅಪಾಯಕಾರಿ' ಬಳಕೆಗೆ 'ಕನ್ನಡ ಪ್ರಭ' ಪತ್ರಿಕೆಯ 'ಮಾಡು ಇಲ್ಲ ಮಡಿ' (ಮಾರ್ಚ ೧೦, ೨೦೦೪) ಶೀರ್ಷಿಕೆಯನ್ನು ಉಲ್ಲೇಖಿಸುತ್ತಾರೆ. ಕ್ರೀಡಾ ಸುದ್ದಿಗಳನ್ನು ಅತಿರಂಜಕ ಪದಗಳಲ್ಲಿ ನಿರೂಪಿಸುತ್ತಾ ಕ್ರೀಡಾಸಕ್ತರ ಭಾವನೆಗಳನ್ನು ಉದ್ದೀಪನಗೊಳಿಸುವ, ಆ ಸುದ್ದಿಗಳನ್ನು ಓದುವ ಓದುಗರ ದಾಹವನ್ನು ತಣಿಸುವ ಪರಿ ಕೀಳು ಅಭಿರುಚಿಯದೆಂದೂ ನಿರೂಪಿಸಿದ್ದಾರೆ. ಈ ಹಿನ್ನೆಲೆಯಲ್ಲಿ ವೃತ್ತ ಪತ್ರಿಕೆಗಳಲ್ಲಿ ಭಾಷೆಯ ಬಳಕೆ ಹಿತ-ಮಿತವಾಗಿರಬೇಕೆಂದು ಅವರು ಅಭಿಪ್ರಾಯಪಟ್ಟಿರುವುದು ಸಮಂಜಸವಾಗಿ ಕಾಣುತ್ತದೆ.

ಭಾಷೆಯ ವಿಷಯದಲ್ಲಿ ಅಧ್ಯಯನಕ್ಕೆ ತೊಡಗುವವರು ಕ್ಷೇತ್ರಕಾರ್ಯ ನಿರ್ವಹಿಸಬೇಕಾದುದು ಅಗತ್ಯ. ಕ್ಷೇತ್ರಕಾರ್ಯದಲ್ಲಿ ಸಾಮಗ್ರಿ ಸಂಗ್ರಹ ಮಹತ್ವದ ಕಾರ್ಯ. ಈ ಕಾರ್ಯವನ್ನು ನಿಷ್ಠೆಯಿಂದ ನಿರ್ವಹಿಸಬೇಕಾದ ಹೊಣೆಗಾರಿಕೆ ಸಂಶೋಧಕನದು - ಈ ಸಂಗತಿಗಳನ್ನು ಮನವರಿಕೆ ಮಾಡಿಕೊಡುವ ಪ್ರಯತ್ನ ಬಿ. ಕೆ. ರವೀಂದ್ರನಾಥ್ ಅವರ 'ಕ್ಷೇತ್ರ ಭಾಷಾ ವಿಜ್ಞಾನದಲ್ಲಿ ಸಂಶೋಧಕರ ಪಾತ್ರ' ಲೇಖನದ್ದು. ಕ್ಷೇತ್ರದಿಂದ ದೊರಕಿಸಿಕೊಂಡ ಸಾಮಗ್ರಿಗಳ ಮೇಲೆಯೇ ಸಂಶೋಧಕನ ಸಂಶೋಧನೆಯ ಫಲ ನಿಂತಿರುವುದರಿಂದ ಭಾಷಾ ಸಂಶೋಧಕನು ಅಗತ್ಯವಾದ ಎಲ್ಲ ಅರ್ಹತೆಗಳನ್ನೂ ಗಳಿಸಿಕೊಂಡಿರಬೇಕು. ಕ್ಷೇತ್ರಕಾರ್ಯ ನಡೆಸಬೇಕಾದ ಭಾಷಾ ಸಮುದಾಯದ

ನಡುವೆ ನಿಕಟ ಬಾಂಧವ್ಯ ಹೊಂದಿರುವವನು ಮಾತ್ರ ಉತ್ತಮ ಗುಣಮಟ್ಟದ ಸಾಮಗ್ರಿಯನ್ನು ದೊರಕಿಸಿಕೊಳ್ಳಲು ಸಾಧ್ಯ ಎಂದು ಲೇಖಕರು ಅಭಿಪ್ರಾಯಪಟ್ಟಿರುವುದು ಗಮನಾರ್ಹ.

ಆರ್. ರಾಮಕೃಷ್ಣ ಅವರ 'ಇಂಡೋ ಆರ್ಯನ್ ಭಾಷೆಗಳಲ್ಲಿ ಪ್ರಾಕೃತದ ಸ್ಥಾನ' ಲೇಖನ ಒಂದು ಅಭ್ಯಾಸಪೂರ್ಣ ಬರಹವಾಗಿದ್ದು ಇಂಡೋ ಆರ್ಯನ್ ಗುಂಪಿಗೆ ಸೇರಿದ ಪ್ರಾಚೀನ ಭಾಷೆಗಳಲ್ಲೇ ಮಹತ್ವದ್ದೆನಿಸಿದ ಪ್ರಾಕೃತದ ಬಗೆಗೆ ಹೆಚ್ಚಿನ ಅರಿವನ್ನು ಮೂಡಿಸುವ ಒಂದು ಒಳ್ಳೆಯ ಪ್ರಯತ್ನವಾಗಿದೆ. ಪ್ರಾಕೃತವು ಪೂರ್ವಕಾಲೀನ ಇಂಡೊ ಆರ್ಯನ್ ಮತ್ತು ಆಧುನಿಕ ಇಂಡೋ ಆರ್ಯನ್ ಭಾಷೆಗಳ ನಡುವಿನ ಕೊಂಡಿಯಲ್ಲದೆ ಮಧ್ಯಕಾಲೀನ ಇಂಡೋ ಆರ್ಯನ್ ಭಾಷಾ ಪ್ರಭೇದಗಳಾದ ಪ್ರಾಕೃತರೂಪಗಳು ಅರ್ವಾಚೀನ ಅಥವಾ ಆಧುನಿಕ ಇಂಡೋ ಆರ್ಯನ್ ಭಾಷೆಗಳಾಗಿ ಪರಿವರ್ತನೆ ಹೊಂದಿವೆಯೆಂದು ಲೇಖಕರು ಸ್ಪಷ್ಟಪಡಿಸಿದ್ದಾರೆ.

ಬಿ. ಕೆ. ಸುವರ್ಣಾದೇವಿಯವರ 'ಕನ್ನಡ ಭಾಷಾವಿಜ್ಞಾನ ಕ್ಷೇತ್ರಕ್ಕೆ ವಿದೇಶಿತ್ರಯರ ಕೊಡುಗೆಗಳು' ಲೇಖನ ಎಫ್. ಕಿಟಲ್. ಮೆಕೊರ್ಮ್ಮಿಕ್ ಮತ್ತು ವಿಲಿಯಂ ಬ್ರೈಟ್ ಅವರ ಕೊಡುಗೆಗಳನ್ನು ಸ್ಥೂಲವಾಗಿ ಸಮೀಕ್ಷೆ ಮಾಡುತ್ತದೆ. ಕನ್ನಡ ಭಾಷಾವಿಜ್ಞಾನ ಕ್ಷೇತ್ರ ವೈಜ್ಞಾನಿಕವಾಗಿ ಹಾಗೂ ವ್ಯಾಪಕವಾಗಿ ಬೆಳೆಯಲು ಈ ವಿದೇಶಿತ್ರಯರು ಎಷ್ಟು ಕಾರಣರಾಗಿದ್ದಾರೆಂಬುದನ್ನು ಆ ಮೂವರು ವಿದ್ವಾಂಸರು ಕನ್ನಡ ಭಾಷಾವಿಜ್ಞಾನಕ್ಕೆ ನೀಡಿರುವ ಕೊಡುಗೆಗಳ ಹಿನ್ನೆಲೆಯಲ್ಲಿ ಸಾಧಾರವಾಗಿ ನಿರೂಪಿಸಿದ್ದಾರೆ. ಈ ಮೂವರೂ ವಿದ್ವಾಂಸರು ತಂತಮ್ಮ ಗ್ರಂಥಗಳ ರಚನೆಗೆ ಬೇಕಾಗಿದ್ದ ಸಾಮಗ್ರಿಯನ್ನು ಸ್ಥಳೀಯರಿಂದ ಕ್ಷೇತ್ರಕಾರ್ಯ ವಿಧಾನದ ಮೂಲಕ ದೊರಕಿಸಿಕೊಂಡಿರುವ ಸ್ತುತ್ಯ ಪ್ರಯತ್ನಗಳನ್ನು ಉಲ್ಲೇಖಿಸಿ ಮುಖ್ಯ ಸಮುದಾಯಗಳಿಗೆ ಸೇರಿದ ಸ್ಥಳೀಯರಿಂದ ಆಡುಭಾಷೆಗೆ ಸಂಬಂಧಿಸಿದ ಸಾಮಗ್ರಿಯನ್ನು ದೊರಕಿಸಿಕೊಂಡು ವೈಜ್ಞಾನಿಕ ವಿಶ್ಲೇಷಣೆಗೆ ಗುರಿ ಮಾಡಿರುವುದು ಅರ್ಥಪೂರ್ಣ ಎಂದು ಲೇಖಕರು ಹೇಳಿರುವುದು ಯುಕ್ತವಾಗಿದೆ.

'ಕನ್ನಡ ಒಡಪುಗಳು: ಒಂದು ವಿವೇಚನೆ' ಎಂಬ ಲೇಖನದಲ್ಲಿ ವಿ. ವಿಜಯಮ್ಮ ಅವರು ಭಾಷಿಕ ಪ್ರಕಾರಗಳಲ್ಲಿ ಅಷ್ಟಾಗಿ ಗಮನಿಸಿರದ ಒಡಪುಗಳ ಬಗೆಗೆ ತಿಳಿಸಿಕೊಡುವ ಪ್ರಯತ್ನವಿದೆ. ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಇಂದಿಗೂ ಪ್ರಚಲಿತವಿರುವ ಒಡಪುಗಳನ್ನು ಆಧರಿಸಿ ಅವುಗಳ ಸ್ವರೂಪ-ಸ್ವಾರಸ್ಯಗಳನ್ನು ಪರಿಚಯಾತ್ಮಕ ನೆಲೆಯಲ್ಲಿ ಸೋದಾಹರಣವಾಗಿ ವಿವೇಚಿಸುವ ಯತ್ನ ಇಲ್ಲಿದ್ದು ಕಲಿತವರ ಪ್ರಭಾವದಿಂದಾಗಿ ಈಚಿನ ದಿನಗಳಲ್ಲಿ ಒಡಪುಗಳು ಕೃತಕತೆಗೆ ತಿರುಗುತ್ತಿವೆ ಎಂದು ಆತಂಕ ವ್ಯಕ್ತಪಡಿಸುವುದರೊಂದಿಗೆ ಓದುಗರ ಗಮನ ಸೆಳೆಯಲಾಗಿದೆ.

'ಗುರುಭಜನೆ' ಎಂಬ ಲೇಖನ ಆ.ನಂ. ಕೋಕಿಲ ಅವರದು. ಬದಲಾದ ಪರಿಸ್ಥಿತಿಯಲ್ಲಿ ಪ್ರಾಮುಖ್ಯತೆ ಕಳೆದುಕೊಳ್ಳುತ್ತಿರುವ ಸತ್ಸಂಪ್ರದಾಯವೊಂದನ್ನು ಉಳಿಸಿ ಬೆಳೆಸುವ ಕಾಳಜಿ ವ್ಯಕ್ತಪಡಿಸುವ ಬರಹ ಇದು. ಹಳ್ಳಿಗಳಲ್ಲಿ ಯಾರಾದರೂ ತೀರಿಕೊಂಡಾಗ, ಹೆಣ್ಣು ಮಗಳು ಪ್ರಾಪ್ತ ವಯಸ್ಸಿಗೆ ಬಂದ ಸಂದರ್ಭದ ಪ್ರೌಢ ಸಂಸ್ಕಾರಗಳಲ್ಲಿ ತಪ್ಪದೆ ನಡೆಸಲಾಗುತ್ತಿದ್ದ 'ಗುರುಭಜನೆ' ವಿರಳವಾಗುತ್ತಿರುವುದು ಆತಂಕಕಾರಿ ಎಂದು ಅಭಿಪ್ರಾಯಪಡಲಾಗಿದೆ. ಮುಂದಿನ ಪೀಳಿಗೆಯವರಲ್ಲಿ ಸದಭಿರುಚಿ ಮೂಡಿಸಲು, ಸ್ಥಳೀಯ ಜ್ಞಾನ ಮತ್ತು ವಿವೇಕವನ್ನು ಬೆಳೆಸಲು, ಭಾವೈಕ್ಯತೆಯನ್ನು ಹುಟ್ಟು ಹಾಕಲು ಗುರುಭಜನೆ ಉಪಯುಕ್ತ ಎಂದು ಅದರ ಕಾರ್ಯವನ್ನು ಎತ್ತಿ ಹೇಳಲಾಗಿದೆ.

ಮಹಾದೇವಿಬಾಯಿ ಅವರ 'ಲಂಬಾಣಿಗರಲ್ಲಿ ಅಳುವ ಸಂಪ್ರದಾಯ' ಲೇಖನ ಲಂಬಾಣಿ ಮದುವೆ ಸಂದರ್ಭದಲ್ಲಿ ರೂಢಿಸಿಕೊಂಡಿರುವ ಅಳುವ ಸಂಪ್ರದಾಯಗಳನ್ನು ಪರಿಚಯಿಸುವ ಆಶಯವುಳ್ಳದ್ದು. ಮದುವೆ ಸಂದರ್ಭದಲ್ಲಿ ಮದುಮಗಳು ತನ್ನವರನ್ನು ಅಗಲಿ ಹೋಗಬೇಕಾದ ನೋವನ್ನು ತೋಡಿಕೊಂಡು ಅಳುವ ಒಂದು ವಿಶಿಷ್ಟ ಸಂಪ್ರದಾಯವನ್ನು ನೋಡುತ್ತೇವೆ. ಕೊರಳು ತಬ್ಬಿ ಅಳುವ ಕ್ರಮ ಲಂಬಾಣಿಗರಲ್ಲಿರುವ ಬಾಂಧವ್ಯದ ಸ್ವರೂಪವನ್ನು ತಿಳಿಸಿಕೊಡುತ್ತದೆ. ಹೆಣ್ಣು ತನ್ನ ಜೀವನದ ಮುಖ್ಯ ಘಟ್ಟಗಳಲ್ಲಿ ಎದುರಿಸುವ ಕಷ್ಟಕೋಟಲೆಗಳನ್ನು, ಸಂದಿಗ್ಧಗಳನ್ನು, ಬದುಕಿನ ಅನಂತತೆಯನ್ನು ತಲಪಿಸುವ ಒಂದು ಮಾಧ್ಯಮವಾಗಿ ಕೂಡ ಈ ಸಂಪ್ರದಾಯ ತೋರಿ ಬರುತ್ತದೆ. ಈ ಸಂದರ್ಭದಲ್ಲಿ ಹಾಡುವ ಹಾಡುಗಳಲ್ಲಿ ಸಂಬಂಧದ ಗಾಢತೆ ಮತ್ತು ಅನುಭವ ತೀವ್ರತೆಯನ್ನು ಗ್ರಹಿಸಬಹುದು.

ವಿ. ಎನ್. ಶೇಷಗಿರಿರಾವರು 'ವ್ಯಾಸರಾಜರು ಮತ್ತು ವಾದಿರಾಜರು' ಎಂಬ ಶೀರ್ಷಿಕೆಯಲ್ಲಿ ದಾಸಪಂಥದ ಅಧ್ವರ್ಯುಗಳಿಬ್ಬರನ್ನು ಪರಿಚಯಿಸಿದ್ದಾರೆ. ಮುಖ್ಯವಾಗಿ ಈ ಈರ್ವರ ವ್ಯಕ್ತಿತ್ವ ಮತ್ತು ಸಾಧನೆಗಳನ್ನು ಸೂಕ್ತ ದೃಷ್ಟಾಂತಗಳೊಡನೆ ಸಂಕ್ಷೇಪವಾಗಿ ವಿವೇಚಿಸಿದ್ದಾರೆ. ವ್ಯಾಸರಾಜರ ಕೃತಿಗಳ ಸಂದೇಶವನ್ನು ಗುರುತಿಸಿರುವಂತೆಯೇ ವಾದಿರಾಜರ ಧಾರ್ಮಿಕ ಕಾರ್ಯಗಳ ಸ್ವರೂಪವನ್ನು ವಿವೇಚಿಸಿರುವುದು ಗಮನಾರ್ಹ.

ಕೊನೆಯ ಲೇಖನ 'ಶಾರದಳಿಗೆ ಪತಿಯ ಸಾವಿನ ಭಯದ ಗೀಳು ಹಾಗೂ ಚಂದ್ರಕಾಂತನ ಉದ್ವಿಗ್ನತೆ ಮತ್ತು ಬರಹಗಾರನ ಕೈಸೇದು' ಮನೋರೋಗಿಗಳಿಬ್ಬರ ವೃತ್ತಾಂತವನ್ನು ಮನೋವೈಜ್ಞಾನಿಕ ಹಿನ್ನೆಲೆಯಲ್ಲಿ ವಿಶ್ಲೇಷಿಸುವ ಯತ್ನ ಮಾಡುತ್ತದೆ. ಇಲ್ಲಿ ಎರಡು ರೋಗ ವೃತ್ತಾಂತಗಳನ್ನು ನಿರೂಪಿಸುವುದರ ಮೂಲಕ ಲೇಖಕರು ಇಂಥ ಮಾನಸಿಕ ಕಾಯಿಲೆಗಳಿಗೆ ಸುಲಭ ರೀತಿಯ ಪರಿಹಾರಗಳನ್ನು ಕಂಡುಕೊಳ್ಳುವ, ಯುಕ್ತ ಶಿಕ್ಷಣ ನೀಡುವ ಪರಿಕ್ರಮಗಳನ್ನು ಹುಟ್ಟು ಹಾಕಿದ್ದಾರೆಂದೇ ಹೇಳಬೇಕು. ರೋಗ ವೃತ್ತಾಂತ, ವರದಿ ಹಾಗೂ ರೋಗ ಚಿಕಿತ್ಸಾ ವಿಧಾನಗಳನ್ನು ಎಲ್ಲರಿಗೂ ತಿಳಿಯುವ ರೀತಿಯಲ್ಲಿ ಅತ್ಯಂತ ಸರಳವಾಗಿ, ಸಹಜವಾಗಿ ಆಪ್ತವಾಗಿ ನಿರೂಪಿಸಿರುವುದು ಇಲ್ಲಿಯ ವಿಶೇಷ.

ಒಟ್ಟಿನಲ್ಲಿ ಈ ಸಂಚಿಕೆ ಪ್ರಾಚೀನ ಇತಿಹಾಸ, ಭಾಷೆ-ಸಂಸ್ಕೃತಿ, ಸಾಹಿತ್ಯ-ಸಂಪ್ರದಾಯ, ತತ್ವದರ್ಶನ ಹಾಗೂ ಮನೋಬೇನೆಗೆ ಸಂಬಂಧಿಸಿದ ವಿಷಯಗಳನ್ನು ಕುರಿತಿದ್ದು ವೈವಿಧ್ಯಮಯವೂ ಆಕರ್ಷಕವೂ ಆಗಿ ರೂಪುಗೊಂಡಿದೆ. ಈ ಬರಹಗಳು ಸಮಾಜವಿಜ್ಞಾನ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಎಲ್ಲರಿಗೂ ಉಪಯುಕ್ತ ಎನಿಸಿದರೆ ನಮ್ಮ ಶ್ರಮ ಸಾರ್ಥಕವಾಗುತ್ತದೆ.

ಅಂಬಳಿಕೆ ಹಿರಿಯಣ್ಣ
ಆರ್. ರಾಮಕೃಷ್ಣ

ಪರಿವಿಡಿ

೭. **ಆ. ನಂ. ಕೋಕಿಲ**
ಅಧ್ಯಾಪಕಿ, ಕನ್ನಡ ವಿಭಾಗ
ಮಹಾರಾಜ ಕಾಲೇಜು, ಮೈಸೂರು-೫೭೦ ೦೦೫

೮. **ಮಹಾದೇವಿ ಬಾಯಿ**
ಸಂಶೋಧನಾ ವಿದ್ಯಾರ್ಥಿನಿ, ಜಾನಪದ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು-೫೭೦ ೦೦೬

೯. **ಡಾ. ವಿ. ಎನ್. ಶೇಷಗಿರಿರಾವ್**
ಪ್ರಾಧ್ಯಾಪಕರು, ತತ್ವಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು-೫೭೦ ೦೦೬

೧೦. **ಪ್ರೊ. ಪಿ. ನಟರಾಜ್**
ನಿವೃತ್ತ ಪ್ರಾಧ್ಯಾಪಕರು, ಮನೋವಿಜ್ಞಾನ ವಿಭಾಗ
೧೩ನೆಯ ತಿರುವು, ವಿ.ವಿ. ಮೊಹಲ್ಲಾ,
ಮೈಸೂರು-೫೭೦ ೦೦೨

W.O. 7993-MUPM-300 copies-24-3-2004

ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ಜೈನ ಬಸದಿಗಳು

ಡಾ. ಎಂ. ಪಿ. ಮಹಾದೇವಯ್ಯ

ಕರ್ನಾಟಕದಲ್ಲಿ ಜೈನ ಧರ್ಮ ಅತೀ ಪ್ರಾಚೀನವಾದ ಧರ್ಮ. ಗಂಗರಸರು ಈ ಧರ್ಮವನ್ನು ಬಹಳ ಶ್ರದ್ಧೆಯಿಂದ ಪೋಷಿಸಿದರು. ಗಂಗ ವಂಶದ ಮೂಲಪುರುಷರಾದ ದಡಿಗ ಮತ್ತು ಮಾಧವರು ಜೈನ ಸಂಘದ ಮುನಿ ಸಿಂಹನಂದಿಯ ಶಿಷ್ಯರು. ಈ ಮುನಿಯ ಪ್ರೇರಣೆಯಿಂದಾಗಿಯೇ ಈ ಸಹೋದರರಿಂದ ಗಂಗ ರಾಜವಂಶ ಸ್ಥಾಪನೆಯಾಯಿತು ಎಂಬುದು ಕಥೆ ಎನಿಸಿದರೂ ಗಂಗರು ಜೈನಧರ್ಮದ ಏಳಿಗೆಗೆ ನೀಡಿದ ಪ್ರಾಮುಖ್ಯದಿಂದ ಈ ಅಂಶ ನಿಜವಿರಲೂಬಹುದು ಎನಿಸುತ್ತಿದೆ. ಕರ್ನಾಟಕದ ಅತ್ಯಂತ ಪ್ರಾಚೀನ ಜೈನ ಕೇಂದ್ರ ನಿಸ್ಸಂದೇಹವಾಗಿ ಶ್ರವಣಬೆಳಗೊಳ. ಇದು ಗಂಗ ರಾಜ್ಯದ ಒಂದು ಪ್ರಮುಖ ಭಾಗ. ಗಂಗರ ಆಶ್ರಯದಲ್ಲಿ ಕರ್ನಾಟಕದ ಒಂದು ಪ್ರಬಲ ಧರ್ಮವಾಗಲು ಇದು ಸಹಕಾರಿಯಾಯಿತು. ಗಂಗರ ರಾಜಧಾನಿ ತಲಕಾಡು ಅಥವಾ ತಲವನಪುರ. ಕಾವೇರಿ ನದಿಯ ಉತ್ತರ ದಂಡೆಯ ಮೇಲಿನ ಊರು. ಪ್ರಸ್ತುತ ಇಲ್ಲಿ ಜೈನದೇಗುಲಗಳು ಕಾಣಬರದಿದ್ದರೂ ಈ ಊರಿನಲ್ಲಿ ಜೈನಬಸದಿಗಳು ಇದ್ದುವೆಂಬುದಕ್ಕೆ ಪುರಾತತ್ತ್ವ, ಶಾಸನ ಹಾಗೂ ಶಿಲ್ಪಾಧಾರಗಳು ಸಾಕಷ್ಟಿವೆ. ಇತ್ತೀಚೆಗೆ ನಡೆದ ಪುರಾತತ್ತ್ವ ಸಂಶೋಧನೆಗಳು ತಲಕಾಡಿನ ಮರಳು ದಿಬ್ಬದ ಅಡಿಯಲ್ಲಿ ಪ್ರಾಚೀನ ಜೈನ ಬಸದಿಯ ಅವಶೇಷಗಳನ್ನು ಪತ್ತೆ ಹಚ್ಚಿವೆ. ಅಲ್ಲದೆ ತಲಕಾಡಿನಲ್ಲಿ ಸಧ್ಯಕ್ಕೆ ಎರಡು ಪಾರ್ಶ್ವನಾಥನ ವಿಗ್ರಹಗಳು ಕಂಡುಬರುತ್ತವೆ. ಬಳಿಯಲ್ಲಿಯೇ ಇರುವ ವಿಜಯಪುರದಲ್ಲಿಯೂ ಸಹ ಎರಡು ಜೈನ ವಿಗ್ರಹಗಳು ಪತ್ತೆಯಾಗಿವೆ. ಗಂಗರಾಜ್ಯದ ಎಲ್ಲಾ ಪ್ರಮುಖ ಪಟ್ಟಣಗಳಲ್ಲಿ, ಊರುಗಳಲ್ಲಿ ಮತ್ತು ಹಳ್ಳಿಗಳಲ್ಲಿ ಒಂದಲ್ಲೊಂದು ರೀತಿಯಲ್ಲಿ ಜೈನಧರ್ಮ ನೆಲೆಸಿದ್ದಕ್ಕೆ ಶಾಸನ, ವಾಸ್ತು, ಶಿಲ್ಪಾಧಾರಗಳು ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತವೆ.

ಇವುಗಳಲ್ಲಿ ಗಂಗರ ಮತ್ತು ಚೋಳರ ಕಾಲಕ್ಕೆ ಸೇರಿಸಬಹುದಾದ ಜೈನ ಬಸದಿಗಳು ಸಂಖ್ಯೆಯಲ್ಲಿ ವಿರಳ ಕಾರಣ, ಕಾಲಪುರುಷನ ಹಾವಳಿ ಹಾಗೂ ಅನಂತರದ ಕಾಲದಲ್ಲಿ ಅವುಗಳ ದುರಸ್ತಿ ಹಾಗೂ ಪುನರ್ನಿರ್ಮಾಣಕಾರ್ಯ, ಇವುಗಳಿಂದಾಗಿ ಗಂಗರ ಕಾಲದ ಜೈನ ಬಸದಿಗಳು ಶಾಸನಗಳಲ್ಲಿ ಹೆಚ್ಚಾಗಿ ಉಕ್ತವಾಗಿರುವುದು ಕಂಡುಬಂದರೂ ಅವುಗಳ ಭೌತಿಕ ಸಾಕ್ಷ್ಯ ದೊರಕುವುದು ಕಷ್ಟದ ಸಂಗತಿಯೇ ಸರಿ.

ಈ ಅಡಚಣೆಗಳ ಹಿನ್ನೆಲೆಯಲ್ಲಿ ಗಂಗರ ಮತ್ತು ಚೋಳರ ಕಾಲದ (ಅಂದರೆ ಅತಿ ಪ್ರಾಚೀನ ಕಾಲದಿಂದ ಹಿಡಿದು ಸುಮಾರು ೧೧೦೦ ರವರೆಗಿನ ಕಾಲಮಾನದಲ್ಲಿ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಿಗೆ ಸೀಮಿತವಾದಂತೆ ಜೈನ ಬಸದಿಗಳ ಒಂದು ಸ್ಥೂಲ ಅವಲೋಕನ ಮಾಡುವುದು ಈ ಲೇಖನದ ಮುಖ್ಯ ಉದ್ದೇಶ.

ಗಂಗ ಅಥವಾ ಚೋಳರ ಕಾಲದ ಬಸದಿಗಳಾವುವೆಂದು ಗುರುತಿಸುವುದಕ್ಕೆ ಪೂರ್ವಭಾವಿಯಾಗಿ ಆ ಕಾಲದ ಅಥವಾ ಶೈಲಿಯ ಬಸದಿಗಳ ಮುಖ್ಯ ವಾಸ್ತುಲಕ್ಷಣಗಳನ್ನು ತಿಳಿಯುವುದು ಸೂಕ್ತ ಎನಿಸುತ್ತದೆ. ಏಕೆಂದರೆ ಆ ಕಾಲದ ಅನೇಕ ಬಸದಿಗಳು ಈಗ ಶಿಥಿಲವಾಗಿವೆ ಅಥವಾ ಪುನರ್ನಿರ್ಮಾಣಗೊಂಡಿವೆ. ಮೂಲ ಸ್ಥಿತಿಯ ಎಲ್ಲಾ ಲಕ್ಷಣಗಳನ್ನು ಹಾಗೆಯೇ ಉಳಿಸಿಕೊಂಡು ಈಗಲೂ ಸುಸ್ಥಿತಿಯಲ್ಲಿರುವ ಗಂಗರ ಕಾಲದ ಬಸದಿಗಳು ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಕಂಡುಬರುವುದಿಲ್ಲ. ಅನಂತರದ ಹೊಯ್ಸಳ, ವಿಜಯನಗರ, ಮೈಸೂರು ಒಡೆಯರ ಕಾಲದಲ್ಲಿ, ಗಂಗರ ಕಾಲದ ಅನೇಕ ಬಸದಿಗಳು ದುರಸ್ತಿಯಾದುವು, ಪುನರ್ನಿರ್ಮಾಣಗೊಂಡವು. ಹೀಗಾಗಿ ಮೂಲ ಭಾಗವನ್ನು ತರುವಾಯದ ಸೇರ್ಪಡೆಗಳಿಂದ ಬೇರ್ಪಡಿಸಲು ಗಂಗ ವಾಸ್ತುವಿನ ಲಕ್ಷಣಗಳನ್ನು ಇಲ್ಲಿ ತಿಳಿಯುವುದು ಸೂಕ್ತ.

ಗಂಗರ ಕಾಲದ ಜೈನವಾಸ್ತುವಿನ ಅಧ್ಯಯನ ಮಾಡುವ ಮುಂಚೆ ನಾವು ತಿಳಿಯಬೇಕಾದ ಮುಖ್ಯವಾದ ಒಂದು ಅಂಶವೆಂದರೆ, ಈ ಕಾಲದಲ್ಲಿ ಜೈನವಾಸ್ತುವಿಗೂ ವೈದಿಕ ಧರ್ಮದ ವಾಸ್ತುವಿಗೂ ಯಾವ ರೀತಿ ವ್ಯತ್ಯಾಸವೂ ಇರುತ್ತಿರಲಿಲ್ಲ. ಹಿಂದೂ ದೇವಾಲಯಗಳು ಯಾವ ರೀತಿಯಲ್ಲಿ ತಳವಿನ್ಯಾಸ, ಏರುವಿನ್ಯಾಸ, ಆಲಂಕರಣೆಗಳಿಂದ ಕಂಗೊಳಿಸುತ್ತಿದ್ದವೋ ಅದೇ ರೀತಿಯಲ್ಲಿ ಜೈನ ಬಸದಿಗಳು ಸಹ ನಿರ್ಮಾಣಗೊಳ್ಳುತ್ತಿದ್ದವು. ಕೇವಲ ಶಿಲ್ಪಗಳನ್ನು ಕೂಡಿಸುವ ವಿಧಿ, ವಿಧಾನಗಳಲ್ಲಿ ಮಾತ್ರ ಇವು ಹಿಂದೂ ದೇವಾಲಯಗಳಿಂದ ವಿಭಿನ್ನವಾಗಿರುತ್ತಿದ್ದವು. ಉಳಿದಂತೆ ಎರಡೂ ಧರ್ಮಗಳ ದೇವಾಲಯಗಳು ಒಂದೇ ರೀತಿಯವು ಎನ್ನಬಹುದು. ಅಧಿಷ್ಠಾನ, ಗೋಡೆ, ಕೋಷ್ಠಗಳು, ಗವಾಕ್ಷಗಳು, ದ್ವಾರಬಂಧಗಳು, ಕಪೋತ, ಪ್ರಸ್ತರ , ವಿಮಾನದ ತಲಗಳು, ಸ್ಥಂಭ, ಸ್ಥಂಭಿಕೆಗಳು ಹಾಗೂ ಇತರ ಅಲಂಕಾರಿಕ ವಸ್ತುವಿಷಯಗಳು ಎರಡೂ ಧರ್ಮದ ವಾಸ್ತುಮಾದರಿಗಳು ಒಂದೇ ರೀತಿಯಲ್ಲಿ ಕಂಡುಬರುತ್ತವೆ.

ಗಂಗರ ವಾಸ್ತು ಶಿಲ್ಪದ ಕೆಲವು ವಿಶಿಷ್ಟ ಲಕ್ಷಣಗಳು : ಗಂಗರ ರಾಜ್ಯ ಉತ್ತರದಲ್ಲಿ ಬಾದಾಮಿ ಚಾಳುಕ್ಯರು ಮತ್ತು ರಾಷ್ಟ್ರಕೂಟರು, ಪೂರ್ವದಲ್ಲಿ, ದಕ್ಷಿಣದಲ್ಲಿ ಪಲ್ಲವರು, ಚೋಳರು ಇವರೊಡನೆ ಸಾಮಾನ್ಯವಾದ ಎಲ್ಲೆಗಳನ್ನು ಹೊಂದಿದ್ದರಿಂದ ಈ ಎಲ್ಲಾ ರಾಷ್ಟ್ರ, ರಾಜ್ಯಗಳೊಡನೆ ಸಾಂಸ್ಕೃತಿಕವಾಗಿ ನಿಕಟವಾದ ಸಂಪರ್ಕವನ್ನು ಹೊಂದಿತ್ತು. ಆದ್ದರಿಂದ ಗಂಗರ ವಾಸ್ತುಶಿಲ್ಪದಲ್ಲಿ ಈ ವಿವಿಧ ರಾಜಮನೆತನಗಳು, ರಾಜ್ಯಗಳ, ವಾಸ್ತುಶೈಲಿಯ ಪರಸ್ಪರ ಪ್ರಭಾವ, ಸಮ್ಮಿಳನ, ಪಾರಸ್ಪರ್ಯ ಇತ್ಯಾದಿಗಳನ್ನು ಕಾಣುವುದು ಸಹಜ. ಕೆಲವು ಸಂದರ್ಭಗಳಲ್ಲಿ ಯಾರು ಯಾರ ಮೇಲೆ ಪ್ರಭಾವವನ್ನು ಬೀರಿದ್ದಾರೆ ಎಂದು ಹೇಳುವುದಕ್ಕೆ

ಸಾಕ್ಷ್ಯಾಧಾರಗಳು ಸಾಲದಾಗುತ್ತವೆ. ಇನ್ನು ಕೆಲವು ಸಂದರ್ಭಗಳಲ್ಲಿ ನಿರ್ದಿಷ್ಟವಾದ ಆಧಾರಗಳು, ಸೂಚನೆಗಳು ಕಂಡು ಬಂದು, ಯಾವುದೇ ಒಂದು ವಾಸ್ತು ಅಂಶ, ಅಲಂಕರಣೆ, ಪದ್ಧತಿ ಇಂಥದೇ ಮೂಲದಿಂದ ಬಂದಿದೆ ಎಂದು ಸ್ಪಷ್ಟವಾಗಿ ಹೇಳಬಹುದು. ಆದ್ದರಿಂದ ಇಂತಹ ಸಾಂಸ್ಕೃತಿಕ ವಿಷಯಗಳನ್ನು ಅಧ್ಯಯನ ಮಾಡುವಾಗ ಯಾವುದೇ ಒಂದು ಅಂಶವನ್ನು ಇಂಥದೇ ಮೂಲದಿಂದ ಬಂದಿದೆ ಅಥವಾ ಇಂಥದೇ ಒಂದು ಜನಾಂಗ ಅಥವಾ ಪಂಗಡ ಈ ಅಂಶವನ್ನು ಸೃಷ್ಟಿಸಿತು ಅಥವಾ ನಿರೂಪಿಸಿತು ಎಂದು ಹೇಳುವುದು ಸ್ವಲ್ಪ ಕಷ್ಟಕರವೇ ಆಗಿದೆ.

ಗಂಗರ ದೇವಾಲಯಗಳು ಹೆಚ್ಚಾಗಿ ಕುಳ್ಳಗೆ, ಚಿಕ್ಕದಾಗಿ ಇರುವ ಸರಳವಾದ ಕಟ್ಟಡಗಳು. ಪಾರಂಪರಿಕ ಹಿಂದೂ ವಾಸ್ತು ಪ್ರಾರಂಭದ ಪೂರ್ವದಲ್ಲಿ ಇವು ನಿರ್ಮಾಣವಾಗಿರುವುದರಿಂದ ಇವುಗಳಲ್ಲಿ ಉಪಯೋಗಕ್ಕೆ ಹೆಚ್ಚು ಗಮನ ನೀಡಲಾಗಿದ್ದು, ಥಳಕು ಅಥವಾ ಅಲಂಕರಣೆ ಕಡಿಮೆ ಎನ್ನಬಹುದು.

ತಳವಿನ್ಯಾಸ : ಗಂಗರ ದೇವಾಲಯಗಳಲ್ಲಿ ಸಾಧಾರಣವಾಗಿ ಸಣ್ಣದಾದ, ಚಿಕ್ಕದಾದ ಒಂದು ಗರ್ಭಗೃಹ. ಅಂತರಾಳ, ಗೂಢಮಂಟಪ ಮತ್ತು ಕೆಲವು ಸಂದರ್ಭಗಳಲ್ಲಿ ಅಗ್ರಮಂಟಪ ಮುಂತಾದುವುಗಳನ್ನು ಕಾಣಬಹುದು. ಗಂಗರ ದೇವಾಲಯಗಳು ಸಾಮಾನ್ಯವಾಗಿ ನಿರಂಧರ ರೀತಿಯವು. ಅಂದರೆ ಕಟ್ಟಡದ ಒಳಗಡೆ ಪ್ರದಕ್ಷಿಣ ಪಥವಿರುವುದಿಲ್ಲ . ಗಂಗರ ವಾಸ್ತುವಿನಲ್ಲಿ ಗಜಪೃಷ್ಠಾಕಾರದ ದೇವಾಲಯಗಳು ಕಾಣಬರುವುದಿಲ್ಲ.

ಅಧಿಷ್ಠಾನ : ಸರಳವಾದ ಅಧಿಷ್ಠಾನವನ್ನು ಹೊಂದಿರುವ ಗಂಗರ ದೇವಾಲಯಗಳಲ್ಲಿ ಕಾಣಬರುವ ದಿಂಡುಗಳೆಂದರೆ ಉಪಾನ, ಜಗತಿ, ತ್ರಿಪಟ್ಟಕುಮುದ, ಕಪೋತ ಅಥವಾ ಪಟ್ಟಿಕ ಮತ್ತು ಪ್ರತಿ. ಸುಂದರ ಸೂಕ್ಷ್ಮ ಕೆತ್ತನೆಗಳಿಂದ ಅಲಂಕೃತವಾಗಿರುವ ದಿಂಡುಗಳನ್ನು ವಿರಳವಾಗಿ ಕಾಣಬಹುದು. ಕೆಲವು ಅಧಿಷ್ಠಾನಗಳಲ್ಲಿ ಜಗತಿಯ ಮೇಲ್ಭಾಗ ಸರಳವಾಗಿಯೂ ಕೆಲವು ಸಂದರ್ಭಗಳಲ್ಲಿ ಪದ್ಮದಳಗಳಿಂದ ಅಲಂಕೃತವಾಗಿಯೂ ಕಾಣಬರುತ್ತದೆ. ಕುಮುದ, ಕೆಲವು ಬಾರಿ ದುಂಡಾಗಿಯೂ ಇನ್ನೊಮ್ಮೆ ತ್ರಿಮುಖವಾಗಿಯೂ ಇರುತ್ತದೆ. ಕಪೋತದಲ್ಲಿ ಕೂಡುಗಳು, ಪಟ್ಟಿಕೆಗಳಲ್ಲಿ ಮಕರ : ವ್ಯಾಳದ ಸಾಲುಗಳೂ ಸಹ ಕಾಣಬರುತ್ತವೆ. ಒಟ್ಟನಲ್ಲಿ ಅಧಿಷ್ಠಾನದ ದಿಂಡುಗಳು ಅಲಂಕರಣದಲ್ಲಿ ಮತ್ತು ರೀತಿಯಲ್ಲಿ ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸ ಕಾಣಬರುವುದು.

ಭಿತ್ತಿ : ಗೋಡೆಯ ಭಾಗ ಸಾಮಾನ್ಯವಾಗಿ ಅಲಂಕಾರಿಕ ಕಂಬಗಳಿಂದ ಕೂಡಿರುತ್ತವೆ. ಮಧ್ಯೆ ಮಧ್ಯೆ ದೇವಕೋಷ್ಠಗಳು ಅಥವಾ ಅಲಂಕಾರಿಕ ಕೊಷ್ಠಗಳು ಸಹ ಕೆಲವೊಮ್ಮೆ ಕಾಣುತ್ತವೆ. ಕೋಷ್ಠಗಳ ಮೇಲ್ಭಾಗದಲ್ಲಿ ಕೆಲವು ಸಂದರ್ಭಗಳಲ್ಲಿ ಮಕರ ತೋರಣಗಳು ಅಲಂಕರಣಗಳು ಕಾಣಸಿಗುತ್ತವೆ. ಕೋಷ್ಠಗಳಲ್ಲಿ ಶಿಲ್ಪಗಳಿರಲೇಬೇಕೆಂಬ ನಿಯಮವೇನೂ ಇದ್ದಂತೆ ತೋರುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಮಾತ್ರ ದೇವತೆಗಳ ಅಥವಾ ತೀರ್ಥಂಕರರ ವಿಗ್ರಹಗಳು (ಕಂಬದಹಳ್ಳಿ)ಇರುವ ನಿದರ್ಶನಗಳಿವೆ.

ವಲಭಿ ಅಥವಾ ತೊಲೆ : ಈ ಭಾಗದಲ್ಲಿ ಸಾಮಾನ್ಯವಾಗಿ ಗಂಗರ ದೇವಾಲಯಗಳು ಹಂಸಮಾಲೆ ಅಥವಾ ವ್ಯಾಳಮಾಲೆಯನ್ನು ಹೊಂದಿರುತ್ತವೆ. ಹಂಸದ ಸಾಲು ನೀರಿನಲ್ಲಿ ತೇಲುತ್ತಿರುವಂತೆಯೋ ಅಥವಾ ವ್ಯಾಳಗಳು ಸಾಲಾಗಿ ಚಲಿಸುತ್ತಿರುವಂತೆಯೋ ಅಥವಾ ಕೆಲವು ಸಂದರ್ಭಗಳಲ್ಲಿ ಆನೆಗಳು ಚಲಿಸುತ್ತಿರುವಂತೆಯೇ (ನರಸಮಂಗಲ) ಚಿತ್ರಿಸಿರುತ್ತಾರೆ. ವರುಣದ ದೇವಾಲಯದಲ್ಲಿ ಈ ಭಾಗದಲ್ಲಿ ರಾಮಾಯಣವನ್ನು ನಿರೂಪಿಸುವ ಸುಂದರ ಶಿಲ್ಪಗಳಿವೆ.

ಕಪೋತ : ದ್ರಾವಿಡ ಮಾದರಿಯ ಕಾಲುವೃತ್ತಾಕಾರದ ಕಲ್ಲಿನ ಭಾಗ. ಮೇಲ್ಭಾಗ ಇಳಿಜಾರಾಗಿದ್ದು, ಮುಂಭಾಗದಲ್ಲಿ ನಿರ್ದಿಷ್ಟ ಅಂತರಗಳಲ್ಲಿ ಕೂಡುಗಳನ್ನು ಹೊಂದಿರುತ್ತದೆ. ಕೂಡುಗಳಲ್ಲಿ ವೈವಿಧ್ಯಮಯವಾದ ವಾಸ್ತುವಿನ ನಿರೂಪಣೆಯನ್ನು ಕಾಣಬಹುದು. ಕಪೋತ, ಕೆಲವು ಸಂದರ್ಭಗಳಲ್ಲಿ (ವರುಣ) ಕೆಳಭಾಗದಲ್ಲಿ ಟೊಳ್ಳಾಗಿರುವ ನಿದರ್ಶನವೂ ಉಂಟು.

ಹಾರ : ಕೈಪಿಡಿ ಗೋಡೆ ಅಥವಾ ಹಾರವು ವಿವಿಧಾಕಾರದ ಅಂದರೆ ಶಾಲ, ಕೂಟ, ಪಂಜರ ರೀತಿಯ ಮೇಲ್ಭಾಗವನ್ನು ಹೊಂದಿರುವ ಮಂಡಪಗಳು ವೈವಿಧ್ಯಮಯ ಜೋಡಣೆಯಿಂದ ಅಲಂಕೃತವಾಗಿರುತ್ತವೆ. ಕೆಲವು ಸಂದರ್ಭಗಳಲ್ಲಿ ಹಾರದ ಬದಲಾಗಿ ನೇರವಾಗಿ ಛಾವಣಿಯ ತೊಲೆಗಳು ಮತ್ತು ಚಪ್ಪಡಿಗಳನ್ನು ಕೂರಿಸಿರುತ್ತಾರೆ. ಹಾರದ ಮಂಡಪಗಳಲ್ಲಿ ಶಿಲ್ಪದ ಕೆತ್ತನೆಗಳನ್ನು ಸಹ ಕಾಣಬಹುದು.

ವಿಮಾನ : ಹೆಚ್ಚಿನ ಮಟ್ಟಿನ ಗಂಗರ ವಿಮಾನಗಳು ಏಕ ತಲದವು. ಛಾವಣಿಯ ಮೇಲೆ, ಗ್ರೀವ ಕೋಷ್ಟಗಳು ಮೇಲೆ ನಿಂತಿರುವ ಚೌಕಾಕಾರದ, ಅಷ್ಟಮುಖಿಗಳ ಶಿಖರ ಮತ್ತು ಶಿಖರಗಳು ಹಾಗೂ ಅದರ ಮೇಲೆ ಕಳಶಗಳನ್ನು ಹೊಂದಿರುತ್ತವೆ. ಅನಂತರದ ಕಾಲದ ವಿಮಾನಗಳು ಏಕ, ದ್ವಿ ಮತ್ತು ತ್ರಿತಲಗಳನ್ನು ಹೊಂದಿರುವ ನಿದರ್ಶನವೂ ಉಂಟು. (ನರಸಮಂಗಲ. ಕಂಬದಹಳ್ಳಿ. ಶ್ರವಣಬೆಳಗೊಳ. ಇತ್ಯಾದಿ) ಕೇವಲ ದ್ರಾವಿಡ ರೀತಿಯ ಮೆಟ್ಟಿಲು ಪಿರಮಿಡ್ಡಿನಾಕೃತಿಯ ವಿಮಾನಗಳು ಮಾತ್ರ ಗಂಗರ ವಾಸ್ತುವಿನಲ್ಲಿ ಕಾಣಬರುತ್ತವೆ.

ಬಾಗಿಲುವಾಡಗಳು : ಸಾಮಾನ್ಯವಾಗಿ ಮೂರು ಅಥವಾ ಐದು ಶಾಖೆಗಳನ್ನು ಇವು ಹೊಂದಿರುತ್ತವೆ. ಬಳ್ಳಿಸುರುಳಿಗಳ ಶಾಖೆ, ಪದ್ಮದಳಗಳ ಶಾಖೆ ಇತ್ಯಾದಿಗಳು ಸಾಮಾನ್ಯ. ಪ್ರತೀಹಾರಿಗಳು, ದ್ವಾರಪಾಲಕರುಗಳೂ ಸಹ ದ್ವಾರಬಂಧದ ಬುಡದ ಇಕ್ಕೆಲಗಳಲ್ಲಿ ಕಾಣಬರುತ್ತಾರೆ.

ಜಾಲಂಧ್ರಗಳು : ವಾತಾಯನಗಳು ಅಥವಾ ಜಾಲಂಧ್ರಗಳಲ್ಲಿ ಬಳ್ಳಿಸುರುಳಿಗಳು, ದೇವದೇವತಾ ವಿಗ್ರಹಗಳು, ಅಥವಾ ಜ್ಯಾಮಿತಿಕ ಅಲಂಕರಣ ಮಾದರಿಗಳು ಕಾಣಬರುತ್ತವೆ. ಚಾಳುಕ್ಯರ, ನೊಳಂಬರ ಶೈಲಿಗಳ ಪ್ರಭಾವ ಗಂಗರ ಶೈಲಿಯ ಮೇಲಿತ್ತು ಎಂಬುದನ್ನು ಇವು ನಿರೂಪಿಸುತ್ತವೆ.

ಸ್ಥಂಭಗಳು : ಸ್ಥಂಭಗಳು ಅಥವಾ ಕಂಬಗಳು ಯಾವುದೇ ಒಂದು ಶೈಲಿಯ ಹೆಗ್ಗುರುತುಗಳು. ಹಾಗೆಯೇ ಗಂಗರ ಶೈಲಿಯ ಸ್ಥಂಭಗಳು ಸಹ ಇತರ ಸಮಕಾಲೀನ ಶೈಲಿಯ ಸ್ಥಂಭಗಳಂತೆ ವಿಶಿಷ್ಟವಾದದ್ದು. ಚೌಕಟ್ಟಾದ ಒಂದು ಪೀಠದ ಮೇಲೆ ಅಥವಾ ಪೀಠವಿಲ್ಲದೆ ಇವು ನಿಂತಿರುತ್ತವೆ. ದಿಂಡಿನ ಭಾಗ ಬುಡದಿಂದ ಕ್ರಮೇಣವಾಗಿ ಚೌಕಟ್ಟು, ಉರುಳೆ (ಅಥವಾ ಅಪ್ಟೆ:ಬಹುಮುಖಿ) ಆಗಿದ್ದು ಮೇಲ್ಭಾಗದಲ್ಲಿ ಕುಂಭಾಕೃತಿಯನ್ನು ಹೊಂದಿರುತ್ತವೆ. ದಿಂಡಿನ ಮೇಲ್ಭಾಗದಲ್ಲಿ ದುಂಡಾದ, ದಿಂಬಿನಾಕಾರದ ಬೋದಿಗೆ ಮತ್ತು ಫಲಕವನ್ನು ಹೊಂದಿರುತ್ತವೆ. ಈ ಎಲ್ಲಾ ಅಲಂಕಾರಗಳಿಂದ ಕೂಡಿದ್ದರೂ ಗಂಗರ ಸ್ಥಂಭಗಳು ನಿಲುವಿನಲ್ಲಿ ಬಹಳ ಕುಳ್ಳಾಗಿ ಕಾಣುತ್ತವೆ. ಕೆಲವು ಸಂದರ್ಭಗಳಲ್ಲಿ ದಿಂಡಿನ ಭಾಗವು ಮೇಲಿನಿಂದ ಕೆಳಗಿನವರೆಗೂ ಚಿಕ್ಕ, ಚಿಕ್ಕದಾದ ಉಬ್ಬು ಶಿಲ್ಪಗಳಿಂದ ಆವೃತವಾಗಿರುತ್ತದೆ. (ಆಲೂರು, ಗರ್ಜಿ)

ಶಿಲ್ಪಗಳು : ಗಂಗರ ದೇಗುಲಗಳಲ್ಲಿ ಶಿಲ್ಪಕ್ಕೆ ಪ್ರಾತಿನಿಧ್ಯ ಕಡಿಮೆ ಎನ್ನಬಹುದು. ಕಪೋತದ ಕೆಳಭಾಗದಲ್ಲಿ ತೆಳ್ಳಗೆ ಕೆತ್ತಿರುವ ಹಂಸದಸಾಲು, ಜಾಲಂಧ್ರದಲ್ಲಿ ಕೆಲವೆಡೆ ಶಿಲ್ಪಗಳು, ದೇವಾಲಯದ ಒಳಭಾಗದಲ್ಲಿ ಕೆಲವು ತೆಳುಉಬ್ಬು, ಉಬ್ಬು ಹಾಗೂ ದುಂಡು ಶಿಲ್ಪಗಳು ನಮಗೆ ಅಲ್ಲಲ್ಲಿ ಕಾಣಬರುತ್ತವೆ. ಅಲ್ಲದೆ ಕಂಭಗಳ ಬುಡದಲ್ಲಿ ಚೌಕಟ್ಟಾದ ಕಟ್ಟಿನೊಳಗೆ ಹಾಗೂ ಕಂಬದ ದಿಂಡಿನ ಸುತ್ತಲೂ ಉಬ್ಬು ಶಿಲ್ಪಗಳು ಕಂಡುಬಂದಿವೆ. ನವರಂಗದ ಛಾವಣಿಯ ಮಧ್ಯದ ಅಂಕಣದಲ್ಲಿ ಸಾಮಾನ್ಯವಾಗಿ ಅಷ್ಟದಿಕ್ಪಾಲಕರ ವಿಗ್ರಹಗಳಿದ್ದು, ಶಿವದೇವಾಲಯವಾದರೆ ಅವುಗಳ ಮಧ್ಯದಲ್ಲಿ ನಟರಾಜ ಅಥವಾ ಶಿವಪಾರ್ವತಿಯ ಮೂರ್ತಿಯು, ಜೈನಬಸದಿಯಾದರೆ ಜಿನಬಿಂಬವೂ ಕಾಣಬರುತ್ತದೆ.

ಶಿಲ್ಪಗಳು ತೆಳುಉಬ್ಬು, ದುಂಡು ಇವುಗಳಲ್ಲಿ ಯಾವುದೇ ಆಗಿರಲಿ ಅವು ತಾಳ, ಲಯಬದ್ಧವಾಗಿರುತ್ತವೆ. ಸರಳ ಹಾಗೂ ಭಾವಪೂರ್ಣವಾಗಿದ್ದು ಹೆಚ್ಚು ನೈಜವಾಗಿರುತ್ತವೆ. ಹೆಚ್ಚಿನ ಅಲಂಕರಣೆ ಇಲ್ಲದೆ ಸರಳವಾಗಿದ್ದರೂ ಸುಂದರವಾಗಿರುತ್ತವೆ. ಆಯುಧಗಳನ್ನು ನೈಜ ರೀತಿಯಲ್ಲಿ ಭದ್ರವಾಗಿ ಹಿಡಿದಿರುವಂತೆ ಶಿಲ್ಪಗಳನ್ನು ಕಂಡರಿಸಿರುತ್ತಾರೆ. ಗಂಗರ ಕಾಲದ ಜಿನಮೂರ್ತಿಗಳು, ಯಕ್ಷ- ಯಕ್ಷಿಯರ ಅಷ್ಟದಿಕ್ಪಾಲಕರುಗಳ ಶಿಲ್ಪಗಳು ಅಲ್ಲಲ್ಲಿ ವಿರಳವಾಗಿ ನಮಗೆ ಕಾಣಬರುತ್ತವೆ. ಗಟ್ಟಿಯಾದ ಗ್ರಾನೈಟ್ ಶಿಲೆಯ ಮೇಲೆ ಗಂಗಶಿಲ್ಪಗಳು ಶಿಲ್ಪಗಳನ್ನು ಬಿಡಿಸುತ್ತಿದ್ದುದರಿಂದ ಅವುಗಳಲ್ಲಿ ಸೂಕ್ಷ್ಮ ವಿವರಗಳಿಗೆ ಅವಕಾಶ ಕಡಿಮೆ. ಅದರೂ ಜಿನಬಿಂಬಗಳ ಮುಖಭಾವದಲ್ಲಿ ಶಾಂತತೆ, ಪ್ರಸನ್ನತೆ, ನಿರ್ವಿಣ್ಣ ಮನೋಭಾವ ಇತ್ಯಾದಿ ಭಾವನೆಗಳನ್ನು ಶಿಲ್ಪಿಗಳು ಯಶಸ್ವಿಯಾಗಿ ಕಂಡಿರಿಸಿದ್ದಾರೆ. ಈ ಕಾಲದಲ್ಲಿ ಮೂರ್ತಿಶಿಲ್ಪಕಲೆ ಬಹಳಷ್ಟು ಮುಂದುವರೆದಿತ್ತೆಂಬುದಕ್ಕೆ ಶ್ರವಣಬೆಳಗೊಳದ ಬೃಹದಾಕಾರದ ಬಾಹುಬಲಿಯ ಮುರ್ತಿಯೇ ಸಾಕ್ಷಿ.

ಕಂಚಿನ ವಿಗ್ರಹಗಳ ರಚನೆಯಲ್ಲಿಯೂ ಸಹ ಜೈನಧರ್ಮದ ಕಾಣಿಕೆ ಅಪಾರ. ಕರ್ನಾಟಕದ ಅತ್ಯಂತ ಪ್ರಾಚೀನ ಕಂಚಿನ ಶಿಲ್ಪಗಳಲ್ಲಿ ಜೈನಧರ್ಮದ ಶಿಲ್ಪಗಳೇ ಸಂಖ್ಯೆಯಲ್ಲಿ

ಹೆಚ್ಚು ಎನ್ನುಬಹುದು. ಶ್ರವಣಬೆಳಗೊಳದ ಸುಮಾರು ೯೭೫ರ ಗಂಗ ಮಾರಸಿಂಹನ ಅಕ್ಕ ಕುಂದಣ-ಸೋಮಿದೇವಿ ಮಾಡಿಸಿಕೊಟ್ಟಂತಹ ಕಂಚಿನ ಜಿನಮೂರ್ತಿ ಸುಂದರವಾದ, ಆಕರ್ಷಕವಾದ ವಿಗ್ರಹ. ಗುಂಡ್ಲುಪೇಟೆಯ ಬಳಿ ದೊರೆತ, ಈಗ ಶ್ರೀರಂಗಪಟ್ಟಣದ ಬಸದಿಯಲ್ಲಿರುವ ಕ್ರಿ. ಶ ೧೧ನೆಯ ಶತಮಾನದ ಒಂದು ಜಿನಮೂರ್ತಿಯು ಸಹ ಸುಂದರ, ಸರಳ, ಸ್ವಾಭಿಮಾನದ ಲಕ್ಷಣಗಳುಳ್ಳ ಈ ಕಾಲದ ಒಂದು ಉತ್ತಮ ಉದಾಹರಣೆಯಾಗಿದೆ.

ಗಂಗ, ಚೋಳರ ಕಾಲದ ಬಸದಿಗಳು ಮೈಸೂರು ಜಿಲ್ಲೆಯಲ್ಲಿ ಬಹಳ ವಿರಳ. ಅವು ಸಹ ಈಗ ಬಹಳ ದುಸ್ಥಿತಿಯಲ್ಲಿವೆ. ಅಲ್ಲದೆ ಅವುಗಳ ವಿವರಗಳೂ ಸಹ ಸಮರ್ಪಕವಾಗಿ ಪ್ರಕಟಗೊಂಡಿಲ್ಲವಾದ ಕಾರಣ ಈ ಕಾಲದ ಜೈನ ಬಸದಿಗಳ ಒಂದು ಸಮಗ್ರ ಚಿತ್ರಣ ನೀಡುವುದು ಕಷ್ಟದ ಸಂಗತಿ. ಈ ವಿಷಯವಾಗಿಯೇ ಒಂದು ಪ್ರತ್ಯೇಕವಾದ ಕ್ಷೇತ್ರಕಾರ್ಯ ಕೈಗೊಂಡಲ್ಲಿ ಇವುಗಳ ಬಗ್ಗೆ ಒಂದು ಸಮಗ್ರವಾದ ಕೈಪಿಡಿಯನ್ನು ರಚಿಸಬಹುದು.

ಆದ್ದರಿಂದ ಈ ಲೇಖನದಲ್ಲಿ ಇನ್ನು ಮುಂದೆ ಶಾಸನಾಧಾರಗಳ ಮೂಲಕ ನಮಗೆ ಕಾಣಬರುವ ಜೈನಬಸದಿಗಳನ್ನು ಗಮನದಲ್ಲಿಟ್ಟುಕೊಂಡು, ಅವನ್ನು ಪಟ್ಟಿಮಾಡಿ, ಈ ಕಾಲದ ಮಿತಿಯಲ್ಲಿ ಬರುವ ಯಾವ ಯಾವ ಬಸದಿಗಳಿಗೆ ವಿವರಗಳು ದೊರಕುತ್ತವೆಯೋ ಅಂತಹ ವಿವರಗಳನ್ನು ಅಲ್ಲಲ್ಲೆ ಕೂಡಿಸಿ ಹೇಳಲಾಗಿದೆ.

ವಿಜಯ ಪಾರ್ಶ್ವನಾಥಬಸದಿ - ತಲಕಾಡು : ತಲಕಾಡಿನ ಮರಳು ದಿಬ್ಬದಲ್ಲಿ ಕೀರ್ತಿನಾರಾಯಣ ದೇವಾಲಯದ ವಾಯುವ್ಯ ದಿಕ್ಕಿನಲ್ಲಿ ಇತ್ತೀಚೆಗೆ ಗಂಗರ ಕಾಲದ ಇಟ್ಟಿಗೆಯ ಬಸದಿಯ ಅಧಿಷ್ಠಾನದ ಭಾಗವನ್ನು ಉತ್ಖನನ ಮುಖಾಂತರ ಕಂಡುಹಿಡಿಯಲಾಗಿತು.[೧] ಕ್ರಿ.ಶ ೭-೮ನೆಯ ಶತಮಾನಗಳಿಗೆ ಸೇರಿಸಬಹುದಾದ ಈ ಇಟ್ಟಿಗೆಯ ಬಸದಿಯ ತಳವಿನ್ಯಾಸದಲ್ಲಿ ಸಾಲಾದ ಮೂರು ಗರ್ಭಗೃಹಗಳು ಮುಂಬಾಗದಲ್ಲಿ ಕೈಸಾಲೆ ಮತ್ತು ಅದರ ಮುಂದುಗಡೆ ಪ್ರತ್ಯೇಕವಾದ ಒಂದು ಮಂಟಪ ಇದ್ದವು . ಕ್ರಿ.ಶ. ೧೧ನೆಯ ಶತಮಾನದಲ್ಲಿ ಈ ಬಸದಿಯನ್ನು ವಿಸ್ತರಿಸಲಾಯಿತು. ಗರ್ಭಗೃಹದ ಸುತ್ತಲೂ ಪ್ರದಕ್ಷಿಣಾ ಪಥವನ್ನು ನಿರ್ಮಿಸಿ ಮುಂಭಾಗದಲ್ಲಿದ್ದ ಮಂಡಪವನ್ನು ಸಹ ಸುತ್ತಲೂ ವಿಸ್ತರಿಸಲಾಯಿತು. ಈ ವಿಸ್ತರಿಸಲ್ಪಟ್ಟ ಬಸದಿಗೆ ಸಾಲಂಕೃತವಾದ ಕಲ್ಲಿನ ಅಧಿಷ್ಠಾನ, ಇಟ್ಟಿಗೆಯ ಭಿತ್ತಿ ಮತ್ತು ಮೇಲ್ಭಾಗಗಳು ಇದ್ದವು. ಕಾರಣಾಂತರಗಳಿಂದ ಈ ಬಸದಿ ಶಿಥಿಲಗೊಂಡು ಕ್ರಮೇಣ ಸಂಪೂರ್ಣವಾಗಿ ನಾಶವಾಯಿತು. ತಲಕಾಡಿನಲ್ಲಿ ಮರಳು ಶೇಖರವಾಗಲು ಪ್ರಾರಂಭವಾದ ಮೇಲೆ ಪ್ರಾಯಶಃ ಶಿಥಿಲವಾಗಿದ್ದ ಈ ಬಸದಿಯನ್ನು ಸಂಪೂರ್ಣವಾಗಿ ನಾಶಮಾಡಿ ಅಲ್ಲಿದ್ದ ಕಲ್ಲು ಹಾಗೂ ಇತರೆ ಸಾಮಾಗ್ರಿಗಳನ್ನು ಬೇರೆ ಉದ್ದೇಶಗಳಿಗಾಗಿ ಬಳಸಿಕೊಳ್ಳಲಾಯಿತು. ಈ ಉತ್ಖನನದಲ್ಲಿ ದೊರೆತ ಬಸದಿಯ ವಿವರವಾದ ಉಲ್ಲೇಖಗಳು ಈಗಾಗಲೇ ಪ್ರಕಟವಾಗಿರುವುದರಿಂದ ಇದರ ಬಗ್ಗೆ ಈ ಲೇಖನದಲ್ಲಿ ಹೆಚ್ಚಿನ ವಿವರಗಳನ್ನು ನೀಡಿಲ್ಲ.[೨] ಇದಲ್ಲದೆ ತಲಕಾಡಿನ ಉತ್ಖನನದ ಬಗ್ಗೆ ಸಮಗ್ರವಾದ ವರದಿ ಈಗಾಗಲೇ ಪ್ರಕಟವಾಗಿದೆ.[೩]

ತಲಕಾಡಿನಲ್ಲಿ ಒಂದು ದೊಡ್ಡದಾದ ವಿಜಯ ಜಿನಾಲಯವೆಂಬ ಜೈನ ಬಸದಿ ಇತ್ತೆಂದು ಗಂಗ ಅವನೀತನ ಮಡಕೇರಿ ತಾಮ್ರಪಟಗಳಿಂದ ತಿಳಿದು ಬರುತ್ತದೆ.[೪] ಪ್ರಾಯಶಃ ಮೇಲೆ ಹೇಳಿರುವ ಪಾರ್ಶ್ವನಾಥ ಬಸದಿಯೇ ಈ ವಿಜಯ ಜಿನಾಲಯವಾಗಿತ್ತೆಂದು ಹೇಳಬಹುದು. ಈ ಶಾಸನದ ಪ್ರಕಾರ ಅಕಾಲವರ್ಷನ ಮಂತ್ರಿ ಕಟ್ಟಿಸಿದ ತಲಕಾಡಿನ ವಿಜಯ ಜಿನಾಲಯಕ್ಕೆ, ಅವನೀತನ ಬದನಗುಪ್ಪೆ ಎಂಬ ಗ್ರಾಮವನ್ನು ದಾನ ಮಾಡಿದನು. ಕೊಂಡುಕುಂದಾನ್ವಯದ ದೇಸಿಗಣದ ಮುನಿ ಗುಣನಂದಿ ಭಟಾರರ ಶಿಷ್ಯ ಚಂದ್ರನಂದಿ ಭಟಾರರಿಗೆ ಈ ದಾನವನ್ನು ನೀಡಲಾಯಿತೆಂದು ತಿಳಿದುಬರುತ್ತದೆ.

ವಿಜಾಪುರ : ವಿಜಯಪುರ : ತಲಕಾಡಿಗೆ ಸುಮಾರು ೮ ಕಿ.ಮೀ. ದೂರದಲ್ಲಿರುವ ಈ ಊರಿನಲ್ಲಿ ಪಾಳುಕೋಟೆಯ ನಿವೇಶನದಲ್ಲಿ ಎರಡು ತೀರ್ಥಂಕರರ ವಿಗ್ರಹಗಳು ದೊರೆತಿವೆ. ಒಂದು ಬಿಳೀ ಗ್ರಾನೈಟಿನದು ಮತ್ತೊಂದು ಕರೀಕಲ್ಲಿನದು. ಮೊದಲನೆಯದು ೪ ಅಡಿ ಎತ್ತರವಿದ್ದು ಸಿಂಹ ಪೀಠದ ಮೇಲೆ ಧ್ಯಾನಮುದ್ರೆಯಲ್ಲಿ ಕುಳಿತಿರುವ ವರ್ಧಮಾನನದು. ಶೈಲಿಯ ಆಧಾರದ ಮೇಲೆ ಈ ಶಿಲ್ಪವನ್ನು ಸುಮಾರು ೭-೮ ಶತಮಾನಗಳಿಗೆ ಸೇರಿಸಬಹುದು.[೫] ಪ್ರಸ್ತುತ ಈ ಶಿಲ್ಪ ಕರ್ನಾಟಕ ಪುರಾತತ್ವ ಇಲಾಖೆ, ಅರಮನೆ ಆವರಣ, ಮೈಸೂರು ಇಲ್ಲಿ ಸಂರಕ್ಷಿಸಲ್ಪಟ್ಟಿದೆ.

ಬಸ್ತಿಪುರ : ಕೊಳ್ಳೆಗಾಲದಿಂದ ಸುಮಾರು ೨-೩ ಕಿ.ಮೀ. ದೂರದಲ್ಲಿರುವ ಈ ಹಳ್ಳಿಯಲ್ಲಿ ಕೆಲವು ಜೈನ ಶಾಸನಗಳು ಕಂಡುಬಂದಿದೆ.[೬] ಊರಿನ ಆಚೆ ಬೃಹತ್ತಾದ ಕಲ್ಲುಮೊರಡಿಯೊಂದರ ಮೇಲೆ ಸುಮಾರು ೪ ಅಡಿ ಎತ್ತರದ ಇಟ್ಟಿಗೆ, ಮಣ್ಣು ಇತ್ಯಾದಿ ಮಿಶ್ರಿತ ಗುಡ್ಡೆಯ ರಾಶಿಯ ಅಡಿಯಲ್ಲಿ, ಪಾದಮುದ್ರಿಕೆ ಮತ್ತು ಸುತ್ತಲಿನ ಶಾಸನ ಹಾಗೂ ಇನ್ನು ಅನೇಕ ಶಾಸನಗಳು ಇದ್ದವು. ಈಗ ಅವೆಲ್ಲವೂ ಸಂಪೂರ್ಣವಾಗಿ ನಾಶವಾಗಿ ಹೋಗಿವೆ. ಇಲ್ಲಿಯ ಅವಶೇಷಗಳಿಂದ ಹಾಗೂ ಈ ಸ್ಥಳದ ಹೆಸರಿನಿಂದಾಗಿ ಇಲ್ಲಿ ಒಂದು ಪ್ರಾಚೀನ ಬಸದಿ ಇತ್ತೆಂದು ಊಹಿಸಬಹುದು.

ಇಲ್ಲಿ ದೊರೆತ ಪಾದಮುದ್ರಿಕೆಯ ಸುತ್ತಲೂ "ಭಟಾರರ ಶ್ರೀ ಪಾದಕ್ಕೆ ಪಾನದಗೊರವೆನಯವರ" ಎಂಬ ಶಾಸನವಿದೆ. ೮ ನೆಯ ಶತಮಾನದ ಲಿಪಿಯ ಈ ಶಾಸನದ ಮುನಿಯನ್ನು ಅದೇ ಕಾಲದ ಶ್ರವಣಬೆಳಗೊಳದ ಶಾಸನದಲ್ಲಿ ಉಕ್ತವಾಗಿರುವ ಪಾನದ ಭಟ್ಟಾರಕರೊಂದಿಗೆ ಡಾ. ಎಂ.ಎಸ್. ಕೃಷ್ಣಮೂರ್ತಿಯವರು ಸಮೀಕರಿಸಿದ್ದಾರೆ.

ಶಿವಾಲಯ ಬಸದಿ - ಮೂಗುರು : ಮೂಗೂರು ಅಥವಾ ಮೊಗಲ್ಲೂರು ತಿ. ನರಸೀಪುರದಿಂದ ಸುಮಾರು ೧೧ ಕಿ.ಮೀ. ದೂರದಲ್ಲಿದೆ. ಗಂಗ ಶಾಸನದಲ್ಲಿ[೭] ಉಕ್ತವಾದ ಶಿವಾಲಯ ಬಸದಿ ಪ್ರಾಯಶಃ ಇಲ್ಲಿಯ ಬಸದಿಯೇ ಇರಬೇಕೆಂದು ಅಭಿಮತ. ಇದು ಇಮ್ಮಡಿ ಬೂತುಗನ ಕಾಲದ ಬಸದಿ (೯೩೫-೬೦). ವಿಶಾಲವಾದ ಗರ್ಭಗೃಹ, ಚಿಕ್ಕದಾಗಿ, ಉದ್ದವಾದ ಅಂತರಾಳ ಮತ್ತು ಒಂದು ಮಹಾಮಂಟಪ ಇವಿಷ್ಟು ಇವೆ. ಮಹಾಮಂಟಪವು ಹಳೇ ಅಧಿಷ್ಠಾನದ ಮೇಲೆ, ಹೊಯ್ಸಳರ ಮತ್ತು ಅನಂತರದ ಕಾಲದಲ್ಲಿ ಪುನರ್ನಿರ್ಮಾಣವಾಗಿದೆ ಎನ್ನಬಹುದು.

ಕಕ್ಷಾಸನ, ಕಟಾಂಜನ ಇತ್ಯಾದಿ ಹೊಯ್ಸಳ ಶೈಲಿಯವು. ಮುಂಭಾಗದಲ್ಲಿ ಒಂದು ಅಗ್ರಮಂಟಪವನ್ನು ಸೇರಿಸಲಾಗಿದೆ.

ಇಲ್ಲಿಯ ಕಂಬಗಳು ಗಂಗಶೈಲಿಯವು. ಚೌಕಕಾರದ ತಳಭಾಗ, ಅಷ್ಟಮುಖಿ ಮತ್ತು ದುಂಡಾದ ದಿಂಡು, ಮಧ್ಯದಲ್ಲಿ ಪದ್ಮಬಂಧ, ಸರಳವಾದ ಕಳಶ, ತಡಿ, ಕುಂಭ (ದಿಂಬಿನಾಕಾರದ) ಮತ್ತು ಅಗಲವಾದ ಫಲಕ ಮತ್ತು ಚಾಚು ಪೀಠ ಇವಿಷ್ಟೂ ಇವೆ. ಅಧಿಷ್ಠಾನದಲ್ಲಿ (ಪ್ರತಿಬಂಧ ವಿಧ) ವೈದಿಕ ರೀತಿಯಂತೆ ಪ್ರನಾಳವನ್ನು ಉಪಾನದ ಮೂಲಕ ತರಲಾಗಿದೆ. ಈ ಬಸದಿಗೆ ಅನಂತರದ ಕಾಲಗಳಲ್ಲೂ ಅನೇಕ ದುರಸ್ತಿ ಕಾರ್ಯವನ್ನು ಮಾಡಲಾಯಿತು. ಪಾರ್ಶ್ವನಾಥ ಮತ್ತು ಆದಿನಾಥರ ವಿಗ್ರಹಗಳನ್ನು ಸೇರಿಸಲಾಯಿತು.

ಇಲ್ಲಿಯ ೧೧ನೇ ಶತಮಾನದ ಶಾಸನದಲ್ಲಿ ಮೂಗೂರಿನ ಸಿವಲಯ್ಯನ (ಶಿವಾಲಯ)ಬಸದಿಯ ತೊಯ್ಯಬ್ಬೆಯ ಶಿಷ್ಯಳಾದ ಅಮಿಬ್ಬೆತನ್ತಿಯು ದೈವಾದೀನಳಾದಳೆಂದು ಹೇಳಿದೆ. ಅಲ್ಲಿಯ ಪಾರ್ಶ್ವನಾಥ ಬಸ್ತಿಯ ಪಾಣಿಪೀಠದ ಶಾಸನವೊಂದು ಜಾಕಿಯಬ್ಬೆಯ ಮಗಳು (೧೧ನೇ ಶ. ಲಿಪಿ ಹೆಸರು ಅಳಿಸಿಹೋಗಿದೆ) (ಸ್ತ್ರೀಯೊಬ್ಬಳು) ಈ ವಿಗ್ರಹವನ್ನು ಮಾಡಿಸಿದಳೆಂದು ಹೇಳುತ್ತದೆ.[೮]

ಆದೀಶ್ವರ ಸ್ವಾಮಿ ಬಸದಿ - ಚಿಕ್ಕ ಹನಸೋಗೆ : ಇಲ್ಲಿಯ ಆದೀಶ್ವರಸ್ವಾಮಿ ಜಿನಾಲಯವನ್ನು ವೀರರಾಜೇಂದ್ರ ಚೆಂಗಾಳ್ವನು (೧೧ ನೆಯ ಶತಮಾನದಲ್ಲಿ) ಕಟ್ಟಿಸಿದನು.[೯] ತ್ರಿಕೂಟಾಚಲವಾದ ಈ ಬಸದಿಯಲ್ಲಿ ಮೂರು ಗರ್ಭಗೃಹಗಳು ಇದ್ದು ಮಧ್ಯದಲ್ಲಿ ಆದಿನಾಥ,ಬಲಗಡೆ ನೇಮಿನಾಥ, ಎಡಗಡೆ ಶಾಂತಿನಾಥನ ವಿಗ್ರಹಗಳಿವೆ. ಎಲ್ಲ ಗರ್ಭಗೃಹಗಳಿಗೂ ಸೇರಿದಂತೆ ಮಧ್ಯದಲ್ಲಿ ಒಂದು ನವರಂಗವಿದೆ. ನವರಂಗದ ಕಂಬಗಳು ಹೊಯ್ಸಳ ಶೈಲಿಯವು. (ಶಾಂತಿನಾಥ ಗರ್ಭಗೃಹದ ತೊಲೆಯ ಮೇಲಿನ) ೧೧ನೆಯ ಶತಮಾನದ ಒಂದು ಶಾಸನದಿಂದ ಪ್ರಖ್ಯಾತ ಜೈನಮುನಿ ಜಯಕೀರ್ತಿ ಇಲ್ಲಿಯ ಮುಖ್ಯಸ್ಥನಾಗಿದ್ದನೆಂದು, ಅಲ್ಲದೆ ಆತನು ಹನಸೋಗೆಯ ೬೪ ಬಸದಿಗಳಿಗೂ ಮತ್ತು ತಲಕಾವೇರಿಯ ಎಲ್ಲಾ ಬಸದಿಗಳಿಗೂ ಮುಖ್ಯಸ್ಥನಾಗಿದ್ದನೆಂದು ತಿಳಿಸುತ್ತದೆ.

ಅಲ್ಲಿಯ ಸ್ಥಳಪುರಾಣದ ಪ್ರಕಾರ ಹನಸೋಗೆಯ ಬಸದಿಗಳು ಇಕ್ಷ್ವಾಕುವಂಶದ ಶ್ರೀರಾಮನಿಂದ ನಿರ್ಮಿತವಾದದ್ದೆಂದು, ಗಂಗರು ಅವನ್ನು ಪ್ರತಿಪಾಲಿಸಿದರೆಂದೂ ಚೆಂಗಾಳ್ವ ರಾಜೇಂದ್ರ ಚೋಳನು ಮತ್ತು ನನ್ನಿ ಚೆಂಗಾಳ್ವನು ಅವನ್ನು ದುರಸ್ತಿ ಮಾಡಿಸಿದನೆಂದು ತಿಳಿಯುತ್ತದೆ. ಅಲ್ಲಿಯ ಗದ್ದೆಬಸವನ ಗುಡಿಯ ಗೋಡೆಯಲ್ಲಿ ಚೂರು, ಚೂರಾಗಿ ಸಿಗುವ (೧೦ ನೆಯ ಶತಮಾನದ) ಶಾಸನವೊಂದರಿಂದ ಜೈನಮುನಿ ಏಳಾಚಾರ್ಯನು ಇಲ್ಲಿ ಸಮಾಧಿ ಮರಣವನ್ನು ಹೊಂದಿದನೆಂದು ತಿಳಿದು ಬರುತ್ತದೆ.

ಸರ್ವಲೋಕಾಶ್ರಯ ಬಸದಿ (ಚಂದ್ರನಾಥ ಬಸದಿ) - ಕೆಲಸೂರು : ಗುಂಡ್ಲುಪೇಟೆಯಿಂದ ೮ ಕಿ.ಮೀ. ದೂರದಲ್ಲಿರುವ ಕೆಲಸೂರಿನಲ್ಲಿ ಸರ್ವಲೋಕಾಶ್ರ ಬಸದಿ ಇದೆ.[೧೦] ೧೨ನೇ ಶತಮಾನದ ತಮಿಳು ಶಾಸನವೊಂದರಿಂದ ಚೋಳಗಂಗದೇವನ ಕಾಲದಲ್ಲಿ (ಒಂದನೇ ರಾಜೇಂದ್ರ ಚೋಳ) ಈ ಬಸದಿಗೆ ಭೂಮಿ ಮತ್ತು ಎಣ್ಣೆಯ ಗಾಣವನ್ನು ದಾನಮಾಡಿದ ವಿವರವನ್ನು ತಿಳಿಸುತ್ತದೆ. ಬಸದಿಯ ತಳಪಾದಿ ಕಲ್ಲಿನ ಮೇಲಿನ ಮತ್ತೊಂದು ಶಾಸನ ಚೋಳಗಂಗದೇವನ ೧೧ನೆಯ ವರ್ಷದಂದು ಕೆಲಸೂರಿನ ಬಸದಿಗೆ ನೀಡಿದ ಕೆಲವು ದಾನಗಳನ್ನು ತಿಳಿಸುತ್ತದೆ. ಇದರಿಂದಾಗಿ ಈ ಬಸದಿಯು ಒಂದನೇ ರಾಜೇಂದ್ರ ಚೋಳನ ಕಾಲಕ್ಕೆ ಅಥವಾ ಅದಕ್ಕಿಂತ ಮುಂಚೆ ನಿರ್ಮಿತವಾಗಿರಬೇಕು. ಹೊಯ್ಸಳರ ಕಾಲದಲ್ಲಿಯೂ ಸಹ ಈ ಬಸದಿಗೆ ಅನೇಕ ದಾನಗಳು ಕೊಡಲ್ಪಟ್ಟವು. ಬಸದಿಯ ಗರ್ಭಗೃಹ, ಅರ್ಧಮಂಡಪ ಮತ್ತು ನವರಂಗ ಇವು ಮೂರು ಮೂಲ ರೀತಿಯದೆಂದೇ ತೋರುತ್ತದೆ. ನವರಂಗದ ಕಂಬಗಳು ಚೋಳ ಶೈಲಿಯ ದುಂಡಾದ, ಕುಳ್ಳಾದ ಕಂಬಗಳು. ಬ್ರಹ್ಮ, ಕೂಷ್ಮಾಂಡಿನಿ ಮತ್ತು ಪದ್ಮಾವತಿಯರ ಸಣ್ಣ ವಿಗ್ರಹಗಳು ಇಲ್ಲಿವೆ.

ಪರಮೇಶ್ವರ ಚೈತ್ಯಾಲಯ - ಹುಲ್ಲಹಳ್ಳಿ : ಇಲ್ಲಿ ದೊರೆತಿರುವ ಒಂದು ಶಾಸನದಿಂದ[೧೧] ಮಾಚಿರಾಜ ಮತ್ತು ಮಾಲಾಂಭಿಕಾ ದಂಪತಿಗಳ ಮಗನಾದ ಪರ್ಮಿದೇವರಸನು ತೃಣಪುರಿಯಲ್ಲಿ (ಹುಲ್ಲಹಳ್ಳಿ) ತ್ರಿಜಗನ್ಮಂಜಲವೆಂಬ ಬಸದಿಯನ್ನು ಕಟ್ಟಿಸಿದನು ಅಲ್ಲದೆ ಪರಮೇಶ್ವರ ಚೈತ್ಯಾಲಯವೆಂಬ ಹಳೆಯ ಬಸದಿಯನ್ನು ಮತ್ತೆ ನವೀಕರಿಸಿದನು ಎಂದು ತಿಳಿದು ಬರುತ್ತದೆ. ಈ ಪರಮೇಶ್ವರ ಚೈತ್ಯಾಲಯ ಪ್ರಾಯಶಃ ಗಂಗ - ಚೋಳ ಕಾಲದ್ದಿರಬಹುದು. ಅನೇಕ ಶತಮಾನಗಳ ಕಾಲದಿಂದಾಗಿ ಶಿಥಿಲವಾಗಿದ್ದಿರಬಹುದು. ಈಗ ಅದರ ಸುಳಿವು ಸಹ ಇಲ್ಲ. ಈ ಮೇಲೆ ಹೇಳಿದ ಶಾಸನವು ಶಕ ೧೨೭೪, ೧೨೭೮, ೧೩೯೦ ಮತ್ತು ೧೩೯೪ ಈ ಕಾಲಗಳನ್ನು ಹೊಂದಿದೆ.

ಆದಿನಾಥ ಬಸದಿ - ಕುದೇರು : ಕುದೇರು ಚಾಮರಾಜನಗರ ತಾಲ್ಲೂಕು ಯಳಂದೂರಿನಿಂದ ಸುಮಾರು ೧೦ ಕಿ.ಮೀ.ಯ ದೂರದಲ್ಲಿದೆ.[೧೨] ಕುಡಿಹೇರು ಅಗ್ರಹಾರ. ಎಂದು ಶಾಸನದಲ್ಲಿ ಉಲ್ಲೇಖವಾಗಿದೆ. ಇಲ್ಲಿಯ ಆದಿನಾಥ ಬಸದಿ ಪ್ರಾಯಶಃ ಗಂಗರ ನಿರ್ಮಾಣವಿರಬೇಕು. ಚಿಕ್ಕದಾದ ಬಸದಿಯಲ್ಲಿ ಸುಮಾರು ೧/೨ ಮೀಟರ್ ಎತ್ತರದ ಆದಿನಾಥನ ವಿಗ್ರಹವಿದೆ. ಸಣ್ಣದಾದ ನವರಂಗದಲ್ಲಿ ಕುಳ್ಳಾದ, ದುಂಡಾದ ಗಂಗರ ಶೈಲಿಯ ಕಂಬಗಳಿವೆ.

ಪಾರ್ಶ್ವನಾಥ ಬಸದಿ - ಮಲೆಯೂರು : ಈ ಬಸದಿಯು ಗರ್ಭಗೃಹ, ಅರ್ಧಮಂಡಪ, ನವರಂಗಗಳನ್ನು ಹೊಂದಿದೆ. ನವರಂಗದ ಕಂಬಗಳು ಕುಳ್ಳಾಗಿ ಗುಂಡಾಗಿವೆ. ಮತ್ತೊಂದು ಹೊಯ್ಸಳರ ಕಾಲದ ನವರಂಗವೂ ಸೇರಿಸಲ್ಪಟ್ಟಿದೆ. ವಿಜಯನಗರದ ಕಾಲದಲ್ಲಿ ಮುಖಮಂಟಪವನ್ನು ಸೇರಿಸಲಾಗಿದೆ. ೫೦ ಸೆಂಟಿಮೀಟರ್ ಎತ್ತರದ ಪಾರ್ಶ್ವನಾಥನ ವಿಗ್ರಹ ಗರ್ಭಗೃಹದಲ್ಲಿದ್ದು ಗಂಗಶಿಲ್ಪದ ಲಕ್ಷಣಗಳನ್ನು ಹೊಂದಿದೆ. ಬಸ್ತಿಯಿಂದ ಉತ್ತರಕ್ಕೆ ಸ್ವಲ್ಪ

ದೂರದಲ್ಲಿ ಪೂಜ್ಯಪಾದ ಮುನಿಯ ಸಮಾಧಿ ಇದೆ. ಅನೇಕ ನಿಶಿಧಿಗಳೂ, ತೀರ್ಥಂಕರರ ವಿಗ್ರಹಗಳೂ ಇಲ್ಲಿಯ ಬೆಟ್ಟದಲ್ಲಿ ಸಿಗುತ್ತವೆ. ಇಲ್ಲಿ ಮತ್ತೊಂದು ಗಂಗರ ದೇವಾಲಯವು (ಚಂದ್ರಮೌಳೀಶ್ವರ) ಇದೆ.[೧೩]

ಆದಿನಾಥ ಬಸದಿ - ತಗಡೂರು : ಬಸದಿಯು ಗರ್ಭಗೃಹ, ಅರ್ಧಮಂಟಪ, ನವರಂಗ ಮುಖಮಂಟಪ ಇವಿಷ್ಟನ್ನು ಹೊಂದಿದೆ. ಯಕ್ಷಯಕ್ಷಿಯರನ್ನು ಹೊಂದಿರುವ ಇಲ್ಲಿಯು ಆದಿನಾಥನ ಮೂರ್ತಿ ಸುಂದರ ಶಿಲ್ಪ ಪ್ರಾಯಶಃ ಗಂಗರ ಕಾಲದ್ದಿರಬಹುದು.[೧೪]

ಪಾರ್ಶ್ವನಾಥ ಬಸದಿ - ನಗರ್ಲೆ : ನಂಜನಗೂಡಿನಿಂದ ಸುಮಾರು ೧೫ ಕಿ.ಮೀ. ಅಗ್ನೇಯದಲ್ಲಿರುವ ಗ್ರಾಮ. ಜೀರ್ಣಾವಸ್ಥೆಯಲ್ಲಿರುವ ಪಾರ್ಶ್ವನಾಥ ಬಸದಿಯೊಂದು ಇಲ್ಲಿದೆ. ಪ್ರಾಯಶಃ ಸುಮಾರು ೫ ಅಡಿ ಎತ್ತರದ ಈ ಶಿಲ್ಪಕ್ಕೆ ೭ ಹೆಡೆ ಸರ್ಪದ ಪ್ರಭಾವಳಿ ಇದೆ.

ಬದನಾಳು : ನಂಜನಗೂಡಿನಿಂದ ೫ ಕಿ.ಮೀ. ಆಗ್ನೇಯದಲ್ಲಿರುವ ಗ್ರಾಮ. ೩½ ಅಡಿ ಎತ್ತರದ ಜಿನಮೂರ್ತಿಯೊಂದು ಇಲ್ಲಿ ದೊರೆತಿದೆ. ಮುಕ್ಕೊಡೆಯನ್ನೂ ಚಾಮರಧಾರಿಗಳನ್ನೂ ಹೊಂದಿರುವ ಈ ಮೂರ್ತಿಗೆ ಸುಂದರ ಪ್ರಭಾವಳಿಯು ಇದೆ.

ಆದಿನಾಥ ಬಸದಿ - ಕಣೆನೂರು : ಕ್ರಿ.ಶ. ೧೩೩೭ರ ಇಲ್ಲಿಯ ಒಂದು ಶಾಸನವು ಕಣೆನೂರಿನಲ್ಲಿ ಹಿಂದೆ ಘಟಾಂತಕದೇವಿ(ಅತ್ತಿಮಬ್ಬೆ?) ನಿರ್ಮಿಸಿದ್ದ ಆದಿನಾಥಸ್ವಾಮಿ ಬಸದಿಗೆ ಅನಂತರದಲ್ಲಿ ಕೆಲವು ದಾನಗಳನ್ನು ನೀಡಲಾಯಿತು ಎಂದು ತಿಳಿಸುತ್ತದೆ.[೧೫] ಆದರೆ ಈ ಬಸದಿ ೧೩೩೭ಕ್ಕಿಂತ ಎಷ್ಟು ಹಳೆಯದು ಎಂಬ ವಿವರ ತಿಳಿಯಲು ಸಾಧ್ಯವಾಗಿಲ್ಲ.

ಪಾರ್ಶ್ವನಾಥ ಬಸದಿ - ಕಿತ್ತೂರು : ಕಿತ್ತೂರು ಹೆಗ್ಗಡದೇವನ ಕೋಟೆಯ ತಾಲ್ಲೂಕಿನಲ್ಲಿದೆ. ಇದರ ಪ್ರಾಚೀನ ನಾಮ ಕೀರ್ತಿಪುರ. ಈಗ ಇದು ಮುಳುಗಡೆಯಾಗಿದೆ. ಇಲ್ಲಿಯ ಪಾರ್ಶ್ವನಾಥ ಬಸದಿಯ ಮೂಲದೇವರ ಪೀಠದ ಮೇಲೆ ಬಹಳ ಸವೆದಿರುವ ೧೨ನೇ ಶತಮಾನದ ಲಿಪಿಯಲ್ಲಿ ಬರೆದಿರುವ ಶಾಸನವೊಂದಿದೆ.[೧೬] ಇದರಿಂದ ಈ ಬಸದಿ ಮತ್ತು ವಿಜಯ ಪಾರ್ಶ್ವನಾಥನ ಮೂಲವಿಗ್ರಹ ಇವೆರಡು ಆ ಕಾಲದ್ದೆಂದು ತಿಳಿದುಬರುತ್ತದೆ.

ಕಂಚಿನ ಶಿಲ್ಪಗಳು - ಹಂಗಳ : ಗುಂಡ್ಲುಪೇಟೆ ತಾಲೂಕಿನ ಹಂಗಳದಲ್ಲಿ ಈಚೆಗೆ ಕ್ರಿ. ಶ. ೧೧ನೆಯ ಶತಮಾನದ ಲಿಪಿಯ ಶಾಸನವನ್ನು ಹೊಂದಿರುವ ಚವ್ವೀಸ ತೀರ್ಥಂಕರರ ಕಂಚಿನ ವಿಗ್ರಹಗಳು, ದೀಪಸ್ತಂಭಗಳು ಮತ್ತು ಪೀಠಗಳು ದೊರೆತವು. ಅವುಗಳ ಮೇಲೆ ಅವುಗಳ ಒಡತಿ ಚಿಕ್ಕಜೋಗಬ್ಬೆಯ ಹೆಸರು ಲಿಖಿತವಾಗಿದೆ. ಅವಳು ದಾಮಣನ್ನಿ ಭಟ್ಟಾರರ ಗುಡ್ಡಿ (ಶಿಷ್ಯೆ) ಆಗಿದ್ದಳು. ಆಕೆಯ ತಾಯಿ ಮಾಕಣಬ್ಬೆಕನ್ತಿ ಎಂದು ಈ ಶಾಸನಗಳಿಂದ ತಿಳಿದುಬರುತ್ತದೆ.[೧೭]

ಮೇಲೆ ನೀಡಿರುವ ಸ್ಥೂಲವಾದ ಚಿತ್ರಣದಿಂದ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಅನಾದಿಕಾಲದಿಂದ ಹೊಯ್ಸಳರ ಕಾಲದವರೆಗೂ ಜೈನಧರ್ಮವು ರಾಜ ಪೋಷಣೆಯಿಂದ ಸಂಪತ್ಸಂವೃದ್ಧವಾಗಿ ಬೆಳೆದು ನಿಂತಿತ್ತು. ಶಾಸನಾಧಾರಗಳಿಂದ ಹಾಗೂ ವಾಸ್ತು ಮತ್ತು ಶಿಲ್ಪದ ಆಧಾರಗಳಿಂದ ಈ ಜಿಲ್ಲೆಗಳ ಬಹುತೇಕ ಭಾಗಗಳು ಜೈನಬಸದಿಗಳಿಂದ ಕಂಗೊಳಿಸುತ್ತಿತ್ತು ಎಂದು ಸ್ಪಷ್ಟವಾಗುತ್ತದೆ. ಮೇಲೆ ಹೇಳಿದಂತಹ ಸ್ಥಳಗಳಲ್ಲದೆ ಇನ್ನೂ ಅನೇಕ ಸಣ್ಣಪುಟ್ಟ ಸ್ಥಳಗಳಲ್ಲಿ ಜೈನ ವಾಸ್ತು ಮತ್ತು ಶಿಲ್ಪದ ಅವಶೇಷಗಳು ಕಂಡುಬರುತ್ತವೆ. ಉದಾಹರಣೆಗೆ ಮೈಸೂರಿನಿಂದ ಸುಮಾರು ೭ ಕಿ.ಮೀ. ದೂರದಲ್ಲಿರುವ ವರುಣ ಗ್ರಾಮ. ಹೊಯ್ಸಳ ಕಾಲದ ಜೈನಮೂರ್ತಿಗಳು ಇಲ್ಲಿ ಕಂಡು ಬಂದಿದ್ದು ಇದಕ್ಕಿಂತ ಮುಂಚಿತವಾಗಿ ಇಲ್ಲಿ ಜೈನಧರ್ಮ ನೆಲೆಸಿತ್ತು ಎಂಬುದನ್ನು ಸೂಚಿಸುತ್ತದೆ. ಹೀಗೆ ಇನ್ನೂ ಅನೇಕ ಸ್ಥಳಗಳಲ್ಲಿ ಶಾಸನಾಧಾರವಿಲ್ಲದ ಭಗ್ನ ಜಿನ ಅವಶೇಷಗಳು ಕಂಡುಬಂದಿವೆ. ಇವುಗಳೆಲ್ಲವನ್ನೂ ಪಟ್ಟಿಮಾಡಿ ಕೂಲಂಕಷವಾಗಿ ಅಧ್ಯಯನ ಮಾಡಿದಲ್ಲಿ ಕ್ರಿ.ಶ. ದ ಮೊದಲನೆಯ ಸಹಸ್ರಮಾನದಲ್ಲಿ ಕರ್ನಾಟಕದಲ್ಲಿ ದಕ್ಷಿಣ ತುದಿಯಲ್ಲಿ ಜೈನಧರ್ಮಕ್ಕೆ ಇದ್ದ ಪೋಷಣೆ, ಸ್ಥಾನಮಾನಗಳ ಸಮಗ್ರ ಚಿತ್ರಣ ದೊರಕುವುದರಲ್ಲಿ ಸಂದೇಹವಿಲ್ಲ.

ಟಿಪ್ಪಣಿಗಳು

೧. ತಲಕಾಡು ಉತ್ಖನನ, ೧೯೯೨ - ೯೩, ಸಂಪುಟ - ೧, ಡಾ. ಎಂ.ಎಸ್. ಕೃಷ್ಣಮೂರ್ತಿ, ಪುಟ : ೭೧ - ೮೨, ಕರ್ನಾಟಕ ಪುರಾತತ್ವ ಇಲಾಖೆ, ಮೈಸೂರು, ೧೯೯೬.

೨. ಹೆಚ್ಚಿನ ವಿವರಗಳು ನೋಡಿ : ಇತಿಹಾಸ ದರ್ಶನ, ಸಂಪುಟ - ೯, ಪುಟ : ೧೧ ರಿಂದ ೧೪, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ೧೯೯೪.

೩. ವಿವರಗಳಿಗೆ ನೋಡಿ : ತಲಕಾಡು ಉತ್ಖನನ, ಸಂಪುಟ - ೧, ಕರ್ನಾಟಕ ಪುರಾತತ್ವ ಇಲಾಖೆ, ೧೯೯೬, ಡಾ. ಎಂ. ಎಸ್. ಕೃಷ್ಣಮೂರ್ತಿ, ಪುಟ : ೭೧ - ೮೨.

೪. ಎ. ಕ. ಸಂಪುಟ - ೧, ಶಾಸನ ಸಂಖ್ಯೆ : ೧.

೫. ಶರ್ಮಾ, ಐ. ಕೆ., ಪುಟ : ೧೬೯.

೬. ವಿವರಗಳಿಗೆ ನೋಡಿ : ಕೃಷ್ಣಮೂರ್ತಿ, ಎಂ.ಎಸ್. ಆರ್ಕಿಯಲಾಜಿಕಲ್ ಸ್ಟಡೀಸ್, ಸಂಪುಟ - ೬, ಪುಟ : ೫೪ - ೫೬.

೭. ಎಪಿಗ್ರಾಫಿಯ ಕರ್ನಾಟಕ, ಸಂಪುಟ - ೫, ತೀ. ನಂ. ೨೭೦.

೮. ಎಪಿಗ್ರಾಫಿಯ ಕರ್ನಾಟಕ, ಸಂಪುಟ - ೫, ತೀ.ನಂ. ೨೮೦.

೯. ಕರ್ನಾಟಕ ಗೆಜಿಟಿಯರ್,ಮೈಸೂರು ಜಿಲ್ಲೆ, ಪುಟ : ೮೪೫.

೧೦. ಎಪಿಗ್ರಾಫಿಯ ಕರ್ನಾಟಕ, ಸಂಪುಟ - ೩, ಗುಂಡ್ಲುಪೇಟೆ, ಪುಟ : ೧೦೦ - ೧೦೩.

೧೧. ಎ.ಕ. ಸಂಪುಟ - ೩ ನಂಜನಗೂಡು, ಪುಟ : ೧೩೭.

೧೨. ಕರ್ನಾಟಕ ಗೆಜಿಟಿಯರ್, ಮೈಸೂರು ಜಿಲ್ಲೆ, ಕುದೇರು, ಪುಟ : ೮೭೪ - ೭೫.

೧೩. ಕರ್ನಾಟಕ ಗೆಜಿಟಿಯರ್, ಮೈಸೂರು ಜಿಲ್ಲೆ, ಪುಟ : ೮೭೮ - ೭೯.

೧೪. ಕರ್ನಾಟಕ ಗೆಜಿಟಿಯರ್, ಮೈಸೂರು ಜಿಲ್ಲೆ, ತಗಡೂರು, ಪುಟ : ೯೨೦.

೧೫. ಎಪಿಗ್ರಾಫಿಯ ಕರ್ನಾಟಕ, ಸಂಪುಟ - ೩, ನಂಜನಗೂಡು, ಪುಟ : ೧೪೬.

೧೬. ಎಪಿಗ್ರಾಫಿಯ ಕರ್ನಾಟಕ, ಸಂಪುಟ - ೩, ಹೆಗ್ಗಡದೇವನಕೋಟೆ, ಪುಟ : ೧೩೧.

೧೭. ಮೈಸೂರು ಆರ್ಕಿಯಲಾಜಿಕಲ್ ಡಿಪಾರ್ಟ್‌ಮೆಂಟ್, ಆ್ಯನ್ಯೂಯಲ್ ರಿಪೋರ್ಟ್, ೧೯೫೬ - ೭೨, ಪುಟ : ೩೩.

ಕನ್ನಡ ವೃತ್ತಪತ್ರಿಕೆಗಳಲ್ಲಿ ಭಾಷೆಯ ಬಳಕೆ

ಡಾ. ಎಲ್. ಮಂಜುಳಾಕ್ಷಿ

ಕನ್ನಡ ಪತ್ರಿಕಾ ಪ್ರಪಂಚದಲ್ಲಿ ಬಳಸುವ ಭಾಷೆ ಕನ್ನಡವೇ ಆದರೂ ಅದರಲ್ಲಿ ಬಳಸುವ ಶೈಲಿ ಪತ್ರಿಕೆಯಿಂದ ಪತ್ರಿಕೆಗೆ ಭಿನ್ನವಾಗಿರುತ್ತದೆ, ಇದಕ್ಕೆ ಕಾರಣ ಈ ಕೆಳಗಿನವುಗಳು:

೧. ಆ ಪತ್ರಿಕೆಯ ವರಿದಿಗಾರನ/ಸಂಪಾದಕನ ಓದಿನ ಜ್ಞಾನ ವಿಸ್ತಾರತೆ, ಅಭಿವ್ಯಕ್ತಿಯ ವಿಧಾನ, ಗ್ರಹಿಕೆ ಮುಂತಾದವುಗಳಿಂದ

೨. ಪತ್ರಿಕೆಯ ಓದುಗರು ಅಪೇಕ್ಷಿಸುವ ಭಾಷೆ ಅವರಿಗೆ ಅರ್ಥವಾಗುವಂತಹ ಶೈಲಿಯಲ್ಲಿರಬೇಕಾದುದರಿಂದ

೩. ಪತ್ರಿಕೆಯು ಪ್ರಾದೇಶಿಕವಾಗಿದ್ದರೆ ಅದಕ್ಕೆ ತಕ್ಕಂತೆ / ಪತ್ರಿಕೆಯ ಪರಿಸರ ಭಾಷೆಯ ಶೈಲಿಯನ್ನು ರೂಢಿಸಿಕೊಂಡು ಬರೆಯುಬೇಕಾಗಿರುವುದರಿಂದ.

ಇಂತಹ ಸಂದರ್ಭದಲ್ಲಿ ಕನ್ನಡ ಪತ್ರಿಕೆಯು ೧೮೪೩ರಲ್ಲಿ ಮಂಗಳೂರು ಸಮಾಚಾರ(ಕನ್ನಡ ಮೊದಲ ಪತ್ರಿಕೆ) ಜನ್ಮ ತಳೆದು ಅನೇಕ ಮೂಲಭೂತ ಬದಲಾವಣೆಗಳನ್ನು ಹೊಂದತ್ತ ತನ್ನ ಬೆಳವಣಿಗೆಗೆ ಪೂರಕವಾಗಿ ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುತ್ತಾ ಕನ್ನಡ ವೃತ್ತ ಪತ್ರಿಕೆಯ ಗುರಿ ಮತ್ತು ಸಾಧನೆಗಳನ್ನು ಅಂಗೀಕರಿಸುತ್ತಾ ಮುಂದೆ ಸಾಗುತ್ತಿದೆ. ಈ ನಿಟ್ಟಿನಲ್ಲಿ ಕನ್ನಡ ವೃತ್ತ ಪತ್ರಿಕೆಯ ಭಾಷೆಯ ಬಳಕೆ ಹಲವು ಸೊಗಡು, ವ್ಯಂಗ್ಯ, ಮೊನಚುಗಳಿಂದ ಕೂಡಿದೆ. ಕರ್ನಾಟಕದಲ್ಲಿ ವಿವಿಧ ವಿಷಯಗಳನ್ನು ಕುರಿತಂತೆ ಈವರೆಗೆ ಸುಮಾರು ೫೦೦ಕ್ಕೂ ಹೆಚ್ಚು ಪತ್ರಿಕೆಗಳು ದಿನಪತ್ರಿಕೆಗಳಾಗಿ, ವಾರ, ಮಾಸ, ದ್ವೈಮಾಸಿಕ, ತ್ರೈಮಾಸಿಕ, ವಾರ್ಷಿಕವಾಗಿ ಕಾಣಿಸಿಕೊಳ್ಳುತ್ತಿವೆ. ಇದರಲ್ಲಿ ಎಲ್ಲವೂ ಪ್ರಬುದ್ಧವಾದ ಭಾಷೆಯನ್ನು ಬಳಸುತ್ತಿವೆ ಎಂದೇನಲ್ಲ. ಆದರೆ ಪತ್ರಿಕೆಯ ಮುಖ್ಯ ಗುರಿಯನ್ನು ಕೆಲವಾದರೂ ಪಾಲಿಸುತ್ತಿವೆ ಎಂದು ಒಪ್ಪಿಕೊಳ್ಳಬಹುದು. ಒಂದು ಪತ್ರಿಕೆ ಎಂದ ಮೇಲೆ ಪತ್ರಿಕೆಯ ಎಲ್ಲಾ ವಿಭಾಗಗಳನ್ನು ಒಂದು ಕಾಲಮಿತಿಯೊಳಗೆ ಸುಸ್ಥಿತಿ ಮತ್ತು ಸಮರ್ಪಕವಾಗಿ ಸಜ್ಜುಗೊಳಿಸಬೇಕಾಗುತ್ತದೆ. ಅದು ತಲೆಬರಹವಿರಬಹುದು, ಉಪಶೀರ್ಷಿಕೆಯಿರಬಹುದು, ಕಾಲಂ ಇರಬಹುದು, ಅಥವಾ ಮುಖ್ಯ ಸುದ್ದಿ ಇರಬಹುದು. ಆದರೆ ಭಾಷೆಯ ಬಳಕೆಯು ಓದುಗನಿಗೆ ತಿಳಿಯುವಂತಿರಬೇಕು. ಆದ್ದರಿಂದ ಪತ್ರಿಕೆಗಳಲ್ಲಿ ಭಾಷೆಯ ಬಗ್ಗೆ ವಿಶೇಷ ಕಾಳಜಿ

ಇದೆ. ಸಾಮಾನ್ಯವಾಗಿ ವ್ಯಾಕರಣ/ಛಂದೋ ಬದ್ಧವಾದ ಭಾಷೆಯು ಕೇವಲ ಕೆಲವು ವರ್ಗದ ಓದುಗರಿಗೆ ಮಾತ್ರ.

ಉಳಿದ ಶ್ರೀಸಾಮಾನ್ಯರು ನವಸಾಕ್ಷರರು ವಿದ್ಯಾರ್ಥಿಗಳಿಗೆ ಅರ್ಥವಾಗುವ ಪರಿಹೇಗೆ?

ಈ ನಿಟ್ಟಿನಲ್ಲಿ ಕರ್ನಾಟಕದ ಉನ್ನತ ಮಟ್ಟದ ದಿನಪತ್ರಿಕೆಗಳಾದ ಪ್ರಜಾವಾಣಿ, ಕನ್ನಡಪ್ರಭ, ವಿಜಯಕರ್ನಾಟಕ, ಸಂಯುಕ್ತಕರ್ನಾಟಕ, ಉದಯವಾಣಿ ಪತ್ರಿಕೆಗಳು ಒಂದೊಂದು ಪ್ರಾದೇಶಿಕ ಪತ್ರಿಕೆಗಳೆಂದು ಅವು ಬಳಸುವ ಭಾಷೆಯಿಂದ ಹಿಂದೆ ತಿಳಿಯುತ್ತಿದ್ದರು. ಪ್ರಜಾವಾಣಿ, ಕನ್ನಡ ಪ್ರಭ ಹಳೆ ಮೈಸೂರು ಪ್ರಾಂತ್ಯವನ್ನು ಪ್ರತಿನಿಧಿಸಿದರೆ, ಉದಯವಾಣಿ, ಜನವಾಹಿನಿ, ದಕ್ಷಿಣಕನ್ನಡವನ್ನು ಪ್ರತಿನಿಧಿಸುತ್ತವೆ. ಇನ್ನು ಸಂಯುಕ್ತ ಕರ್ನಾಟಕ, ವಿಜಯ ಕರ್ನಾಟಕ ಉತ್ತರ ಕರ್ನಾಟಕವನ್ನು ಪ್ರತಿನಿಧಿಸುವನ ಪತ್ರಿಕೆಗಳಾಗಿವೆ. ಈ ಪ್ರತಿನಿಧಿತ್ವವನ್ನು ನಿರ್ಧರಿಸುವ ಹಿಂದೆ ಆಯಾ ಪತ್ರಿಕೆಗಳ ಪ್ರಾಂತ್ಯವಾರು ಭಾಷೆಯ ಬಳಕೆ ಮತ್ತು ಮಾಲೀಕತ್ವ ಮುಖ್ಯವಾಗುತ್ತದೆ. ಉದಾಹಾರಣೆಗೆ ಸಂಯುಕ್ತ ಕರ್ನಾಟಕ ದಿನಪತ್ರಿಕೆಯ ಪ್ರಾರಂಭದಲ್ಲಿ ಧಾರವಾಡದಿಂದ ಹೊರುಡುತ್ತಿತ್ತು. ಆದರಲ್ಲಿ ಉತ್ತರ ಕರ್ನಾಟಕದ ಭಾಷಾ ಶೈಲಿ ಬಳಕೆಯಲ್ಲಿತ್ತು.

ಇನ್ನು ಲಂಕೇಶ್ ಪತ್ರಿಕೆಯ ಬಂ., ಗುಂ., ಶೈಲಿಯ ತಲೆ ಬರಹಗಳು ೮೦ರ ದಶಕದ ರಾಜಕೀಯ ಮುಂದಾಳತ್ವ ವಹಿಸಿದ ಬಂಗಾರಪ್ಪ ಮತ್ತು ಗುಂಡೂರಾಯರ ಬಗ್ಗೆ ಬರೆದಂತಹ ಮೊನಚು ಬರಹಗಳಾದರೂ ಭಾಷೆಯ ಕ್ರೀಯಾಶೀಲತೆಯನ್ನು ಉಳಿಸಿಕೊಂಡಿದ್ದವು. ೭೦ರ ದಶಕದಲ್ಲಿ ಪ್ರಜಾಮತ ವಾರಪತ್ರಿಕೆಯಲ್ಲಿ ಬರುತ್ತಿದ್ದಂಥಹ ತೀಕ್ಷ್ಣ ಲೇಖನಗಳು ಕೆಟ್ಟ ರಾಜಕೀಯ ಹಿತಾಸಕ್ತಿಗಳನ್ನು ಬುಡಮೇಲು ಮಾಡುವಂತಿದ್ದವು. ಭಾಷೆಯ ಸದ್ಬಳಕೆಯ ಬಗ್ಗೆ ಟಿ.ಎಸ್.ಆರ್. ಎಂದೇ ಗುರುತಿಸಿಕೊಂಡ ಟಿ.ಎಸ್. ರಾಮಚಂದ್ರ ರಾವ್ ಅವರ 'ಛೂ ಬಾಣ' ಅಂಕಣಬರಹ ಪ್ರಜಾವಾಣಿಗೆ ವಿಶೇಷ ಮೆರಗನ್ನು, ಗೌರವವನ್ನು ತಂದುಕೊಟ್ಟಿತು. ಈ ಮಾದರಿಯ ಒಂದು ಭಾಷಾ ಬಳಕೆಯನ್ನು ಪ್ರಜಾವಾಣಿಯ ದಿನಾಂಕ ೧೮ ಮಾರ್ಚ ೨೦೦೩ರ ಸಂಪಾದಕೀಯವನ್ನು ಗಮನಿಸೋಣ.

"ಚಿಪ್ಪುಮಂದಿ"

"ಮೆದುಳಿನ ಹಿಪ್ಪೋಕಂಪಸ್ ಎಂಬ ಭಾಗದ ಬದಲಿಗೆ ಅಳವಡಿಸುವ ಸಿಲಕಾನ್ ಚಿಪ್ ಅನ್ನು ಕ್ಯಾಲಿಫೋರ್ನಿಯಾದ ವಿಜ್ಞಾನಿಗಳು ಆವಿಷ್ಕರಿಸಿದ್ದಾರಂತೆ, ತಲೆಚಿಪ್ಪಿನೊಳಗಣ ಮೆದುಳಿನಲ್ಲಿ ಈ ಚಿಪ್ ಅನ್ನು ಅಳವಡಿಸಿಕೊಂಡರೆ ಜ್ಞಾಪಕಶಕ್ತಿ, ಜಾಗೃತಿಗಳನ್ನು ಕಳೆದುಕೊಂಡು ಬೆಪ್ಪು ಬಡಿದಂತಿರುವ ವ್ಯಕ್ತಿಗಳೂ ಒಪ್ಪವಾಗುತ್ತಾರಂತೆ, ಅಂತೂ ಈ ಚಿಪ್, ಬೆಪ್ಪರ ಕೈಯಲ್ಲಿ ಚಿಪ್ಪು ಹಿಡಿಸಲು ಕಾಯುತ್ತಿದ್ದವರನ್ನು ಗಪ್‌ಚಿಪ್ ಮಾಡಲೇ ಬಂದಿದೆ ಎನ್ನಿ. ತಲೆಯ ಮೇಲೊಂದು ಮಾಮೂಲಿ ಮೂಳೆ ಚಿಪ್ಪು, ಅದರೊಳಗೊಂದು ಸಿಲಿಕಾನ್

ಚಿಪ್ ಇಟ್ಟಿಕೊಂಡಿರುವವರನ್ನು 'ಚಿಪ್ಪುಮಂದಿ' ಎನ್ನಬಹುದೇನೊ...ಸಿಟ್ಟು ಬಂದಾಗ 'ಚಿಪ್ಪುಹಂದಿ' ಎಂದು ಬಯ್ಯಲೂಬಹುದೂ. ಯಾರೊಂದಿಗೂ ಹೆಚ್ಚು ಬೆರೆಯದೆ, ಚಿಪ್‌ನಲ್ಲಿ ತೂರಿಕೊಂಡ ಆಮೆಯಂತೆ ಚುಪ್ ಇರುತ್ತಿದ್ದ ಮಂದಿಯೆಲ್ಲ ಚಿಪ್ ಪ್ರಭಾವದಿಂದ ಎಲ್ಲರೊಡನೆ ಗಪ್ಪಾ ಹೊಡೆಯಲು ಮುಂದಾಗುವ ಸಾಧ್ಯತೆಯೂ ಇಲ್ಲದಿಲ್ಲ. ಏಕೆಂದರೆ ಈ ಚಿಪ್ ಮನಸ್ಥಿತಿಯನ್ನೂ ನಿಯಂತ್ರಿಸುತ್ತದಂತೆ. ಅಂದ ಮೇಲೆ ಸಪ್ಪೆ ಮನದಲ್ಲಿ ನಗು, ಖುಷಿ ಸಹ ಅರಳಬಹುದು. ಅಂಥಾ ಖುಷಿಗೆ ಏನನ್ನೋಣ ? ಚಿಪ್ (ತ್) ಆನಂದ!"

ಇಲ್ಲಿ ತಲೆಬರಹದಿಂದ ಹಿಡಿದು ಇಲ್ಲಿರುವ ಲೇಖನವೆಲ್ಲ ಹೊಸ ವಸ್ತುವೊಂದರ ಆವಿಷ್ಕಾರದ ಜೊತೆಗೆ ಅದರ ಏನೆಲ್ಲಾ ಸಾಧ್ಯತೆಗಳನ್ನು ವ್ಯಂಗ್ಯ ಮತ್ತು ತೀಕ್ಷ್ಣವಾಗಿ ಬಳಸಿರುವುದನ್ನು, ಭಾಷೆಯ ಬಳಕೆಗೆ ಒಂದು ಒಳ್ಳೆಯ ಉದಾಹರಣೆಯಾಗಿ ನೋಡಬಹುದು. ನವೆಂಬರ್ ೨೫, ೧೯೯೯ ಜನವಾಹಿನಿ ಕನ್ನಡ ದಿನಪತ್ರಿಕೆಯಲ್ಲಿ ಪ್ರಕಟವಾದ ಈ ವರದಿಯನ್ನು ಗಮನಿಸಿ :

"ತುಘಲಕ್"ದರ್ಬಾರಿನ ಬಲಿಪಶು

"ಎಲ್ಲಕ್ಕಿಂತ ಹೆಚ್ಚು ದಿಗಿಲು ಹುಟ್ಟಿಸುವಂಥದ್ದು ನಾನಿರಬೇಕು ಇಲ್ಲ ಅವನಿರಬೇಕು ಎನ್ನುವ ಒತ್ತಡ ತಂತ್ರ. ಈ ಬಗ್ಗೆ ನೀವೆಲ್ಲ ಯೋಚನೆ ಮಾಡಲೇ ಬೇಕು. ಯಾಕೆಂದರೆ ಮೇಲಿನ ವಾದ ಎಲ್ಲಿಯವರೆಗೆ ಮುಂದುವರಿಯಬಹುದು ಎನ್ನುವುದನ್ನು ಹೇಳಲಿಕ್ಕಾಗದು ಇದನ್ನು ತಡೆಯದಿದ್ದರೆ ಅದು ನಿಮ್ಮೆಲ್ಲರ ಎದುರು ಬರುವಂಥದ್ದೇ...

೧೯೮೭ ಸೆಪ್ಟಂಬರ್ ೪ ರಂದು ಕರ್ನಾಟಕ ರಾಜ್ಯ ರೈತ ಸಂಘದ ಕಾರ್ಯದರ್ಶಿ ಹಾಗೂ ಪ್ರಮುಖ ನೇತಾರರಲ್ಲಿ ಒಬ್ಬರಾಗಿದ್ದ ಹಾಸನದ ಮಂಜುನಾಥ ದತ್ತ ಅವರು ರಾಜ್ಯ ಸಮಿತಿ ಸದಸ್ಯರಿಗೆ ಬರೆದ ಪತ್ರದಲ್ಲಿ ಕೆಲವು ಸಾಲುಗಳು ಇವು..."

ಈ ತಲೆಬರಹದ ಭಾಷೆಯ ಬಳಕೆಯನ್ನು ಗಮನಿಸುವುದಾದರೆ, ತುಘಲಕ್ ಇತಿಹಾಸ ಕಂಡ ಒಬ್ಬ ಹೈಲು ದೊರೆ, ಇಲ್ಲಿ ವರದಿಗಾರ, ರಾಜ್ಯ ರೈತ ಸಮಿತಿಯ ಕಾರ್ಯದರ್ಶಿ ಮಂಜುನಾಥ ದತ್ತ ಅವರ ಏಕಾಏಕಿ ಉಚ್ಚಾಟನೆಯನ್ನು ತುಘಲಕ್ ದರ್ಬಾರಿನ ಬಲಿಪಶು ಎಂದು ಐತಿಹಾಸಿಕ ವ್ಯಕ್ತಿಯೊಬ್ಬನ ಮನಸ್ಥಿತಿಯೊಡನೆ ಸಮೀಕರಿಸಿರುವುದು ಹಾಗೂ ಮಂಜುನಾಥ್ ದತ್ತ ಅವರು, ರಾಜ್ಯ ಸಮಿತಿಗೆ ಬರೆದ ಪತ್ರದ ಸಾಲುಗಳನ್ನು ಮೊದಲ ವಾಕ್ಯಗಳಲ್ಲೇ ನೀಡಿರುವುದು ಭಾಷಾ ಬಳಕೆಯ ಚಾತುರ್ಯದ ಒಂದು ತುಣುಕು.

ಹಾಗೆಯೇ ಡಿಸೆಂಬರ್ ೨೧, ೨೦೦೦ ಜನವಾಹಿನಿ ಪತ್ರಿಕೆಯಲ್ಲಿಯೇ ಬಂದಂತಹ ತಲೆಬರಹ

"ನಂಗ ಕಾಡು.... ನಂಗ ಹಾಡಿ... ನಂಗವೇ ಆಳಾಕು..."

ಇದು ಜೇನು ಕುರುಬರ ಮಾತು. ಆ ಲೇಖನದ ತಲೆಬರಹ ಕೂಡ. ಈ ತಲೆಬರಹದ ಭಾಷೆ ಜೇನುಕುರುಬರದ್ದಾದರೂ, ಕಾಡಿನ ಭಾಷೆಯನ್ನು ಇಲ್ಲಿ ಬಳಸಿರುವುದು ಜೇನು ಕುರುಬರ ಆಶಯ ನೋವು ಎಲ್ಲವನ್ನೂ ತಲೆಬರಹದ ಅಡಿಯೇ ತರುವ ವರದಿಗಾರನ ಭಾಷಾ ಮೋಡಿ ಅದ್ಭುತವಾದದ್ದಾಗಿದೆ. ಆಡು ಭಾಷೆಯ ಸಹಜತೆ ಎದ್ದು ಕಂಡು, ಕಾಡಿನ ಮಕ್ಕಳ ನೋವು ನಲಿವಿನ ಪ್ರತಿಧ್ವನಿಯಂತಿದೆ.

"ಮಾಡು ಇಲ್ಲ ಮಡಿ" ಸಮರಕ್ಕೆ ಭಾರತದ ಪಣ

ಈ ತಲೆಬರಹದ ಲೇಖನ ಕನ್ನಡ ಪ್ರಭ ದಿನಪತ್ರಿಕೆ ಮಾರ್ಚ್ ೧೦, ೨೦೦೩ನೆಯ ತಾರೀಖಿನಂದು ಬಂದಂತಹ ಲೇಖನ. ಈ ತಲೆಬರಹ ಭಾರತ ಮತ್ತು ಶ್ರೀಲಂಕಾ ಕ್ರಿಕೆಟ್ ತಂಡ 2003 ವಿಶ್ವಕಪ್ ಸೂಪರ್ ಲೀಗ್‌ನ ಪಂದ್ಯನಡೆಯುವ ದಿನದಂದು ಬಂದಂತದ್ದು. ಜಾಗತಿಕ ಸಂದರ್ಭದಲ್ಲಿ ಕ್ರೀಡೆಯನ್ನು ಶಾಂತಿ, ಸೌಹಾರ್ದತೆಯನ್ನು ಬೆಸೆಯಲು ದೇಶ, ದೇಶದ ನಡುವೆ ಸಾಮರಸ್ಯವನ್ನು ಮುನ್ನಡೆಸಿಕೊಂಡು ಹೋಗಲು ಬೆಂಬಲಿಸುತ್ತಿದ್ದೇವೆ. ಆದರಿಂದಾಗಿಯೇ ನಾವು ಒಂದು ದೇಶದ ಕ್ರೀಡಾ ನೀತಿಯನ್ನು ಜಾಗರೂಕವಾಗಿ ನಡೆಸಿಕೊಂಡು ಬರುವ ಅಗತ್ಯವಿದೆ. ಈ ನಿಟ್ಟಿನಲ್ಲಿ, ಒಂದು ದೇಶದ ಕ್ರೀಡಾ ತಂಡವು ಮತ್ತೊಂದು ದೇಶದ ಕ್ರೀಡಾ ತಂಡದ ಜೊತೆ ಕ್ರೀಡೆಯಾಡುವ ಪರಿಪಾಠವಿದೆ. ಜಾಗತಿಕ ಸಂದರ್ಭದಲ್ಲಿ ಪ್ರತಿಯೊಂದು ದೇಶವು ಮಾಡುತ್ತಿರುವುದು ಇದನ್ನೇ. ಆದರೆ ಈ ಮೇಲಿನ ತಲೆಬರಹದ ಭಾಷೆ ಕ್ರೀಡೆಯದ್ದಾದರೂ ಯುದ್ಧೋತ್ತರ ಭಾಷೆಯಂತೆ 'ಮಾಡು ಇಲ್ಲವೆ ಮಡಿ' ಎಂಬಂಥಹ ಹೋರಾಟದ ಭಾವನೆಗಳ ಶೈಲಿಯಲ್ಲಿದೆ. ಒಂದು ಪಕ್ಷ ಈ ಪಂದ್ಯದಲ್ಲಿ ಭಾರತ ಇನ್ನೊಂದು ದೇಶವಾದ ಶ್ರೀಲಂಕಾದೊಡನೆ ಸೋತರೆ ಭಾರತ ಮಡಿಯುವುದೇ.....? ಖಂಡಿತ ಇಲ್ಲ ! ಆದರೆ ಕ್ರೀಡಾ ವಿಷಯಗಳನ್ನು ವರಿದಿಗಾರ ವರ್ಣಿಸುತ್ತಾ ಅತಿರಂಜಕ ಪದಗಳನ್ನು ತುಂಬಿ ಕ್ರೀಡಾಸಕ್ತರ ಓದುವ ದಾಹವನ್ನು ತಣಿಸುವ ಪರಿ ಈ ನಮ್ಮ ಪತ್ರಿಕೆಯ ತಲೆಬರಹದ್ದಾದರೆ, ಇಲ್ಲಿನ ಭಾಷೆಯ ಬಳಕೆ ಒಂದು ಕ್ರೀಡಾ ವರ್ಗಕ್ಕೊಸ್ಕರ ಮೂಲ ಕ್ರೀಡಾ ಉದ್ದೇಶವನ್ನು ಉದ್ದೀಪನಗೊಳಿಸಿ ಭಾವನಾತ್ಮಕವಾಗಿ ಕೆರಳಿಸುವ ಭಾಷೆಯ ಅಪಾಯಕಾರಿ ಬಳಕೆ ಇದಾಗಿರುವುದನ್ನು ನಾವು ಗಮನಿಸಬಹುದು.

"ಎಲ್ಲಾ ಬಿಟ್ಟ ಮಗ ಭಂಗಿ ನೆಟ್ಟ"

ಈ ತಲೆಬರಹ ವಿರುವ ಲೇಖನ ೨೦೦೧ನೆಯ ವರ್ಷದಲ್ಲಿ ಲಂಕೇಶ್ ಪತ್ರಿಕೆಯಲ್ಲಿ ಪ್ರಕಟವಾಯಿತು. ಭಾರತದ ಪ್ರಧಾನಿ ಅಟಲ ಬಿಹಾರಿ ವಾಜಪೇಯಿ ಅವರನ್ನು ಕುರಿತು ಬರೆದ ಲೇಖನ. ಈ ಲೇಖನದ ಜೊತೆಗೆ ವಾಜಪೇಯಿ ಅವರ ಬೃಹತ್ ಚಿತ್ರ ಪ್ರಕಟವಾಗಿತ್ತು. ಪ್ರಧಾನ ಮಂತ್ರಿಗಳು ಸದ್ದುಗದ್ದಲವಿಲ್ಲದೆ ಭಾರತ-ಪಾಕ್ ಸಂಬಂಧದ ಸೌಹಾರ್ಧತೆಗೆ ದೆಹಲಿ

- ಲಾಹೋರ್ ನಡುವೆ ಬಸ್ ಮಾರ್ಗವನ್ನು ಪುನರಾರಂಭಿಸಿ ಆ ಮೊದಲ ಯಾತ್ರೆಯ ಪಯಣಿಗರಾಗಿ ಲಾಹೋರ್‌ಗೆ ಹೋಗಿಬಂದರು. ಅವರು ದೆಹಲಿಗೆ ಹಿಂತಿರುಗಿದ ಅಲ್ಪಕಾಲದಲ್ಲಿಯೆ ಪೊಖ್ರಾನ್‌ನಲ್ಲಿ ಅಣು ಪರೀಕ್ಷೆಯನ್ನು ನಡೆಸಿದರು. ಇದರಿಂದಾಗಿ ಕಾರ್ಗಿಲ್ ಯುದ್ಧವಾಗಲು ಕಾರಣರಾದರು. ಇಂತಹ ಸಂದರ್ಭದಲ್ಲಿ ಸಂಪಾದಕ ಲಂಕೇಶ್‌ರವರು 'ಎಲ್ಲಾ ಬಿಟ್ಟ ಮಗ ಭಂಗಿ ನೆಟ್ಟ' ಎಂಬ ಮಾರ್ಮಿಕ ಶೀರ್ಷಿಕೆಯ ಈ ಲೇಖನವನ್ನು ಬರೆದರು. ಈ ತಲೆಬರಹದ ಹಿಂದೆ ಸನ್ಯಾಸಿ ಎಲ್ಲವನ್ನೂ ಬಿಟ್ಟ ಎಂದರೆ ಒಂದು ಭಂಗಿ ಗಿಡ ನೆಟ್ಟು ಹೋಗಿದ್ದ ಎನ್ನುವ ಸಮಯಸಾಧಕ ಗುಣದ ವರ್ಣನೆ ಇದೆ. ಇಲ್ಲಿನ ಭಾಷೆಯ ಬಳಕೆ ಮಾರ್ಮಿಕವಾದ ಶೈಲಿಯ ಅಭಿವ್ಯಕ್ತಿಯನ್ನು ಒಂದು ತಲೆಬರಹದ ಅಡಿಯಲ್ಲಿ ಕಾಣಬಹುದು.

"ರುಂಡ ಉರುಳಿತು"

ಈ ತಲೆಬರಹದ ಲೇಖನ ಡಿಸೆಂಬರ್ ೧೮ರ ೨೦೦೨ನೆಯ ಇಸವಿಯ ಲಂಕೇಶ್ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಈ ತಲೆಬರಹದ ಹಿಂದೆ ಕಾಡುಗಳ್ಳ, ನರಹಂತಕ ವೀರಪ್ಪನ್‌ನಿಂದ ಅಪಹರಿಸಲ್ಪಟ್ಟ ಮಾಜಿ ಮಂತ್ರಿ ಎಚ್. ನಾಗಪ್ಪ ಸತ್ತ ವರದಿ ಇದೆ. ಇಲ್ಲಿನ ಭಾಷೆಯ ಬಳಕೆ, ಭೀಕರತೆಯನ್ನು ಓದುಗರಿಗೆ ತಿಳಿಸುವುದರ ಜೊತೆಗೆ ಒಂದು ಕುತೂಹಲವನ್ನು ತೆರೆದಿಡುತ್ತದೆ.

ಇಂಥ ಸನ್ನಿವೇಶದಲ್ಲಿ ತಲೆಬರಹ ಕುರಿತಂತೆ ಭಾಷಾ ಬಳಕೆಯನ್ನು ಗಮನಿಸಿದ್ದೇವೆ. ಓದುಗರ ಕುತೂಹಲವನ್ನು ತಣಿಸುವ ಲೈಂಗಿಕ ಸಾಮಗ್ರಿಗಳ ದೊರೆಯುವಿಕೆಯನ್ನು ತಿಳಿಸುವ ಒಂದು ಭಾಷಾ ವರದಿಯನ್ನು ಮೈಸೂರಿನ ನಿಜದನಿ ದಿನಪತ್ರಿಕೆಯ ಮಾರ್ಚ್ ೧೭ರ ಸಂಚಿಕೆಯನ್ನು ಗಮನಿಸೋಣ:

"ನಗರದಲ್ಲಿ ೧ ರೂ. ಗೊಂದು ನಿರೋದ್: ಸ್ವಯಂಚಾಲಿತ ಯಂತ್ರ ಸ್ಥಾಪನೆ"

"ಮೈಸೂರಿಗರಿಗೊಂದು ಸಿಹಿ ಸುದ್ದಿ. ಅಂಗಡಿಯಲ್ಲಿ ಕಾಂಡೋಮ್ ಕೊಳ್ಳಲು ಬೇರೆ ಗ್ರಾಹಕರ್‍ಯಾರು ಇಲ್ಲದ ಸಮಯಕ್ಕೆ ಹೊಂಚಿ ಕಾಯಬೇಕಿಲ್ಲ. ಅಂಗಡಿಯಾತನಿಗೆ ಮುಜುಗರದಿಂದ ಮಾರುದ್ದ ದೇಹವನ್ನು ಗೇಣುದ್ದ ಮಾಡಿಕೊಂಡು 'ಅದು ಕೊಡಿ' ಎಂದು ಕ್ಷೀಣ ಧ್ವನಿಯಲ್ಲಿ ಇನ್ನು ಮುಂದೆ ಕೇಳುವಂತಿಲ್ಲ.

ಇದೀಗ ಮೈಸೂರಿಗೆ ಸ್ವಯಂ ಚಾಲಿತ ಕಾಂಡೋಮ್ ಮಾರಾಟ ಯಂತ್ರ ಲಗ್ಗೆ ಇಟ್ಟಿದೆ. ಮಾರ್ಚ್ ೨೨ ರಂದು ಮೈಸೂರಿನ ಜನಸಂದಣಿ ಪ್ರದೇಶವೊಂದರಲ್ಲಿ ಕಾಂಡೋಮ್ ಬೂತ್ ಸ್ಥಾಪಿತವಾಗಲಿದೆ. ಒಂದು ರೂ. ನಾಣ್ಯ ಹಾಕಿ ಯಾರು ಬೇಕಾದರೂ ಕಾಂಡೋಮ್ ಖರೀದಿ ಮಾಡಬಹುದು......"

ಈ ಬಾಕ್ಸ್ ಐಟಂ ನಲ್ಲಿ ಗ್ರಾಹಕನ ಮುಜುಗರ, ಕುಗ್ಗಿ ಹೋಗುವ ರೀತಿ ಅವನ ಆಂಗಿಕ ಚಲನೆ, ಧ್ವನಿಯ ಏರಿಳಿತ ಮುಂತಾದವುಗಳನ್ನು ಸಮರ್ಥವಾದ ಭಾಷೆಯ ಬಳಕೆಯಿಂದ

ವರದಿಗಾರ ಕಟ್ಟಿಕೊಡುವ ಗ್ರಾಹಕನ ಸ್ಥಿತಿ ನಮ್ಮ ಕಣ್ಣು ಮುಂದೆ ನಿಲ್ಲುವಂತಿದೆ. ಗೌಪ್ಯತೆಯೊಂದರ ಬಹಿರಂಗ ಅನಾವರಣ ಎಷ್ಟು ಕ್ಲಿಷ್ಟಕರವಾದರೂ ವರದಿಗಾರನ ಭಾಷೆಯಲ್ಲಿ ಅದು ಸುಲಲಿತವಾಗಿರುವುದನ್ನು ಕಾಣಬಹುದು.

ಕನ್ನಡ ಪತ್ರಿಕಾರಂಗದ ಭಾಷೆಯ ಬಳಕೆಯಲ್ಲಿ ಹಲವು ವ್ಯಂಗ್ಯೋಕ್ತಿ, ವಕ್ರೋಕ್ತಿಗಳು ಸೇರಿಕೊಂಡಾಗ್ಯೂ ಪದಗಳ ದ್ವಂದ್ವಾರ್ಥದ ವಿಶ್ಲೇಷಣೆಯು ಒಂದು ವ್ಯಂಗ್ಯೋಕ್ತಿಗೆ ಪೂರಕವಾಗಿರುವ ಭಾಷಾ ಬಳಕೆಯನ್ನು ಗಮನಿಸೋಣ: (ಈ ವರದಿ ಅಗ್ನಿ ವಾರ ಪತ್ರಿಕೆಯಲ್ಲಿ ವರದಿಯಾಗಿದೆ.)

"ಛತ್ರಿ ಸಂಘ ಮತ್ತು ದಲ್ಲಾಳಿತನ"

ಅಕ್ಕ (America Kannada Kootagala Agara)ವನ್ನು ಎಲ್ಲಾ ಸಣ್ಣಪುಟ್ಟ ಸಂಘಗಳು ಕೂಡಿರುವ ಒಂದು ಅಂಬ್ರಲಾ ಆರ್ಗನೈಸೇಷನ್ ಎನ್ನಲಾಗುತ್ತಿದೆ. ಅಂದರೆ ಅವರೇ ಹೇಳಿಕೊಂಡಿರುವಂತೆ 'ಛತ್ರಿ ಸಂಘ'ಎಂದು.

ಅಮೆರಿಕಾ ಕನ್ನಡಿಗರ ಅಥವಾ ಅಕ್ಕದ ಕನ್ನಡ ಪ್ರೇಮ, ತಾಯಿನಾಡಿನ ಬಗೆಗಿನ ಕಾಳಜಿ ಹೆಮ್ಮೆಪಡಬೇಕಾದ ವಿಷಯವಾದರೂ ಅವರ ಧೋರಣೆಗಳು ಪ್ರಶ್ನಾರ್ಹವಾಗಿವೆ. ಉದಾಹರಣೆಗೆ ಈಗಿನ ಸಮಾವೇಶಕ್ಕೆ ಮುಖ್ಯಮಂತ್ರಿ ಕೃಷ್ಣ ಮತ್ತು ಅವರ ಪಟಾಲಂ ಆಹ್ವಾನಿತರಾಗಿದ್ದಾರೆ. ಕಾಂಗ್ರೆಸ್ ಸರ್ಕಾರದ ಭ್ರಷ್ಟತೆ, ಜನವಿರೋಧಿ ನೀತಿಗಳು, ಗೋಲಿಬಾರ್ ಹತ್ಯೆಗಳು ಇಲ್ಲಿನ ಕನ್ನಡಿಗರ ಆಕ್ರೋಶ ಕೆರಳಿಸುತ್ತಿದ್ದರೆ ಡಾಲರ್ ಕನ್ನಡಿಗರಿಗೆ ಅದ್ಯಾವುದೂ ಲೆಕ್ಕಕ್ಕಿಲ್ಲವಾಗಿದೆ. ಜೊತೆಗೆ ಇಡೀ ರಾಜ್ಯವನ್ನು ಕೃಷ್ಣ ಸರ್ಕಾರ ಇಂಚಿಂಚಾಗಿ ವಿದೇಶಿ ಕಂಪನಿಗಳಿಗೆ ಹರಾಜುಹಾಕುತ್ತಿದ್ದರೆ ಅದನ್ನು ಕೊಂಡಾಡುತ್ತಿರುವ ಅನಿವಾಸಿ ಕನ್ನಡಿಗರು ಇನ್ನಷ್ಟು ವಿದೇಶಿ ಬಂಡವಾಳ, ವ್ಯಾಪಾರಿ ಒಪ್ಪಂದ ಏರ್ಪಡಿಸಲು ಬಯಸಿವೆ. ಸಮಾವೇಶದ ಆಶಯಗಳಲ್ಲಿ ಇದೂ ಒಂದು ಅಜೆಂಡಾ ಆಗಿ ಸೇರಿದೆ. ಆದರೆ ಕರ್ನಾಟಕದ ಉದ್ದಗಲಕ್ಕೂ ವಿದೇಶಿ ಬಂಡವಾಳ ವಿರೋಧಿಸಿ, ಅದರಲ್ಲೂ ಅಮೆರಿಕನ್ ಮಲ್ಟಿ ನ್ಯಾಷನಲ್ ಕಂಪನಿಗಳ ಕೆಲ ಲೂಟಿಕೋರ ಯೋಜನೆಗಳ ವಿರುದ್ಧ ಈಗ ಬೃಹತ್ ಚಳುವಳಿಗಳು ನಡೆಯುತ್ತಿವೆ. VHB ಹಾಗೂ SAB ಕಂಪನಿಗಳ ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಹೈವೆ ಯೋಜನೆ, ಮೋನ್ಸಾಂಟೊ ಕಂಪನಿಯ ಬಿ.ಟಿ. ಹತ್ತಿ ವಿರುದ್ಧ ಹೋರಾಟಗಳು ನಡೆದಿವೆ. ಕೊಜೆಂಟ್ರಿಕ್ಸ್ ಎಂಬ ವಂಚಕ ಕಂಪನಿಯನ್ನು ಒದ್ದೋಡಿಸಲಾಗಿದೆ. ಕೆಂಟಕಿ ಚಿಕನ್ ಮೇಲೆ ಒಮ್ಮೆ ದಾಳಿ ನಡೆದಿದೆ.

ಇಲ್ಲಿ ಇಷ್ಟೆಲ್ಲಾ ನಡೆಯುತ್ತಿದ್ದರೂ ಈ ಛತ್ರಿ ಸಂಘದವರು ವಿದೇಶಿ ಬಂಡವಾಳಧ ಪರ ಲಾಬಿ ಮಾಡುತ್ತಿದ್ದಾರೆ. ಇದು ಡಾಲರ್ ಕನ್ನಡಿಗರ ದಲ್ಲಾಳಿತನವಲ್ಲದೆ ಬೇರೇನು.........?

ಈ ನಿಟ್ಟಿನಲ್ಲಿ ಇದೇ ತರಹದ ಹಲವು ತಲೆಬರಹವನ್ನು ಈ ಕೆಳಕಂಡಂತೆ ನೀಡಲಾಗಿದೆ.

೧. "ಸಂಸತ್‌ನಲ್ಲಿ 'ಮಾಯಾ'ಲೋಕ" ಉತ್ತರ ಪ್ರದೇಶದ ಮುಖ್ಯಮಂತ್ರಿ ಮಾಯಾವತಿ ಟೇಪ್ ಹಗರಣದ ಬಗ್ಗೆ ಮಾರ್ಚ್ ೭, ೨೦೦೩ ವಿಜಯಕರ್ನಾಟಕ

೨. "ಕಾಟಾಚಾರದ ಕನ್ನಡ ಪ್ರೇಮ" ೭೦ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಬೆಳಗಾವಿಯಲ್ಲಿ ಜರುಗಿದ ಕುರಿತು.
ಪ್ರಜಾವಾಣಿ ಮಾರ್ಚ ೨೦೦೩

೩. "ಕಾಡುಕತೆಯಲ್ಲಿ ಕಾಡುವ ಭೂತ ಮತ್ತು ವರ್ತಮಾನ" ಕನ್ನಡ ಪ್ರಭ ಮಾರ್ಚ ೨೦೦೩ 'ಗಾಂಧಿನಗರ' ಚಲನಚಿತ್ರ ಕುರಿತು ಬಂದಂಥ ಚಿತ್ರ ವಿಮರ್ಶೆ.

೪. "ಪ್ಲೇವಿನ್ ಪ್ರೇಮಕ್ಕ: ಅಳಿಯ ಡೀಲರ್ ಸಿದ್ಧಾರ್ಥ": ಹಾಯ್ ಬೆಂಗಳೂರು ವಾರಪತ್ರಿಕೆ ವಿಧಾನ ಸಭೆಯಲ್ಲಿ

ಪ್ಲೇವಿನ್ ಆನ್‌ಲೈನ್ ಲಾಟರಿ ನಿಷೇಧಿಸುವ ಮಾತನ್ನು ಮುಖ್ಯಮಂತ್ರಿ ಎಸ್. ಎಂ. ಕೃಷ್ಣ ಅವರು ನಿರಾಕರಿಸಿ "ಪ್ಲೇ ವಿನ್ ಆಡುವ ಗಂಡಸರನ್ನು ಅವರ ಹೆಂಡತಿಯರು ಹದ್ದುಬಸ್ತಿನಲ್ಲಿಟ್ಟುಕೊಳ್ಳಬೇಕು"ಎಂದು ಕೊಟ್ಟ ಉತ್ತರದ ಕುರಿತು.

ಒಟ್ಟಾರೆ ಅಲಂಕಾರ ಶಾಸ್ತ್ರದಲ್ಲಿರುವ ಪ್ರಭೇದಗಳನ್ನು ಉಪಶೀರ್ಷಿಕೆಗಳಾಗಿ, ತಲೆಬರಹಗಳಾಗಿ ಕನ್ನಡ ವೃತ್ತ ಪತ್ರಿಕೆ, ನಿಯತಕಾಲಿಕೆ, ವಾರಪತ್ರಿಕೆಯ ಸಂಪಾದಕರು ವಿಷಯಕ್ಕೆ ಸಂಬಂಧಿಸಿದಂತೆ ಅರ್ಥಪೂರ್ಣ ಭಾಷಾ ಬಳಕೆಯನ್ನು ಮಾಡುತ್ತಿದ್ದಾರೆ. ಈ ಕೆಲಸ ಅಷ್ಟು ಸುಲಭವಲ್ಲ. ಈ ರಂಗದಲ್ಲಿ ಲಾಭಾಂಶದ ದೃಷ್ಟಿಯಿಂದ ಓದುಗರ ಗಮನ ಸೆಳೆಯುವುದಕ್ಕೋಸ್ಕರ ಅನ್ಯಮಾರ್ಗಗಳನ್ನು ಹಿಡಿಯುತ್ತಿದ್ದ ನಿದರ್ಶನಗಳುಂಟು. ಕೆಲವು ವ್ಯಕ್ತಿಗಳು ಭಾಷಾ ಬಳಕೆಯ ಬಗ್ಗೆ ಪ್ರೆಸ್ ಕೌನ್ಸಿಲ್, ನ್ಯಾಯಾಲಯ ಮುಂತಾದ ಸಂಸ್ಥೆಗಳಿಗೆ ಪತ್ರಿಕೆಯ ವಿರುದ್ಧ ಕಾನೂನು ಮೊರೆ ಹೋಗಿರುವುದು ಇತಿಹಾಸ. ಒಟ್ಟಿನಲ್ಲಿ ಯಾವುದೇ ಟೀಕೆ ರಚನಾತ್ಮಕವಾಗಿರಬೇಕು. ಅವು ಉಪಮೆ, ರೂಪಕ, ವ್ಯಂಗ್ಯ, ಅತಿಶಯೋಕ್ತಿ, ಸೌಮ್ಯೋಕ್ತಿ, ದ್ವಿರುಕ್ತಿ, ಜಾಣ್ನುಡಿಗಳು, ಗಾದೆಗಳು ಭಾಷೆಯಲ್ಲಿ ಬಳಕೆಯಾದರೂ ಅವು ಯಾವುದೇ ವ್ಯಕ್ತಿಯ, ಸಂಸ್ಥೆಯ ತೇಜೋವಧೆಯಾಗಿರಬಾರದು. ಈ ಹಿನ್ನೆಲೆಯಲ್ಲಿ ಭಾಷೆಯ ಬಳಕೆ ಹಿತ-ಮಿತವಾಗಿರಬೇಕೆಂಬುದೇ ಕನ್ನಡ ಪತ್ರಿಕಾ ರಂಗದ ಆಶಯ.

ಕ್ಷೇತ್ರಭಾಷಾವಿಜ್ಞಾನದಲ್ಲಿ ಸಂಶೋಧಕರ ಪಾತ್ರ

-ಡಾ ಬಿ.ಕೆ. ರವೀಂದ್ರನಾಥ್

ಭಾಷಾಧ್ಯಯನದಲ್ಲಿ ಕ್ಷೇತ್ರಕಾರ್ಯದ ಪಾತ್ರ ಬಹಳ ಪ್ರಮುಖವಾದುದು. ಭಾಷಾ ಸಂಶೋಧಕ ನೇರವಾಗಿ ಭಾಷಾ ಕ್ಷೇತ್ರಕ್ಕೆ ಹೋಗಿ ನಿರೂಪಕರನ್ನು ಆಯ್ಕೆ ಮಾಡಿಕೊಂಡು ಅವರ ನೇರವಿನಿಂದ ಭಾಷಾ ಸಾಮಗ್ರಿಗಳನ್ನು ಪ್ರತ್ಯಕ್ಷವಾಗಿ ಸಂಗ್ರಹಿಸುವ ವೈಜ್ಞಾನಿಕ ಕ್ರಮವೇ ಭಾಷಾ ಕ್ಷೇತ್ರಾಕಾರ್ಯವಾಗಿದೆ. ಒಂದು ಭಾಷೆ, ಉಪಭಾಷೆಯ ಸ್ವರೂಪವನ್ನು ತಿಳಿಯಲು ಕೇವಲ ಲೇಖನಗಳನ್ನು, ಗ್ರಂಥಗಳನ್ನು ಅವಲಂಬಿಸಿದರೆ ನಮ್ಮ ಜ್ಞಾನ ಸೀಮಿತಗೊಳ್ಳುವುದಷ್ಟೇ ಅಲ್ಲ ಭಾಷಾ ವಿಶ್ಲೇಷಣೆಯೂ ಅವೈಜ್ಞಾನಿಕವಾಗುತ್ತದೆ. ಭಾಷೆಯ ಮೂಲ ಆಕರಗಳು ಅಥವಾ ಮೂಲ ಸಾಮಗ್ರಿಗಳು ಇರುವಲ್ಲಿಗೇ ಹೋಗಿ ವಿಷಯ ಸಂಗ್ರಹಣೆ ಮಾಡಿದರೆ ಆ ಭಾಷೆಯ ವಿಶ್ಲೇಷಣೆ ವೈಜ್ಞಾನಿಕದ್ದಾಗಿರುತ್ತದೆ.

ಕ್ಷೇತ್ರ ಕಾರ್ಯದಲ್ಲಿ ಸಾಮಗ್ರಿ ಸಂಗ್ರಹ(data collection)ತುಂಬಾ ಮಹತ್ವದ ಅಂಶದ್ದಾಗಿದೆ. ಏಕೆಂದರೆ ಈ ಸಾಮಾಗ್ರಿಗಳ ಮೇಲೆಯೇ ಸಂಶೋಧಕನ ಸಂಶೋಧನೆಯ ಫಲ ನಿಂತಿರುತ್ತದೆ. ಸಾಮಗ್ರಿಗಳು ವಿಶ್ವಾಸನೀಯತೆ ಮತ್ತು ಸಮಂಜಸತೆಯನ್ನು ಪಡೆಯಬೇಕಾದರೆ ಸಂಶೋಧಕನು ಸಂದರ್ಭೋಚಿತವಾಗಿ ವಿವಿಧ ಕಾರ್ಯ ತಂತ್ರಗಳನ್ನು ಬಳಸಬೇಕಾಗಿರುತ್ತದೆಯಲ್ಲದೆ ಸ್ವಯಂ ಭಾಷಾ ಸಂಶೋಧಕ ಕೂಡ ಕೆಲವು ಅರ್ಹತೆಗಳನ್ನು ಹೊಂದಿರಬೇಕಾಗಿರುತ್ತದೆ.

ಭಾಷಾ ಸಂಶೋಧನೆಯ ಬಗ್ಗೆ ಆಸಕ್ತಿ ಹೊಂದಿದ ಪ್ರತಿಯೊಬ್ಬ ವ್ಯಕ್ತಿಯೂ ಭಾಷಾಕ್ಷೇತ್ರಕರ್ತ ಆಗಲಾರ. ಭಾಷಾ ಸಂಶೋಧಕ ಕ್ಷೇತ್ರಕಾರ್ಯದ ವಿಧಾನಗಳನ್ನು ಚೆನ್ನಾಗಿ ಅರಿತವನಾಗಿರಬೇಕಲ್ಲದೆ, ಭಾಷಾವಿಜ್ಞಾನದ ಜ್ಞಾನ ಅದರಲ್ಲೂ ವಿಶೇಷವಾಗಿ ಧ್ವನಿವಿಜ್ಞಾನದ ಜ್ಞಾನ ಅತ್ಯಗತ್ಯ. ಧ್ವನಿಮಾ, ಆಕೃತಿಮಾ, ಪದ, ವಾಕ್ಯ ರಚನೆ, ಶಬ್ದ ಕೋಶದ ನಿಯಮಗಳು, ಧ್ವನ್ಯಾ ಲೇಖ, ಧ್ವನಿಮಾ ಲೇಖ, ಮುಂತಾದವುಗಳಲ್ಲಿ ಪರಿಜ್ಞಾನ ಇರಬೇಕಲ್ಲದೆ ಇವನ್ನು ಸಂದರ್ಭಕ್ಕೆ ತಕ್ಕಂತೆ ಉಪಯೋಗಿಸಿಕೊಳ್ಳುತ್ತಾ ಹೋಗಬೇಕಾಗುತ್ತದೆ. ನಿರೂಪಕರ ಬಾಯಿಂದ ಬರುವ ಪದ, ವಾಕ್ಯಗಳಲ್ಲಿನ ಧ್ವನಿಯನ್ನು ಅತಿ ಸೂಕ್ಷ್ಮವಾಗಿ ಗ್ರಹಿಸುವ ಶಕ್ತಿ ಪಡೆದಿದ್ದು ಉಚ್ಚರಿತ ಧ್ವನಿಯ-ಸ್ಥಾನ, ಸ್ವರೂಪ, ಇತ್ಯಾದಿಗಳನ್ನು ವೈಜ್ಞಾನಿಕವಾಗಿ ನಿರ್ಧರಿಸಿ, ಅಂತಾರಾಷ್ಟ್ರೀಯ ಧ್ವನಿ ಚಿಹ್ನೆಯನ್ನು ಬಳಸಿ ಸ್ಪಷ್ಟವಾಗಿ ಬರೆದುಕೊಳ್ಳುವಷ್ಟು ಸಮರ್ಥನಾಗಿರಬೇಕು. ಸಂಶೋಧಕನಿಗೆ ಭಾಷಾಸಮುದಾಯದ ಔಪಚಾರಿಕ, ಅನೌಪಚಾರಿಕ ಸಂದರ್ಭಗಳಲ್ಲಿ ಭಾಷಾ ಬಳಕೆಯ ರೀತಿಯನ್ನು ತಿಳಿದವನಾಗಿರಬೇಕು. ಸಮುದಾಯದ ಸದಸ್ಯರ

ವರ್ತನೆಗಳು, ನಿಲುವುಗಳನ್ನು ತಿಳಿಯುವುದಕ್ಕೆ ಸಂಶೋಧಕನಿಗೆ ಮಾನವಶಾಸ್ತ್ರ, ಮನೋವಿಜ್ಞಾನ, ಜಾನಪದ ವಿಜ್ಞಾನ ಮತ್ತು ಸಮಾಜ ಶಾಸ್ತ್ರ ಮೊದಲಾದ ಕ್ಷೇತ್ರಗಳ ಪರಿಜ್ಞಾನ ಇರಬೇಕಾಗುತ್ತದೆ.

ಸಂಶೋಧಕನಿಗೆ ತನ್ನ ಭಾಷಾ ಕ್ಷೇತ್ರದ ವಾಸ್ತವಿಕ ಪರಿಸ್ಥಿತಿಯ ಅರಿವಿರಬೇಕು. ತಾನು ಆಯ್ದುಕೊಂಡ ಭಾಷಾ ಕ್ಷೇತ್ರದ ವಿಸ್ತೀರ್ಣ, ಜನಸಂಖ್ಯೆ, ಅಲ್ಲಿನ ಜನರ ವೃತ್ತಿಗಳು, ಆರ್ಥಿಕ ವ್ಯವಹಾರ, ಸಾಮಾಜಿಕ ವರ್ಗಗಳು ಮುಂತಾದವುಗಳ ಅರಿವು ಇರಬೇಕಾಗಿರುತ್ತದೆ. ಹಾಗೆಯೇ ಬಹಳ ಮುಖ್ಯವಾಗಿ ತಾನು ವಿಶ್ಲೇಷಿಸುವ ಭಾಷಾ ಸಮುದಾಯದ ಸಂಸ್ಕೃತಿಯ ಬಗೆಗೆ ಹೆಚ್ಚಿನ ಜ್ಞಾನ ಇರಬೇಕಾಗಿರುತ್ತದೆ. ಏಕೆಂದರೆ ಭಾಷೆ ಆ ಸಮುದಾಯದ ಬೆಳವಣಿಗೆಗೆ ಕಾರಣವಾಗಿರುತ್ತದೆಯಲ್ಲದೆ, ಆ ಸಮುದಾಯದ ಜಾತಿ, ಧರ್ಮ, ವೃತ್ತಿ, ಶಿಕ್ಷಣ, ಆಚಾರ - ವಿಚಾರ, ಜನಜೀವನ ಈ ಎಲ್ಲಾ ಅಂಶಗಳೊಡನೆ ಬೆರೆತು ಹೋಗಿರುತ್ತದೆ. ಭಾಷೆಯ ಮೇಲೆ ಸಂಸ್ಕೃತಿಯ ಪ್ರಭಾವವಿರುತ್ತದೆ. ಯಾವುದೇ ಒಂದು ಸಂಸ್ಕೃತಿಯಲ್ಲಿ ಬದಲಾವಣೆಯಾದರೆ ಅಥವಾ ಬೆಳವಣಿಗೆಯಾದರೆ ಆ ಸಮಾಜದ ಸದಸ್ಯರು ಆಡುವ ಭಾಷೆಯಲ್ಲಿ ಬೆಳವಣಿಗೆ ಆಗುತ್ತದೆ. ಭಾಷೆ ಅವರ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ (Ember and Ember, Anthropology, 1981). ಸಮುದಾಯದಲ್ಲಿನ ಸಂಸ್ಕೃತಿಯಂತೆ ಅದರ ಭಾಷೆ ಇರುತ್ತದೆ, ಹಾಗೆಯೇ ಆ ಸಮುದಾಯದ ಸಂಸ್ಕೃತಿ ಅವರ ಭಾಷೆಯ ಬಗೆಗೆ ಅಮೂಲ್ಯವಾದ ಸಲಹೆ ಸೂಚನೆಗಳನ್ನು ಕೊಡಬಲ್ಲವು ಉದಾಹರಣೆಗೆ ಇಂಗ್ಲಿಷ್‌ನ bring, take ಮತ್ತು Carry ಪದಗಳನ್ನು ಸಜೀವ ವಸ್ತುಗಳನ್ನು ಹಾಗೆ ನಿರ್ಜೀವ ವಸ್ತುಗಳನ್ನೂ ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸುವುದರ ಬಗೆಗೆ ಬಳಸುತ್ತೇವೆ. ಆದರೆ ಭಾರತದ ಈಶಾನ್ಯ ಭಾಗದ 'ಗಾರೊ'(Garo) ಬುಡಕಟ್ಟಿಗೆ ಸೇರಿದ ಜನರು ನಿರ್ಜೀವ ವಸ್ತುಗಳಿಗೆ 'ರಾ' (ra) ಮತ್ತು ಸಜೀವ ವಸ್ತುಗಳಿಗೆ 'ರಿಮ್' (rim) ಎಂಬ ಬೇರೆ ಬೇರೆ ಪದಗಳನ್ನು ಬಳಸಿ, ಈ ಪದಗಳಿಗೆ 'ಆಂಗ್' (ang) ಮತ್ತು ಬಾ (ba) ಪ್ರತ್ಯಯಗಳನ್ನು ಸೇರಿಸಿ ಒಂದು ನಿರ್ದಿಷ್ಟ ಮಾರ್ಗದ ಕಡೆಗೆ ಸಾಗಿಸುವುದಕ್ಕೆ ಹೇಳುತ್ತಾರೆ. ಅದೇ ರೀತಿ 'ರಾ ಆಂಗ್' (ra ang) ಎಂದರೆ ನಿರ್ಜೀವ ವಸ್ತುಗಳನ್ನು, 'ರೀಮ್‌ಆಂಗ್' (rim ang) ಎಂದರೆ ಸಜೀವ ವಸ್ತುಗಳನ್ನು ಮಾತನಾಡುವ ವ್ಯಕ್ತಿಯ ಹತ್ತಿರದಿಂದ ಬೇರೆ ಕಡೆಗೆ ತಗೆದುಕೊಂಡು, ಹೋಗು ಎಂತಲೂ 'ರಾ ಬಾ' (ra ba) ನಿರ್ಜೀವ ವಸ್ತುಗಳನ್ನು, 'ರಿಮ್ ಬಾ' (rimba) ಸಜೀವ ವಸ್ತುಗಳನ್ನು ಮಾತನಾಡುವ ವ್ಯಕ್ತಿಯ ಹತ್ತಿರ ತಗೆದುಕೊಂಡು ಬಾ ಎನ್ನುವುದಕ್ಕೆ ಬಳಸುತ್ತಾರೆ. ಇದಲ್ಲದೆ 'ಗಾರೊ' ಜನರಲ್ಲಿ ಸಾಗಿಸು (carry) ಎನ್ನುವ ಸಾಮಾನ್ಯ ಪದ ಬಳಕೆಯಲ್ಲಿಲ್ಲ ಆದರೆ ಬೇರೆ ಬೇರೆ ರೀತಿಯಲ್ಲಿ ಸಾಗಿಸು ಎನ್ನುವುದಕ್ಕೆ ಅವರಲ್ಲಿ ಬೇರೆ ಬೇರೆ ಪದಗಳಿವೆ. ಕೆಲವು ಪದಗಳು ಮತ್ತು ಅವುಗಳ ಅರ್ಥ ಈ ಕೆಳಕಂಡಂತಿವೆ.

'ಒಲ್' (ol) - ಪಟ್ಟಿ ಇರುವ ಬುಟ್ಟಿಯಲ್ಲಿ ಸಾಗಿಸು-ಅಂದರೆ ಪಟ್ಟಿಯನ್ನು ಹಣೆಯ ಮೇಲೆ ಇರಿಸಿ ಬುಟ್ಟಿಯನ್ನು ಬೆನ್ನ ಹಿಂದೆ ಬರುವಂತೆ ಮಾಡಿ ಸಾಗಿಸು.

'ಇಟ್‌ಚಿಲ್' (it chil) - ತಲೆಯ ಮೇಲೆ ಹೊತ್ತು ಸಾಗಿಸು.

ರೈಪ್(ripe) - ಹೆಗಲ ಮೇಲೆ ಇಟ್ಟುಕೊಂಡು ಸಾಗಿಸು(ಮರದ ತುಂಡನ್ನು ಹೆಗಲ ಮೇಲೆ ಸಾಗಿಸುವ ರೀತಿ)

ಕೆ (ke) - ಪಟ್ಟಿ(strap)ಇರುವ ಚೀಲ (bag)ದಲ್ಲಿ, ಹೆಗಲ ಮೇಲೆ ಪಟ್ಟಿ ಇರಿಸಿ ಸಾಗಿಸು.

ಡೇಟಂ (detom) - ಕೈಯಲ್ಲಿ ಹಿಡಿದು ಸಾಗಿಸು ಎಂತಲೂ ಹೀಗೆ 'ಗಾರೊ' (Garo) - ಭಾಷೆ ಅವರ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ (Ember and Ember, Anthropology', 1981).ಆದುದರಿಂದ ಸಂಸ್ಕೃತಿಯ ಹಿನ್ನೆಲೆಯಲ್ಲಿಯೇ ಭಾಷೆ, ಆಡು ನುಡಿಯ ಸ್ವರೂಪವನ್ನು ಪರಿಶೀಲಿಸ ಬೇಕಾಗುತ್ತದೆ. ಭಾಷೆಯ ಮೇಲೆ ಸಂಸ್ಕೃತಿಯ ಹಿಡಿತವಿರುತ್ತದೆ. ಆದುದರಿಂದಲೇ ಒಂದು ಸಮಾಜದ ಸಂಸ್ಕೃತಿಯಲ್ಲಿ ಯಾವ ಒಂದು ಬದಲಾವಣೆಯಾದರೂ ಅಥವಾ ಬೆಳವಣಿಗೆಯಾದರೂ ಆ ಸಮಾಜದ ಸದಸ್ಯರು ಆಡುವ ಭಾಷೆಯಲ್ಲೂ ಕೂಡ ಬೆಳವಣಿಗೆ ಆಗುತ್ತದೆ. ಹೀಗೆ ಭಾಷೆ ಸಮಾಜದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ಆದುದರಿಂದ ಭಾಷಾ ಸಂಶೋಧಕ ತಾನು ಅಧ್ಯಯನ ಮಾಡುವ ಭಾಷಾ ಸಮುದಾಯದ ಸಂಸ್ಕೃತಿಯ ಬಗೆಗೆ ಹೆಚ್ಚು ತಿಳಿದಿರಬೇಕಾಗುತ್ತದೆ.

ಭಾಷಾ ಸಂಶೋಧಕ ಒಂದು ಭಾಷೆಯನ್ನು ಅದಕ್ಕೆ ಸಂಬಂಧಿಸಿದ ಭಾಷಾ ಕ್ಷೇತ್ರ ಅಥವಾ ಭಾಷಾ ಸಮುದಾಯವನ್ನೊ ತನ್ನ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಅನಂತರ ತನ್ನ ಸಹಪಾಠಿಗಳೊಂದಿಗೆ, ಮಾರ್ಗದರ್ಶಕರೊಡನೆ ಸಮಾಲೋಚಿಸಿ ಸಲಹೆ ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು ಅನಂತರ ಸಾಮಗ್ರಿ ಸಂಗ್ರಹಕ್ಕೆ ಹೋಗುವುದು ಒಳ್ಳೆಯದು. ಏಕೆಂದರೆ ಕ್ಷೇತ್ರ ಕಾರ್ಯದ ಮಧ್ಯದಲ್ಲಿ ತಾನು ಆರಿಸಿಕೊಂಡಿರುವ ಭಾಷೆಯನ್ನೊ ಅಥವಾ ಭಾಷಾ ಸಮುದಾಯವನ್ನೊ ಕಾರಣವಾಗಿಟ್ಟುಕೊಂಡು ಕ್ಷೇತ್ರ ಕಾರ್ಯವನ್ನು ಅರ್ಧಕ್ಕೆ ನಿಲ್ಲಿಸಬಾರದು. ಆದುದರಿಂದ ಭಾಷಾ ವಿಶ್ಲೇಷಣೆಗೆ ತಾನು ಆಯ್ಕೆ ಮಾಡಿಕೊಂಡ ಭಾಷೆ ಮತ್ತು ಅದಕ್ಕೆ ಸಂಬಂಧಿಸಿದ ಭಾಷಾ ಕ್ಷೇತ್ರದ ಬಗೆಗೆ ಅಂತಿಮ ತೀರ್ಮಾನವಾದ ನಂತರವೇ ಸಂಶೋಧಕ ಕ್ಷೇತ್ರ ಕಾರ್ಯವನ್ನು ಶುರುಮಾಡಬೇಕು. ಇದಕ್ಕಾಗಿ ಭಾಷಾ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳಲು ಸ್ಥಳ ಪರಿಶೀಲನ ಪ್ರವಾಸ (recconnoitre tour) ಮಾಡಿ ಅಂತಿಮವಾಗಿ ಭಾಷಾ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳುವುದು ಉತ್ತಮ.

ತರುವಾಯ ಸಂಶೋಧಕ ತಾನು ಆಯ್ಕೆ ಮಾಡಿಕೊಂಡ ಭಾಷೆ ಮತ್ತು ಭಾಷಾ ಕ್ಷೇತ್ರಕ್ಕೆ ಸಂಬಂಧ ಪಟ್ಟ ಮೂಲ ಆಕರಗಳಿಂದ ಸಾಮಗ್ರಿಗಳನ್ನು ಸಂಗ್ರಹಿಸಬೇಕಾದುದು ಮುಖ್ಯವಾದ ಅಂಶ. ಇವು ಒಂದು ಭಾಷೆಯನ್ನು ವಸ್ತುನಿಷ್ಠವಾಗಿ ಅಧ್ಯಯನ ಮಾಡಲು ಸಹಾಯಕವಾಗಿರುತ್ತವೆ. ಈ ಮೂಲ ಸಾಮಗ್ರಿಗಳು ದಾಖಲೆ ಸಂಗ್ರಹಾಲಯಗಳು, ವಸ್ತು ಸಂಗ್ರಹಾಲಯಗಳು, ಗ್ರಂಥಾಲಯಗಳು ಸ್ಥಳೀಯ ಸಣ್ಣ ಪತ್ರಿಕೆಗಳು ಇನ್ನೂ ಮುಂತಾದ ಆಕರಗಳಲ್ಲಿ ದೊರೆಯುತ್ತವೆ. ಹೀಗೆ ಸಂಗ್ರಹಿಸಿದ ಮೂಲ ಸಾಮಗ್ರಿಗಳ ಸಹಾಯದಿಂದ ಸಂಶೋಧಕ ತನ್ನ ಸಂಶೋಧನೆಗೆ ಬೇಕಾದ ಮಾಹಿತಿಗಳನ್ನೂ ಪಡೆಯಲು ಹಾಗೂ ತನ್ನ ಕ್ಷೇತ್ರಕಾರ್ಯಕ್ಕೆ ಆಯ್ಕೆ ಮಾಡಿಕೊಂಡಿರುವ ಭಾಷಾ ಸಮುದಾಯದ ಸಂಸ್ಕೃತಿ ಬಗೆಗಿನ ಹಲವಾರು ವಿಷಯಗಳನ್ನು ತಿಳಿದುಕೊಳ್ಳಲು ಅನುಕೂಲವಾಗಿರುತ್ತದೆ. ಸಂಶೋಧಕ ಕ್ಷೇತ್ರ ಕಾರ್ಯಕ್ಕೆ ಮುಂಚಿತವಾಗಿಯೇ ತನ್ನ ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಪ್ರಶ್ನಾವಳಿಯನ್ನು ತಯಾರು ಮಾಡಿಕೊಂಡು ಅವುಗಳ ಆಧಾರದ ಮೇಲೆಯೇ ಪ್ರಶ್ನೆಗಳನ್ನೂ ಕೇಳುವುದು, ಮಾಹಿತಿಯನ್ನು ಸಂಗ್ರಹಿಸುವುದು ರೂಢಿಯಲ್ಲಿರುವ ಪದ್ಧತಿ. ಆಗಾಗಿ ಮೂಲ ಆಕರಗಳಿಂದ ಸಂಗ್ರಹಿಸಿದ ಸಾಮಗ್ರಿಗಳು ಪ್ರಶ್ನಾವಳಿ ತಯಾರುಮಾಡಲು ಅದರಲ್ಲೂ ಆ ಭಾಷಾ ಸಮುದಾಯದಲ್ಲಿನ ಬದಲಾವಣೆಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ತಯಾರು ಮಾಡಲು ನೆರವಾಗುತ್ತವೆ.

ಭಾಷಾ ಸಂಶೋಧಕನಿಗೆ ತಾನು ವಿಶ್ಲೇಷಿಸುವ ಸ್ಥಳೀಯ ಭಾಷೆಯ ಜ್ಞಾನ ಅತಿ ಮುಖ್ಯವಾದುದು. ಆ ಭಾಷೆ ಪರಭಾಷೆಯಾಗಿದ್ದರೆ ಅದರ ಕೌಶಲಗಳಾದ ಗ್ರಹಿಸುವಿಕೆ, ಮಾತುಗಾರಿಕೆ, ಓದುವುದು ಮತ್ತು ಬರವಣಿಗೆಗಳನ್ನು ಕಲಿತುಕೊಳ್ಳುವುದು ತುಂಬಾ ಅವಶ್ಯಕವಾದುದು. ಸಂಶೋಧಕ ತಾನು ವಿಶ್ಲೇಷಿಸುವ ಸ್ಥಳೀಯ ಭಾಷೆಯನ್ನು ಕಲಿತಿದ್ದರೆ ನಿರೂಪಕರ ಮತ್ತು ತನ್ನ ನಡುವೆ ನಿಕಟ ಸಂಬಂಧ ಏರ್ಪಡುವುದರಲ್ಲಿ ಸಂದೇಹವೇ ಇಲ್ಲ. ನಿರೂಪಕರು ಸಂಶೋಧಕನನ್ನು ಇವನೂ ಕೂಡ ನಮ್ಮ ಭಾಷಾ ಸಮುದಾಯಕ್ಕೆ ಸೇರಿದವನೇ ಎಂದು ನಡೆಸಿಕೊಳ್ಳುತ್ತಾರೆ. ಏಕೆಂದರೆ ನಿರೂಪಕರೂ ಅಥವಾ ಸಮುದಾಯದ ಸದಸ್ಯರೂ ಸಂಶೋಧಕನನ್ನು ನೋಡಿ ಸಂಶಯ ತಾಳುವುದು ಸ್ವಾಭಾವಿಕ. ಆಗ ಸಂಶೊಧಕನ ಪ್ರಶ್ನೆಗಳಿಗೆ ಉತ್ತರಿಸಲು ಮುಂದೆ ಬರುವುದಿಲ್ಲ ಇಂತಹ ಸಮಯದಲ್ಲಿ ಸಂಶೋಧಕನು ಸ್ಥಳೀಯ ಭಾಷೆಯನ್ನು ಆಡಿದಾಗ ಸಂಶೋಧಕ ಮತ್ತು ಭಾಷಾ ಸಮುದಾಯದವರ ನಡುವೆ ಪರಸ್ಪರ ಅನ್ಯೋನ್ಯತೆ ಬೆಳೆದು, ಅಭಿಮಾನ ಮೂಡಿ ಭಾಷೆಯ ನಿಜ ರೂಪಗಳನ್ನು ಸಂಗ್ರಹಿಸಲು ಸಹಕಾರಿಯಾಗುತ್ತದೆ. ಡಬ್ಲ್ಯೂ. ಜೆ. ಸಾಮರಿನ್, ಸ್ಥಳೀಯ ಭಾಷೆಯನ್ನು ತಿಳಿದಿದ್ದಾಗ ಭಾಷಾ ಸಂಶೋಧಕ ಮತ್ತು ನಿರೂಪಕರ ನಡುವೆ ಏರ್ಪಡುವ ಸಂಬಂಧದ ಬಗೆಗೆ ಹೀಗೆ ಹೇಳುತ್ತಾರೆ- as one kewa told a linguist in New Guinea, "your skin is white and mine is brown but now we talk the same language, So we're the same inside" (W.J. Samarin, 'Field linguistics, 1966).

ಭಾಷಾ ಸಂಶೋಧಕ ಸ್ಥಳೀಯ ಭಾಷೆಯನ್ನು ಅರಿತಿದ್ದರೆ ಆ ಭಾಷಾ ಸಮುದಾಯಕ್ಕೆ ಸೇರಿದ ಅನೇಕ ಜನರನ್ನು ಬೇರೆ ಬೇರೆ ಸನ್ನಿವೇಶಗಳಲ್ಲಿ ಭೇಟಿ ಮಾಡಲು ನೆರವಾಗುತ್ತದೆಯಲ್ಲದೆ ವೈವಿಧ್ಯತೆಯಿಂದ ಕೂಡಿದ ಮಾಹಿತಿಗಳನ್ನು ಸಂಗ್ರಹಿಸಲು ಸಹಾಯಕವಾಗುತ್ತದೆ. ಸ್ಥಳೀಯ ಭಾಷೆಯನ್ನು ಕಲಿತಿರುವುದರಿಂದ ಭಾಷಾ ಸಮುದಾಯದ ಅನೇಕ ಭಾಷಿಕ ಚಟುವಟಿಕೆಗಳ (ಕಥೆ, ಗಾದೆ, ಒಗಟು, ನುಡಿಗುಟ್ಟು ಮುಂತಾದವು) ಬಗೆಗೆ ಹಾಗೂ ಸಂಸ್ಕೃತಿಯನ್ನು ತಿಳಿಯಲು ಅನುಕೂಲವಾಗುತ್ತದೆ. ಇಷ್ಟಲ್ಲದೆ ಸ್ಥಳೀಯ ಭಾಷೆಯ ಜ್ಞಾನ ಆ ಭಾಷೆಯನ್ನು ವಿಶ್ಲೇಷಿಸುವಾಗ ಉಂಟಾಗುವ ಅನೇಕ ಗೊಂದಲಗಳನ್ನು ನಿವಾರಿಸುವುದರಲ್ಲಿ ತುಂಬಾ ಅವಶ್ಯಕವಾಗಿದೆ.

ಸಂಶೋಧಕ ತನ್ನ ಕ್ಷೇತ್ರಕಾರ್ಯಕ್ಕೆ ಅಗತ್ಯವಾಗಿ ಬೇಕಾದ ವಸ್ತುಗಳಾದ ಕಾಗದ, ಪೆನ್ನು, ಪೆನ್ಸಿಲ್, ಕಾರ್ಡ್‌ಗಳು, ಕ್ಷೇತ್ರ ಕಾರ್ಯದ ದಿನಚರಿ, ಪುಸ್ತಕಗಳು, ಕೈಪಿಡಿಗಳು ನಿಯತಕಾಲಿಕೆಗಳು, ಬ್ಯಾಟರಿ, ರೇಡಿಯೋ, ಫ್ಲ್ಯಾಸ್ಕ್, ಟಾರ್ಚ್, ಗಡಿಯಾರ, ಟೇಪ್ ರೆಕಾರ್ಡರ್, ಕ್ಯಾಮರಾ ಮುಂತಾದವುಗಳನ್ನು ಇಟ್ಟುಕೊಂಡಿರಬೇಕು. ಅಲ್ಲದೆ ಆಧುನಿಕ ಉಪಕರಣ ಗಣಕಯಂತ್ರ ಬಳಸುವ ವಿಧಾನ ತಿಳಿದಿದ್ದರೆ ಹೆಚ್ಚು ಸಹಾಯಕಾರಿ.

ಭಾಷಾ ಸಾಮಗ್ರಿಗಳನ್ನು ಸಂಗ್ರಹಿಸುವಾಗ ಸಂಭವಿಸಬಹುದಾದ ಅಡೆ ತಡೆಗಳನ್ನು ಸಮರ್ಥವಾಗಿ ಎದುರಿಸಬೇಕಾಗಿರುತ್ತದೆ. ಅಂತಹ ಸಮಯದಲ್ಲಿ ಭಾಷಾ ಸಮುದಾಯದವರ ಜೊತೆ ಹೇಗೆ ವರ್ತಿಸಬೇಕೆಂಬುದನ್ನು ಸಂಶೋಧಕ ಮೊದಲೇ ತಿಳಿದಿರುವುದು, ಒಳ್ಳೆಯದು. ಏಕೆಂದರೆ ಸಂಶೋಧಕನನ್ನು ಆ ಸಮುದಾಯದ ಸದಸ್ಯರು ತಕ್ಷಣವೇ ಬರಮಾಡಿಕೊಳ್ಳುವುದಿಲ್ಲ, ದೂರದಿಂದಲೇ ನೋಡಿ ಸಂಶಯ ತಾಳುತ್ತಾರೆ. ಇವನು ಯಾರು? ಇವನು ಎಲ್ಲಿಂದ ಬಂದಿರಬಹುದು? ನಮ್ಮ ಊರಿಗೆ ಏಕೆ ಬಂದಿರಬಹುದು? ಸರ್ಕಾರಿ ಅಧಿಕಾರಿಯಾಗಿರಬಹುದೇ? ಸಾಲ ಕೊಡಿಸಲು ಬಂದಿರಬಹುದೆ? ಅಥವಾ ಸಾಲ ವಸೂಲಿಗಾಗಿ ಬಂದಿರಬಹುದೇ?..........ಎಂದು ನಾನಾ ರೀತಿಯಲ್ಲಿ ಯೋಚಿಸಿ ಸಂಶಯಾಸ್ಪದವಾಗಿ ನೋಡುತ್ತಾರೆ. ಅನಂತರ ಸಂಶೋಧಕನ ಉದ್ದೇಶ ತಿಳಿದ ಮೇಲೆ ಸಾಮಾನ್ಯವಾಗಿ ಮಾತನಾಡಲು, ಅವನ ಪ್ರಶ್ನೆಗಳಿಗೆ ಉತ್ತರಿಸಲು ಆ ಸಮುದಾಯದ ಸದಸ್ಯರು ಮುಂದೆ ಬರದೇ ಇರಬಹುದು. ಇಂತಹ ಸಮಯದಲ್ಲಿ ಸಂಶೋಧಕ ಹತಾಶನಾಗದೇ ಜಾಣತನದಿಂದ ವರ್ತಿಸಬೇಕಾಗುತ್ತದೆ ಆ ಜನರಿಗೆ ನಿಧಾನವಾಗಿ ತನ್ನ ಕಾರ್ಯದ ಉದ್ದೇಶಗಳನ್ನು ಪ್ರಾಮಾಣಿಕವಾಗಿ ಮುಕ್ತ ಮನಸ್ಸಿನಿಂದ ವಿವರಿಸಬೇಕು. ಆಗ ಅವರಿಗೆ ಸಂಶೋಧಕನ ಉದ್ದೇಶದ ಅರಿವಾಗಿ, ಅಭಿಮಾನ ಮೂಡಿ ಸಾಮಗ್ರಿ ಸಂಗ್ರಹಿಸಲು ನೆರವಾಗುತ್ತಾರೆ.

ಸಂಶೋಧಕ ಭಾಷಾ ಸಮುದಾಯದ ಸದಸ್ಯರೊಡನೆ ಮುಕ್ತ ಮನಸ್ಸಿನಿಂದ ಬೆರೆಯುವ ಸರಳ ಪ್ರಜ್ಞಾಶೀಲ, ಬುದ್ಧಿಶಾಲಿ, ವಿಚಾರಶೀಲ, ಶ್ರದ್ಧಾ ವ್ಯಕ್ತಿಯಾಗಿದ್ದು, ಆತ್ಮೀಯ ಸ್ನೇಹಿತರಂತೆ ಹೃದಯ ಪೂರ್ವಕವಾಗಿ ಮಾತನಾಡಬೇಕು. ಸಂಶೋಧಕ ಆ ಭಾಷಾ ಸಮುದಾಯದ ಒಬ್ಬ ಸದಸ್ಯನಂತೆ ನಡೆದುಕೊಳ್ಳಬೇಕು. ಇದರಿಂದ ಇವರಿಬ್ಬರ ನಡುವೆ ಉತ್ತಮ ಸಂಬಂಧ ಉಂಟಾಗುತ್ತದೆ. ಸಾಮಗ್ರಿ ಸಂಗ್ರಹದ ಸಮಯದಲ್ಲಿ ಸಂಶೋಧಕ ಸಹನೆ, ಸಹಾನುಭೂತಿಯಿಂದ ನಡೆದುಕೊಂಡು ಹೋಗಬೇಕು. ಸಂಶೋಧಕರಲ್ಲಿ ಅಪಾರವಾದ ತಾಳ್ಮೆ

ಇರಬೇಕಾಗಿರುತ್ತದೆ. ಕೆಲವು ವೇಳೆ ಸಾಮಗ್ರಿ ಸಂಗ್ರಹಕ್ಕೆ ನಿಗದಿತ ವೇಳೆಗೆ ಹಾಜರಾಗಲು ನಿರೂಪಕರಿಗೆ ಸಾಧ್ಯವಾಗದಿರಬಹುದು ಮತ್ತು ನಿರೂಪಕ ಮೊದ ಮೊದಲು ಪ್ರಶ್ನೆಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳದಿರಬಹುದು. ಆಗ ಸಂಶೋಧಕ ತಾಳ್ಮೆಯಿಂದ ವರ್ತಿಸ ಬೇಕಾಗುತ್ತದೆ. ಸಂಶೋಧಕನಲ್ಲಿ ಏಕಾಗ್ರತೆ ಹಾಗೂ ಸತ್ಯನಿಷ್ಠೆ ಅಪಾರವಾಗಿರಬೇಕು. ಅವನು ಪೂರ್ವಾಗ್ರಹ ಪೀಡಿತನಾಗಿರದೇ ಸತ್ಯವನ್ನು ಶೋಧಿಸಿ ತೆಗೆಯುವವನಾಗಿರಬೇಕು.

ಸಂಶೋಧಕ ಆ ಭಾಷಾ ಸಮುದಾಯದ ಸಂಪ್ರದಾಯಗಳ ಬಗೆಗಿನ ಒಲವುಗಳು, ವಿರೋಧ ತೀರ್ಮಾನಗಳು, ಅವರ ಮಾನಸಿಕ ಸ್ಪಂದನೆಗಳನ್ನು ಗಮನಿಸಬೇಕಾಗಿರುತ್ತದೆ. ಆ ಜನರು ಏನನ್ನು ಮನ್ನಿಸುತ್ತಾರೆ ಮತ್ತು ಯಾವುದನ್ನು ವಿರೋಧಿಸುತ್ತಾರೆ ಎಂಬುದನ್ನು ಕಂಡುಹಿಡಿಯಲು ಪ್ರಯತ್ನಿಸಬೇಕು. ನಿರೂಪಕರನ್ನು ಆಯ್ಕೆ ಮಾಡಿಕೊಳ್ಳುವಾಗ ಬಹಳ ಜಾಣ್ಮೆಯಿಂದ ಮಾನಸಿಕ ಸಮತೋಲನವನ್ನು ಕೆಡಿಸಿಕೊಳ್ಳದೆ ಭಾಷಾ ಸಮುದಾಯದ ಪೂರ್ವಪರಗಳನ್ನೆಲ್ಲಾ ಗಣನೆಗೆ ತೆಗೆದುಕೊಂಡು ಸಮುದಾಯದೊಡನೆ ಸಹಕರಿಸಿಕೊಂಡು ಹೋಗಬೇಕಾಗುತ್ತದೆ. ನಿರೂಪಕರ ಕೆಲಸಕ್ಕೆ ಆ ಭಾಷೆಯನ್ನಾಡುವ ಎಲ್ಲರೂ ಅರ್ಹ ರಾಗಿರುವುದಿಲ್ಲ. ಅಂತಹವರನ್ನು ನೇರವಾಗಿ ನೀವು ಅರ್ಹರಲ್ಲ ಎಂದು ತಿರಸ್ಕರಿಸಬಾರದು. ಆ ಭಾಷಾ ಕ್ಷೇತ್ರದ ಗಣ್ಯ ವ್ಯಕ್ತಿಗಳನ್ನು ಹಾಗೂ ಪ್ರಮುಖರನ್ನು ತನ್ನ ಉದ್ದೇಶ ಸಿದ್ಧಿಗಾಗಿ ಹೇಗೆ ಬಳಸಿಕೊಳ್ಳಬಹುದು ಎಂಬುದನ್ನು ಆಲೋಚಿಸಬೇಕು. ಅಂತಹ ವ್ಯಕ್ತಿಗಳ ಸಲಹೆ ಸಹಕಾರದಿಂದ ಸ್ಥಳೀಯರ ಪ್ರೀತಿ ವಿಶ್ವಾಸ ಸಂಪಾದಿಸಿಕೊಳ್ಳಬೇಕು. ಆ ಸಮುದಾಯದ ಸದಸ್ಯರಲ್ಲಿ ಒಳ ಜಗಳ, ರಾಜಕೀಯ ಇರುವುದು ಸರ್ವೇಸಾಮಾನ್ಯ. ಇಂತಹ ಸನ್ನಿವೇಶಗಳಲ್ಲಿ ಸಂಶೋಧಕ ಯಾವ ಒಂದು ಗುಂಪಿನ ಕಡೆಗೂ ಹೋಗಬಾರದು. ಈ ವಿಷಯದಲ್ಲಿ ತುಂಬಾ ಜಾಗರೂಕತೆಯಿಂದ ವರ್ತಿಸಬೇಕು. ಬದಲಾಗಿ ಸಂಶೋಧಕನು ಸಮುದಾಯದ ಸದಸ್ಯರ ನಿಜ ಜೀವನದಲ್ಲಿ ಬರುವ ಚಿಕ್ಕ ಪುಟ್ಟ ಸಮಸ್ಯೆಗಳನ್ನು ಅಂದರೆ ಪತ್ರ ಬರಹ, ಓದು, ಆರೋಗ್ಯ ಮುತಾದವುಗಳಿಗೆ ಸಂಬಂಧಿಸಿದಂತೆ ಸಲಹೆ, ಸೂಚನೆ, ಮಾರ್ಗದರ್ಶನಗಳನ್ನು ನೀಡುತ್ತಾ ಇರುವುದು ಒಳ್ಳೆಯದು. ಇದರಿಂದ ಸಮುದಾಯದ ಸದಸ್ಯರಿಗೆ ಸಂಶೋಧಕನ ಬಗೆಗೆ ಪ್ರೀತಿ, ವಿಶ್ವಾಸ ಹುಟ್ಟುತ್ತದೆಯಲ್ಲದೆ ಎಲ್ಲಾ ರೀತಿಯ ಸಹಕಾರ ಕೂಡ ಅವರಿಂದ ದೊರೆಯುತ್ತದೆ.

ಭಾಷಾನಿರೂಪಕರೊಡನೆ ವ್ಯವಹರಿಸುವಾಗ ಸಂಶೋಧಕ ಹಸನ್ಮುಖದಿಂದ ಸ್ನೇಹ ವಿಶ್ವಾಸದಿಂದ ನಡೆದುಕೊಳ್ಳುವುದು ಮುಖ್ಯ. ಅವನ ಮನೆ, ಉಡುಗೆ, ತೊಡುಗೆ, ಆಚಾರ, ವಿಚಾರ, ಜೀವನ ಎಷ್ಟೇ ಕೀಳು ಮಟ್ಟದಾಗಿದ್ದರೂ ಅವನ್ನು ಮರೆತು ಅವನಿಗೆ ಪ್ರೋತ್ಸಾಹ ನೀಡುತ್ತಾ ಕಾರ್ಯಸಾಧನೆ ಮಾಡಬೇಕಾಗಿರುತ್ತದೆ. ಇಬ್ಬರ ಮಧ್ಯೆ ಯಾವ ಒಂದು ತಪ್ಪು ಗ್ರಹಿಕೆಗೂ ಅವಕಾಶ ಬರದಂತೆ ನೋಡಿಕೊಳ್ಳಬೇಕು. ನಿರೂಪಕ ಯಾರೇ ಆಗಿರಲಿ ದಿನಕ್ಕೆ ಮೂರು ಅಥವಾ ನಾಲ್ಕು ಗಂಟೆಗಿಂತ ಹೆಚ್ಚುಕಾಲ ವ್ಯವಹರಿಸಬಾರದು. ಮಧ್ಯೆ ಮಧ್ಯೆ

ಉಪಹಾರ, ವಿಶ್ರಾಂತಿ, ಕಾಫಿ ಇತ್ಯಾದಿಗೆ ಅವಕಾಶ ನೀಡುತ್ತಿರಬೇಕು. ಒಂದೇ ರೀತಿಯ ಪ್ರಶ್ನೆಗಳನ್ನು ಕೇಳಿ ನಿರೂಪಕನಿಗೆ ಬೇಸರವಾಗದಂತೆ ನೋಡಿಕೊಳ್ಳಬೇಕು. ಪ್ರಶ್ನೆಗಳನ್ನು ಕೇಳುವಾಗ ಆ ಜನರ ಹಿನ್ನೆಲೆಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ಕೇಳುವುದು ಎಲ್ಲಾ ರೀತಿಯಿಂದಲೂ ಒಳ್ಳೆಯದು. ಅಂತಹ ಪ್ರಶ್ನೆಗಳು ನಿರೂಪಕರ ಆಸಕ್ತಿಯನ್ನು ಹೆಚ್ಚಿಸಿ ಸಹಜ ಸಂಭಾಷಣೆಗಳನ್ನು ಸಂಗ್ರಹಿಸಲು ನೆರವಾಗುತ್ತವೆ. ನಿರೂಪಕನಿಗೆ ಸಂಶಯ ಹುಟ್ಟಿಸುವ ಪ್ರಶ್ನೆಗಳನ್ನು ತಗೆದುಹಾಕಬೇಕು. ಸಂಶಯಾತ್ಮಕ ಪ್ರಶ್ನೆಗಳು ನಿರೂಪಕನ ಕಾರ್ಯಕ್ಕೆ ಮಾರಕವಾಗುತ್ತವೆ. ಆದುದರಿಂದ ನಿರೂಪಕನಿಗೆ ವಿವರ ಕೊಡಬಲ್ಲ ಉತ್ತರಗಳನ್ನು ಪಡೆಯುವಂತಹ ಪ್ರಶ್ನೆಗಳನ್ನು ಹಾಗೂ ತಾನು ಮಾತನಾಡುವ ರೀತಿಯನ್ನು ವಿಮರ್ಶಿಸಿ ನೋಡಬಹುದಾದಂತಹ ಪ್ರಶ್ನೆಗಳನ್ನು ಕೇಳುವುದು ಎಲ್ಲಾ ರೀತಿಯಿಂದಲೂ ಒಳ್ಳೆಯದು.

ಸಂಶೋಧಕನು ಸಾಂಪ್ರದಾಯಕ ಸಂದರ್ಶನದಿಂದ ಒಂದು ಭಾಷೆಯ ಧ್ವನಿ, ಧ್ವನಿಮಾ, ಆಕೃತಿಮಾ, ವಾಕ್ಯರಚನೆಗಳಿಗೆ ಸಂಬಂಧಿಸಿದಂತೆ ಮಾಹಿತಿಗಳನ್ನು ಸಂಗ್ರಹಿಸಬಹುದು. ಆದರೆ ಇದರಿಂದ ಭಾಷಾ ವೈವಿಧ್ಯತೆಯನ್ನು ವಿವರಿಸಲು ಸಾಧ್ಯವಾಗದು. ದಿನ ನಿತ್ಯದ ಆಡು ಮಾತನ್ನು ದಾಖಲಿಸಬೇಕಾದಲ್ಲಿ ಸಾಮಾಜಿಕ ರಚನೆಯನ್ನು ಅಭ್ಯಸಿಸಿ ಮಾಹಿತಿಯನ್ನು ಚಹದ ಅಂಗಡಿ, ಪೇಟೆ, ಶಾಲೆ, ಜನ ಸಮುದಾಯದ ಸಾಮಾಜಿಕ ಸಮಾರಂಭ ಮತ್ತು ಎಲ್ಲಾ ಸಾರ್ವಜನಿಕ ಸ್ಥಳಗಳಿಂದ ಸಂಗ್ರಹಿಸಬೇಕು. ಮಾಹಿತಿಯನ್ನು ಸಂಗ್ರಹಿಸುವಾಗ ಸಂಶೋಧಕನು ಕೃತಕ ಸನ್ನಿವೇಶವನ್ನು ಸೃಷ್ಟಿ ಮಾಡಬಾರದು. ಸಂದರ್ಶನ ನಡೆದಿದೆ ಎಂಬ ಕಲ್ಪನೆ ನಿರೂಪಕನಿಗೆ ಉಂಟಾಗದ ರೀತಿಯಲ್ಲಿ ಸಹಜ ಸನ್ನಿವೇಶಗಳಲ್ಲಿ ಸಂದರ್ಶನವನ್ನು ನಡೆಸಬೇಕಾಗುತ್ತದೆ. ಏಕೆಂದರೆ ಸಹಜ ಸನ್ನಿವೇಶಗಳು ಮಾತ್ರ ಭಾಷೆಯ ನೈಜ ಚಿತ್ರಣ ನೀಡ ಬಲ್ಲವಾದುದರಿಂದ ಅವುಗಳ ವಿವರಣೆ, ವರ್ಣನೆಗಳನ್ನು ಸಂಗ್ರಹಿಸಬೇಕಾಗಿರುತ್ತದೆ. ಆ ಭಾಷಾ ಸಮುದಾಯದಲ್ಲಿ ನಡೆಯುವ ಹಬ್ಬ, ಮದುವೆ, ಜಾತ್ರೆ, ನಾಟಕ, ಒಗಟು, ಗಾದೆ ಮತ್ತು ಜನಪದ ಹಾಡುಗಳನ್ನು ಸಂಶೋಧಕ ನೋಡಬೇಕು, ಕೇಳಬೇಕು, ಇದರಿಂದ ಆ ಜನರ ಔಪಚಾರಿಕ ಸಂಭಾಷಣೆಗೂ ಅವರ ಸಾಮಾನ್ಯ ಮಾತಿಗೂ ಇರಬಹುದಾದ ವ್ಯತ್ಯಾಸಗಳನ್ನು ಗುರುತಿಸಲು ಅನುಕೂಲವಾಗುವುದು.

ಯಾವುದೇ ಒಂದು ಭಾಷಾ ಸಮುದಾಯದಲ್ಲಿ ಧರ್ಮ, ನಂಬಿಕೆ, ಆಚರಣೆಯ ಬಗೆಗೆ ಹಾಗೆಯೇ ಕೆಲವು ಪದಗಳ ಉಚ್ಚಾರಣೆ ಬಗೆಗೆ ನಿರ್ಬಂಧನೆಗಳಿರುತ್ತವೆ (ಉದಾ : ನಿಷಿದ್ಧ ಪದಗಳು) ಇಂತಹ ಸಾಮಾಜಿಕ ಸಂದರ್ಭಗಳಲ್ಲಿ ಸಂಶೋಧಕ ಬುದ್ಧಿವಂತಿಕೆಯಿಂದ ವರ್ತಿಸಬೇಕಾಗುತ್ತದೆ. ಹಾಗೆಯೇ ಗುಂಪು ಸಂದರ್ಶನ ನಡೆಸುವಾಗ ಸಂಶೋಧಕ ಬಹಳ ಎಚ್ಚರಿಕೆಯಿಂದ ಇರಬೇಕಾಗಿರುತ್ತದೆ. ಗುಂಪಿನಲ್ಲಿ ಎಲ್ಲಾ ನಿರೂಪಕರನ್ನು ಸಮಾನ ಮನಸ್ಸಿನಿಂದ ನೋಡಬೇಕಾಗುತ್ತದೆ. ಒಂದು ವೇಳೆ ಅವರಲ್ಲಿ ಕೆಲವರು ಸರಿಯಾಗಿ ಪ್ರಶ್ನೆಗಳನ್ನು ಅರ್ಥಮಾಡಿಕೊಳ್ಳದೇ ಅಥವಾ ಬೇರೆ ಕಾರಣಗಳಿಂದಾಗಿ ಸರಿಯಾಗಿ ಉತ್ತರಿಸದೇ ಇರಬಹುದು ಅಂತಹವರ ಬಗೆಗೆ ವಿರೋಧ ವ್ಯಕ್ತಪಡಿಸದೆ ತಾಳ್ಮೆಯಿಂದಿರಬೇಕು. ಒಂದು ವೇಳೆ ಆ ಗುಂಪಿನ

ನಡುವೆಯೇ ಅಂತಹವರ ಮೇಲೆ ವಿರೋಧ ವ್ಯಕ್ತಪಡಿಸಿದರೆ ಸಂಶೋಧಕ ಮತ್ತು ನಿರೂಪಕರ ನಡುವೆ ಮನಸ್ತಾಪ ಉಂಟಾಗಬಹುದು.

ಸಂಶೋಧಕ ತಾನು ಆಯ್ಕೆ ಮಾಡಿಕೊಂಡ ಭಾಷಾ ಸಮುದಾಯ ಯಾವ ಪ್ರಕಾರವಾಗಿರುತ್ತದೆ ಅಂದರೆ ದ್ವಿಭಾಷಿಕ ಸಮುದಾಯವೇ ? ಅಥವಾ ಬಹುಭಾಷಿಕ ಸಮುದಾಯವೇ? ಎಂಬುದನ್ನು ತಿಳಿದಿರಬೇಕಾಗುತ್ತದೆ. ಹಾಗೆಯೇ ಆ ಭಾಷಾ ಸಮುದಾಯದಲ್ಲಿ ಅನ್ಯಭಾಷಾ ಪ್ರಭಾವ ಎಷ್ಟರ ಮಟ್ಟಿಗೆ ಪರಿಣಾಮ ಬೀರಿದೆ ಎಂಬ ಸ್ಪಷ್ಟ ತಿಳಿವಳಿಕೆ ಸಂಶೋಧಕನಿಗೆ ಇರಬೇಕಾಗಿರುತ್ತದೆ. ಕೆಲವು ವೇಳೆ ತಮ್ಮ ಭಾಷಾ ಸಮುದಾಯದ ಆಡುನುಡಿಯ ಜೊತೆಗೆ ನಿರ್ದಿಷ್ಟ ಉದ್ದೇಶಗಳಿಗಾಗಿ ಶಿಷ್ಟ ಭಾಷೆಯನ್ನೂ ಬಳಸುತ್ತಿರಬಹುದು. ಇಂತಹ ಸಂದರ್ಭಗಳಲ್ಲಿ ಸಂಶೋಧಕ ಬಹಳ ಎಚ್ಚರಿಕೆಯಿಂದಿರುವುದರ ಜೊತೆಗೆ ಆ ಭಾಷಾ ಸಮುದಾಯದ ಭಾಷಾ ರೂಪಗಳ ಮತ್ತು ಅವು ಬಳಕೆಯಲ್ಲಿರುವ ವಲಯಗಳ ಬಗೆಗೆ ವಿಶೇಷ ಗಮನವಿರಿಸಬೇಕಾಗಿರುತ್ತದೆ.

ಹೀಗೆ ಭಾಷಾ ಸಂಶೋಧಕನು ತಾನು ಕ್ಷೇತ್ರಕಾರ್ಯ ನಡೆಸುವ ಭಾಷಾ ಸಮುದಾಯದ ನಡುವೆ ಒಂದು ನಿಕಟ ಸಂಬಂಧವಿರಿಸಿಕೊಂಡು ಉತ್ತಮವಾದ ಭಾಷಾ ಸಾಮಗ್ರಿಗಳನ್ನು ಸಂಗ್ರಹಿಸಬೇಕಾಗುತ್ತದೆ. ಉತ್ತಮವಾದ ಸಾಮಗ್ರಿಗಳ ಮೇಲಿಯೇ ಸಂಶೋಧಕನ ಸಂಶೋಧನೆಯ ಫಲ ನಿಂತಿರುತ್ತದೆಯಾದ್ದರಿಂದ ಸಂಶೋಧಕನು ಬೇರೆ ಬೇರೆ ಸಂಶೋಧನ ತಂತ್ರಗಳನ್ನು ಸಂದರ್ಭೋಚಿತವಾಗಿ ಬಳಸಿ ಸಾಮಗ್ರಿ ಸಂಗ್ರಹ ಮಾಡಬೇಕು. ಆಗ ಮಾತ್ರವೇ ಭಾಷಾ ವಿಶ್ಲೇಷಣೆ ಸಮರ್ಪಕವಾಗುತ್ತದೆ.

ಪರಾಮರ್ಶನ ಗ್ರಂಥಗಳು

1. Ember R. Carol and Ember Melvin 1981 Anthropology Prentice Hall of India, New-Delhi
2. Lounsbury, floyd G. 1953 Field methods and Techniques in linguistics in A,L. Krober (ed) Anthropology To day and an Encyclopedic Inventory. Chicago. University of Chicago.
3. Samarin. W.J. 1966 Field Linguistics : A Guide to linguistic Field work. Holt, Rinehart and Winston

ಇಂಡೋ ಆರ್ಯನ್ ಭಾಷೆಗಳಲ್ಲಿ ಪ್ರಾಕೃತದ ಸ್ಥಾನ

ಡಾ. ಆರ್. ರಾಮಕೃಷ್ಣ

ಪ್ರಾಕೃತವು ಭಾರತದ ಪ್ರಾಚೀನ ಭಾಷೆಗಳ ಪೈಕಿ ಒಂದು. ಇಂಡೋ ಆರ್ಯನ್ ಭಾಷಾ ಗುಂಪಿಗೆ ಇದು ಸೇರಿದೆ. ಇಂಡೋ ಆರ್ಯನ್ ಭಾಷೆಗಳ ಇತಿಹಾಸ ಪ್ರಾರಂಭವಾಗುವುದು ಆರ್ಯರು ಮೊತ್ತಮೊದಲು ಭಾರತದಲ್ಲಿ ಕಾಲೂರಿದ ದಿನದಿಂದ. ಆದರೆ ಭಾರತದ ನೆಲದಲ್ಲಿ ಕಾಲೂರಿದವರಲ್ಲಿ ಆರ್ಯರೇ ಮೊದಲಿಗರಲ್ಲ. ಅವರಿಗಿಂತಲೂ ಹಿಂದೆ ನೀಗ್ರಿಟೊ, ಆಸ್ಟ್ರಿಕ್, ದ್ರಾವಿಡ ಮತ್ತು ಮಂಗೋಲಿಯನ್ ಸಮುದಾಯಗಳು ಇಲ್ಲಿದ್ದವು. ಈ ಸಮುದಾಯಗಳು ಆಡುತ್ತಿದ್ದ ಭಾಷೆಗಳ ಅವಶೇಷಗಳನ್ನು ವೇದ ಮತ್ತು ಸಂಸ್ಕೃತ ಭಾಷೆ ಉಳಿಸಿಕೊಂಡಿವೆ.

ಇಂಡೋ ಆರ್ಯನ್ ಭಾಷಾ ಗುಂಪಿನ ಅತಿ ಪ್ರಾಚೀನ ಉಲ್ಲೇಖವೆಂದರೆ ಋಗ್ವೇದ. ವೇದಗಳ ಕಾಲದ ಬಗೆಗಿನ ಹಲವಾರು ಸಿದ್ಧಾಂತಗಳನ್ನು ತೌಲನಿಕವಾಗಿ ಪರಿಶೀಲಿಸಿದಾಗ, ಅದು ಕ್ರಿ. ಪೂ. ೧೫೦೦ - ೧೩೦೦ ರ ಅವಧಿಯದು ಎಂದು ಹೇಳಬಹುದು. ವೇದಗಳಿಂದ ಮೊದಲ್ಗೊಂಡು ಈಗ ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ ಬಳಕೆಯಲ್ಲಿರುವ ಈ ಶಾಖೆಯ ಅನೇಕ ಭಾಷೆಗಳಿಗೆ ಸುಮಾರು ೩೦೦೦ ವರ್ಷಗಳ ಇತಿಹಾಸವಿದೆ ಎನ್ನಬಹುದು. ಕಾಲದ ಪರಿಧಿಯಲ್ಲಿ ಭಾಷೆಗಳು ಸದಾ ಬದಲಾಗುತ್ತಿರುತ್ತವೆ. ಇದು ಅನಿವಾರ್ಯ. ಸುದೀರ್ಘ ಇತಿಹಾಸವುಳ್ಳ ಈ ಇಂಡೋ ಆರ್ಯನ್ ಭಾಷೆಗಳು ಬದಲಾವಣೆಯ ಹಲವಾರು ಘಟ್ಟಗಳನ್ನು ಹೊಂದಿವೆ. ಈ ದೃಷ್ಟಿಯಿಂದ ಅವುಗಳಲ್ಲಿ ಮೂರು ಪ್ರಮುಖ ಘಟ್ಟಗಳನ್ನು ಗುರುತಿಸಬಹುದು : ೧. ಪೂರ್ವಕಾಲೀನ ಇಂಡೋ ಆರ್ಯನ್, ೨. ಮಧ್ಯಕಾಲೀನ ಇಂಡೋ ಆರ್ಯನ್ ಮತ್ತು ೩. ಆಧುನಿಕ ಇಂಡೋ ಆರ್ಯನ್.

೧. ಪೂರ್ವಕಾಲೀನ ಇಂಡೋ ಆರ್ಯನ್ : ಈ ಘಟ್ಟದಲ್ಲಿ ಕಾಣಿಸಿಕೊಳ್ಳುವ ವೈದಿಕ ಸಂಸ್ಕೃತ ಮತ್ತು ಅಭಿಜಾತ ಸಂಸ್ಕೃತ ಭಾಷೆಗಳಲ್ಲೇ ಭಿನ್ನತೆಗಳಿರುವುದನ್ನು ಕಾಣಬಹುದು. ವೇದದಿಂದ ಮೊದಲ್ಗೊಂಡು ಪಾಣಿನಿಯ ತನಕ (ಕ್ರಿ. ಪೂ. ಸು. ೪ನೆಯ ಶತಮಾನ) ಪೂರ್ವಕಾಲೀನ ಇಂಡೋ ಆರ್ಯನ್ ಭಾಷಾಯುಗ. ವೇದಗಳು ಆಡುನುಡಿಗೆ ಹತ್ತಿರವಾಗಿದ್ದವು. ಅಂತೆಯೇ ವೇದಗಳ ಪ್ರಯೋಗಗಳಲ್ಲಿ ಸ್ವಚ್ಛಂದತೆ ಇತ್ತು. ವೈವಿಧ್ಯ ವೈಶಿಷ್ಟ್ಯಗಳಿದ್ದವು. ಈ ಅಂಶಗಳು ಅಭಿಜಾತ ಸಂಸ್ಕೃತದಲ್ಲಿ ಕಂಡುಬರುವುದಿಲ್ಲ. ಧ್ವನಿ

ವ್ಯವಸ್ಥೆಯಲ್ಲಿ ಬದಲಾವಣೆಗಳಿರುವುದನ್ನು ಗಮನಿಸಬಹುದು. ಧ್ವನಿ ವ್ಯವಸ್ಥೆಯಲ್ಲಿ ಮುಖ್ಯ ಸಂಗತಿಯೆಂದರೆ ವೇದಗಳಲ್ಲಿ ಬರುವ ಉದಾತ್ತ, ಅನುದಾತ್ತ ಸ್ವರಾಘಾತದ ಪ್ರಾಬಲ್ಯ ಮುಂದೆ ಕಡಿಮೆಯಾಗಿರುವುದು. ಆಕೃತಿಮಾ ವ್ಯವಸ್ಥೆಯಲ್ಲಿ ವೇದಭಾಷೆ ವಿವಿಧ ಪ್ರಯೋಗಗಳ ಮೂಲಕ ಶ್ರೀಮಂತವೆನಿಸಿದೆ. ಈ ಪ್ರಕ್ರಿಯೆ ಇಂಡೋ ಯೂರೋಪಿಯನ್ ಭಾಷಾ ಸ್ವರೂಪವನ್ನು ಉಳಿಸಿಕೊಂಡುದರ ಸಂಕೇತ. ಅಭಿಜಾತ ಸಂಸ್ಕೃತದಲ್ಲಿ ನಾಮಪದ ನಿಷ್ಪತ್ತಿಯ ವಿಚಾರದಲ್ಲಿ ವೈವಿಧ್ಯ ಕಡಿಮೆ. ವೇದದ ನಾಮ ಪ್ರತ್ಯಯ - (ಯಯುಜ್ಯು - ಧಾರ್ಮಿಕ, ದೇವಯು - ದೈವಭಕ್ತ) ಎಂಬುದು ಮುಂದಿನ ದಿನಗಳಲ್ಲಿ ಉಳಿಯಲಿಲ್ಲ. ವೇದಗಳ ಕ್ರಿಯಾ ರೂಪಗಳಲ್ಲಿ ಸಿರಿವಂತಿಕೆ ಇದ್ದು. ಅವು ಪೂರ್ಣವಾಗಿವೆ. ಆದರೆ ಅಭಿಜಾತ ಸಂಸ್ಕೃತದಲ್ಲಿ ಹಲವಾರು ಪ್ರಯೋಗಗಳು ಮರೆಯಾಗಿ ನಿರ್ದಿಷ್ಟ ವ್ಯವಸ್ಥೆ ಮತ್ತು ಸರಳತೆ ಕಾಣಿಸಿಕೊಂಡಿವೆ. ವೇದಗಳಲ್ಲಿ ಕಾಣಿಸಿಕೊಳ್ಳದ ಪುನರುಕ್ತಿ ಮತ್ತು ಸಹಾಯಕ ಕ್ರಿಯಾಪದಗಳು ಭೂತಕಾಲದಲ್ಲಿ ಮುಂದಿನ ಸ್ವರೂಪಗಳಲ್ಲಿ ಕಾಣಿಸಿಕೊಳ್ಳುತ್ತವೆ. ಉದಾಹರಣೆಗೆ ಜೂ -ಜೂಜೂ, ಭೂ-ಬಭೂವ, ವಚ್-ವವಾಚೇ ಮೊದಲಾದವು ವೇದಗಳಲ್ಲಿ ಪೂರ್ವ ಪ್ರತ್ಯಯ ವಿಚಾರದಲ್ಲಿ ಮುಕ್ತತೆಯಿತ್ತು. ಅದು ಕ್ರಿಯಾಪದಕ್ಕಿಂತ ನಾಲ್ಕರು ಆಕೃತಿಮಾಗಳ ಮೊದಲು ಅಥವಾ ಸ್ವತಂತ್ರವಾಗಿಯೂ ಬಳಕೆಯಾಗುತ್ತಿತ್ತು. ಮುಂದಿನ ದಿನಗಳಲ್ಲಿ ಅದರ ಸ್ಥಾನ ನಿರ್ದುಷ್ಟವಾಯಿತು. ವೇದಗಳಲ್ಲಿ ಪ್ರಚುರವಾಗಿದ್ದ ಹಲವಾರು ಆಕೃತಿಮಾಗಳು ಮುಂದೆ ಇಲ್ಲವಾಗಿವೆ. ಉದಾಹರಣೆಗೆ : ಅತ್ಕ - ಅಡುಗೆ, ಅಪಸ್ - ಕಾರ್ಯ, ಅಪಿ-ಮಿತ್ರ, ಗಾತು - ದಾರಿ ಮೊದಲಾದವು ಎಷ್ಟೋ ಶಬ್ದಗಳು ಸ್ವೀಕೃತಗೊಂಡಿವೆ.

೨. ಮಧ್ಯಕಾಲೀನ ಇಂಡೋ ಆರ್ಯನ್ : ಸಂಸ್ಕೃತ ಬಳಕೆಯಲ್ಲಿದ್ದಾಗಲೇ ಮಧ್ಯಕಾಲೀನ ಇಂಡೋ ಆರ್ಯನ್ ಭಾಷೆಗಳು ಸಂಸ್ಕೃತದ ಪ್ರತಿ ಸ್ಪರ್ಧಿಗಳೆಂಬಂತೆ ಹಲವಾರು ರೂಪಗಳಲ್ಲಿ ವಿಕಾಸಗೊಂಡಿದ್ದುವು. ಅವು ಹೆಚ್ಚಾಗಿ ಆಡುನುಡಿಗಳಾಗಿದ್ದರೂ ಗ್ರಂಥ ರೂಪಗಳಲ್ಲೂ ಇದ್ದುವು. ಈ ಸ್ಪರ್ಧೆ ಪ್ರಾರಂಭದಲ್ಲಿ ಅತಿಯಾಗಿತ್ತು. ಗಮನಿಸಬೇಕಾದ ಸಂಗತಿಯೆಂದರೆ, ಸಂಸ್ಕೃತ ಭಾಷೆ ಆಡಳಿತ ಭಾಷೆಯಾಗಿ ಪೂರ್ಣವಿಕಾಸ ಹೊಂದಿದ್ದು ಅದು ಮಾತೃಭಾಷೆಯ ಸ್ಥಾನದಿಂದ ದೂರಾದ ಬಳಿಕ ಕ್ರಿ.ಪೂ. ೫೦೦ರ ಹೊತ್ತಿಗೆ ಬೌದ್ಧ ಮತ್ತು ಜೈನ ಧರ್ಮಗಳ ಉದಯದೊಂದಿಗೆ ಮಧ್ಯಕಾಲೀನ ಇಂಡೋ ಆರ್ಯನ್ ಭಾಷೆಗಳೂ ಪ್ರಾಮುಖ್ಯ ಪಡೆದುಕೊಂಡುವು. ಬೌದ್ಧ ಜೈನ ಮತಸ್ಥಾಪಕರು ಆಡುನುಡಿಯನ್ನೇ ತಮ್ಮ ತಮ್ಮ ಧರ್ಮ ಪ್ರಚಾರಕ್ಕೆ ಬಳಸಿಕೊಂಡದ್ದೇ ಇದಕ್ಕೆ ಮುಖ್ಯ ಕಾರಣ. ಸಾಮ್ರಾಟ ಅಶೋಕನ ಶಾಸನಗಳೆಲ್ಲ ಪ್ರಾಕೃತದಲ್ಲೇ ಇರುವುದು ಈ ಮಾತಿಗೆ ನಿದರ್ಶನ. ಶಾಸನಗಳಲ್ಲಿ ಸಂಸ್ಕೃತಕ್ಕಿಂತ ಮುಂಚೆ ಪ್ರಾಕೃತ ಬಳಕೆಯಾದುದನ್ನು ಗಮನಿಸಬೇಕು. ಬೌದ್ಧ ಜೈನ ಮತಗಳ ಪ್ರಾರಂಭದ

ಗ್ರಂಥಗಳೆಲ್ಲ ಮಧ್ಯಕಾಲೀನ ಇಂಡೋ ಆರ್ಯನ್ ಭಾಷೆಗಳಲ್ಲೇ ಇವೆ. ಕಾಲ ಕ್ರಮೇಣ ಸಂಸ್ಕೃತ ಭಾಷೆಯ ಪ್ರಾಚುರ್ಯ ಹೆಚ್ಚಾಗಿ ಬೌದ್ಧ ಜೈನ ಧರ್ಮಗ್ರಂಥಗಳಿಗೂ ಸಂಸ್ಕೃತವೇ ಮಾಧ್ಯಮವಾಯಿತು. ಸಂಸ್ಕೃತ ಮತ್ತು ಪ್ರಾಕೃತಗಳ ಏಳುಬೀಳು ಬ್ರಾಹ್ಮಣ ಧರ್ಮ ಮತ್ತು ಜೈನ ಧರ್ಮಗಳ ಏಳುಬೀಳುಗಳೊಡನೆ ಬೆಸೆದುಕೊಂಡಿದೆ. ಅಂತಿಮವಾಗಿ ಬ್ರಾಹ್ಮಣ ಧರ್ಮ ಪುನಃ ಪ್ರಬಲವಾಗಿ ಸಂಸ್ಕೃತವೇ ನಾಡಿನುದ್ದಕ್ಕೂ ಪ್ರಮುಖ ಭಾಷಾಮಾಧ್ಯಮವಾಯಿತು. ಸಂಸ್ಕೃತ ಪ್ರಾಕೃತಗಳ ಸ್ಥಾನಮಾನ, ಭಾಷಾ ಪ್ರಯೋಗಗಳ ಬಗ್ಗೆ ಸಂಸ್ಕೃತನಾಟಕಗಳಿಂದ ಹಲವಾರು ನಿದರ್ಶನಗಳನ್ನು ಪಡೆಯಬಹುದು. ನಾಟಕಗಳಲ್ಲಿ ಕೆಲವು ಪಾತ್ರಗಳು ಸಂಸ್ಕೃತದಲ್ಲೂ ಮತ್ತೆ ಕೆಲವು ಪಾತ್ರಗಳು ಪ್ರಾಕೃತದಲ್ಲೂ ಮಾತನಾಡುವ ಪದ್ಧತಿ ರೂಢಿಯಲ್ಲಿತ್ತು. ಪ್ರಭುಗಳು, ಮಂತ್ರಿಗಳು, ಬ್ರಾಹ್ಮಣರು ಮೊದಲಾದ ಉಚ್ಚವರ್ಗದ ಮಂದಿ ಸಂಸ್ಕೃತವನ್ನು ಬಳಸಿದರೆ, ಸ್ತ್ರೀಯರು, ಮಕ್ಕಳು, ವಿದೂಷಕ ಪಾತ್ರವರ್ಗ ಪ್ರಾಕೃತವನ್ನು ಬಳಸುತ್ತಿದ್ದರು. ಗಮನಾರ್ಹ ಸಂಗತಿಯೆಂದರೆ ವಿದೂಷಕನ ಪಾತ್ರವಹಿಸುವ ವ್ಯಕ್ತಿ ಬ್ರಾಹ್ಮಣನಾಗಿದ್ದರೂ ಅವನು ಪ್ರಾಕೃತದಲ್ಲೇ ಸಂಭಾಷಿಸಬೇಕಾಗಿತ್ತು. ಗಮನಿಸಬೇಕಾದ ವಿಚಾರವೆಂದರೆ ಪ್ರಾಕೃತಗಳು ಆಡುನುಡಿಗಳಾಗಿದ್ದುವು. ಶ್ರೀಸಾಮಾನ್ಯರು ಅವನ್ನೇ ಬಳಸುತ್ತಿದ್ದರು ಆದರೆ ಸಂಸ್ಕೃತ ಗ್ರಂಥಭಾಷೆಯಾಗಿ ಪ್ರಸಿದ್ಧಿ ಪಡೆದಿತ್ತು. ಆಡಳಿತ, ಧಾರ್ಮಿಕ ವಿಚಾರಗಳ ಚರ್ಚೆ ಮೊದಲಾದವಕ್ಕೆ ಮಾತ್ರ ಅದರ ಬಳಕೆಯಾಗುತ್ತಿತ್ತು.

ಪ್ರಾಕೃತ ಭಾಷೆಯ ಉಗಮದ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಪ್ರಾಕೃತವು ಸಂಸ್ಕೃತದಿಂದ ಉಗಮಿಸಿದೆ ಎಂದು ಕೆಲವು ವಿದ್ವಾಂಸರು ಅಭಿಪ್ರಾಯಪಟ್ಟರೆ ಮತ್ತೆ ಕೆಲವರು ಸಂಸ್ಕೃತವೇ ಪ್ರಾಕೃತದಿಂದ ಸಂಸ್ಕರಣಗೊಂಡು ಉತ್ಪನ್ನವಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಪ್ರಾಕೃತವು ಸಂಸ್ಕೃತ ಜನ್ಯ ಎನ್ನುವವರು ಕೊಡುವ ಕಾರಣ ಇಂತಿದೆ.

೧. ಪ್ರಕೃತಿ :: ಸಂಸ್ಕೃತಂ ತತ್ರ ಭವಂ ತತ್ ಆಗತಂ ವಾ ಪ್ರಾಕೃತಂ!

ಈ ಸೂತ್ರದಂತೆ ಸಂಸ್ಕೃತವು ಪ್ರಕೃತಿ, ಪ್ರಾಕೃತವು ಸಂಸ್ಕೃತದಿಂದ ಜನಿಸಿದ್ದು.

೨. ಪ್ರಾಕೃತದಲ್ಲಿ ಪ್ರಯೋಗದಲ್ಲಿರುವ ಪದಗಳ ಪೈಕಿ ನೂರಕ್ಕೆ ತೊಂಬತ್ತೈದರಷ್ಟು ಪದಗಳು ಸಂಸ್ಕೃತ ಮೂಲದವು. ಈ ರೀತಿ ಸಂಸ್ಕೃತ ಪ್ರಕೃತಿಯಿಂದ ಜನಿಸಿದೆಯಾದ್ದರಿಂದ ಪ್ರಾಕೃತ ಎಂಬ ಹೆಸರು ಬಂದಿದೆ.

ಮತ್ತೊಂದು ಅಭಿಪ್ರಾಯದ ಪ್ರಕಾರ, ಸಂಸ್ಕೃತ ಪ್ರಾಕೃತದಿಂದ ಹುಟ್ಟಿದೆ. ಏಕೆಂದರೆ, ಪ್ರಕೃತಿ ಎಂದರೆ ಸ್ವಾಭಾವಿಕ, ಉಗಮಮೂಲ, ಸಹಜ ಎಂಬ ಅರ್ಥವುಂಟು. ಈ ಅರ್ಥದಂತೆ ಪ್ರಾಕೃತವು ಸಾಮಾನ್ಯ ಜನರ ಭಾಷೆ. ಇದರಿಂದ ವ್ಯಾಕರಣ ನಿಯಮಗಳ ಚೌಕಟ್ಟಿಗೆ ಅನುಗುಣವಾಗಿ ಸಂಸ್ಕರಣಗೊಡು ಶಿಷ್ಟರ ಭಾಷೆಯಾದ ಸಂಸ್ಕೃತವು ಉಗಮಿಸಿದೆ.

ಪ್ರಾಕೃತ ಭಾಷೆ ಪಾಣಿನಿ ಮೊದಲಾದವರ ವ್ಯಾಕರಣಗಳ ಚೌಕಟ್ಟಿಗೆ ಅನುಸಾರವಾಗಿ ಸಂಸ್ಕರಣ ಹೊಂದಿರುವ ಸಂಸ್ಕೃತದಿಂದ ಜನಿಸಿಲ್ಲವೆಂದು ಹಾಗೂ ಈ ಅರ್ವಾಚೀನ ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳೆರಡೂ ಜನ ಸಾಮಾನ್ಯರಲ್ಲಿ ಬಳಕೆಯಲ್ಲಿದ್ದ ಭಾಷೆಯೊಂದರಿಂದ ಅಂದರೆ (ಅಂದರೆ ಪೂರ್ವಕಾಲೀನ ಪ್ರಾಕೃತ ಭಾಷೆ) ಜನಿಸಿವೆ ಎಂಬುದಾಗಿ ಪ್ರಾಕೃತ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪರಿಣತಿ ಪಡೆದಿರುವ ವಿದ್ವಾಂಸರಾದ ಡಾ. ಪಿ. ಎಲ್. ವೈದ್ಯ ಅಭಿಪ್ರಾಯಪಟ್ಟಿದ್ದಾರೆ. ಆದರೆ ಅರ್ವಾಚೀನ ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳಿಗೆ ಮೂಲವಾಗಿದ್ದ ಆ ಪ್ರಾಕ್‌ರೂಪ ಅಥವಾ ಪ್ರಾಕ್ ಭಾಷೆ (Protolanguage)ಯಾವುದು ಎಂಬುದನ್ನು ಸಂಶೋಧಿಸಬೇಕಾಗಿದೆ.

ಮೇಲೆ ಕಾಣಿಸಿರುವ ಎಲ್ಲ ವಿವರಣೆಗಳಿಂದ ತಿಳಿದುಬರುವ ವಿಚಾರವೆಂದರೆ ಪ್ರಾಕೃತವು ಸಂಸ್ಕೃತಜನ್ಯವಲ್ಲವೆಂದೂ ಯಾವುದೋ ಪೂರ್ವಕಾಲೀನ ಪ್ರಾಕ್ ಭಾಷೆಯೊಂದರಿಂದ ಜನಿಸಿದೆಯೆಂದು ಹೇಳಬಹುದು.

ಪ್ರಾಕೃತವು ಪೂರ್ವಕಾಲೀನ ಇಂಡೋ ಆರ್ಯನ್ ಮತ್ತು ಆಧುನಿಕ ಇಂಡೋ ಆರ್ಯನ್ ಭಾಷೆಗಳ ನಡುವಿನ ಕೊಂಡಿ ಎಂದು ಪರಿಭಾವಿಸಬಹುದು.

ಭಾಷಾವಿಜ್ಞಾನದ ನಿಟ್ಟಿನಿಂದ ಗಮನಿಸಿದಾಗ, ಮಧ್ಯಕಾಲೀನ ಇಂಡೋ ಆರ್ಯನ್ ಭಾಷಾ ಪ್ರಭೇದಗಳಾದ ಪ್ರಾಕೃತರೂಪಗಳು ಅರ್ವಾಚೀನ ಅಥವಾ ಆಧುನಿಕ ಇಂಡೋ ಆರ್ಯನ್ ಭಾಷೆಗಳಾಗಿ ಪರಿವರ್ತನೆ ಪಡೆದಿವೆ ಎಂಬಂಶ ಸ್ಪಷ್ಟವಾಗುತ್ತದೆ.

ಪ್ರಾಕೃತ ವೈಯಾಕರಣರು ಸಾಮಾನ್ಯ ಲಕ್ಷಣಗಳನ್ನುಳ್ಳ ಪ್ರಾಕೃತವನ್ನು ಪ್ರಾಕೃತದ ಪ್ರಧಾನ ಪ್ರಭೇದವೆಂದು ಪರಿಗಣಿಸಿದ್ದಾರೆ. ಉಳಿದ ಎಲ್ಲ ಪ್ರಾಕೃತ ಪ್ರಕಾರಗಳನ್ನು ಪ್ರಾದೇಶಿಕ ಪ್ರಭೇದಗಳೆಂದು ಪರಿಗಣಿಸಿದ್ದಾರೆ. ಕೆಲವು ವೈಯಾಕರಣರು ಪ್ರಧಾನ ಪ್ರಾಕೃತವನ್ನು ಯಾವುದೇ ಶೀರ್ಷಿಕೆಯಿಂದ ನಿರ್ದೇಶಿಸಿಲ್ಲ. ಆದರೆ ಕೆಲವು ವಿದ್ವಾಂಸರು ಅದನ್ನೇ ಮಹಾರಾಷ್ಟ್ರೀ ಪ್ರಾಕೃತವೆಂದು ಕರೆದಿದ್ದಾರೆ. ಹೇಮಚಂದ್ರ ಮತ್ತು ತ್ರಿವಿಕ್ರಮರು ಪ್ರಾಕೃತವನ್ನು ೧. ಪ್ರಧಾನ ಪ್ರಾಕೃತ ೨. ಶೌರಸೇನೀ. ೩. ಮಾಗಧಿ ೪. ಪೈಶಾಚೀ ೫. ಚೂಲಿಕಾ ಪೈಶಾಚೀ ೬. ಅಪಭ್ರಂಶ ಎಂಬುದಾಗಿ ಆರು ಪ್ರಕಾರಗಳನ್ನಾಗಿ ವರ್ಗೀಕರಿಸಿ ಆ ಪ್ರಭೇದಗಳ ಸ್ವರೂಪ ಲಕ್ಷಣಗಳನ್ನು ನಿರೂಪಿಸಿದ್ದಾರೆ. ಈ ಎಲ್ಲ ಪ್ರಭೇದಗಳೂ ಮಹಾರಾಷ್ಟ್ರದಲ್ಲಿ ಉದ್ಭವವಾದುವೆಂದು ಊಹಿಸಲಾಗಿದೆ. 'ಮಹಾರಾಷ್ಟ್ರದ ಆಶ್ರಯವುಳ್ಳ ಭಾಷಾರೂಪವನ್ನು ಉತ್ತಮವಾದ ಪ್ರಾಕೃತವೆಂದು ಹೇಳುವರು ಎಂದು ದಂಡಿ ಅಭಿಪ್ರಾಯಪಟ್ಟಿದ್ದಾನೆ. ಮಾರ್ಕಂಡೇಯನು ತನ್ನ 'ಪ್ರಾಕೃತ ಸರ್ವಸ್ವ'ದಲ್ಲಿ ಪ್ರಾಕೃತವು ಹದಿನಾರು ಪ್ರಭೇದಗಳನ್ನು ಪಡೆದಿದೆ ಎಂದು

ಹೇಳಿ, ಆಯಾ ಪ್ರಾದೇಶಿಕತೆಗನುಗುಣವಾಗಿ ಪ್ರಾಕೃತ ಪ್ರಭೇದಗಳನ್ನು ತಿಳಿಯಬೇಕು ಎಂದಿದ್ದಾನೆ. ಕಾವ್ಯರಚನೆಯಲ್ಲಿ ಮಹಾರಾಷ್ಟ್ರೀ ಪ್ರಾಕೃತಕ್ಕೆ ವಿಶೇಷ ಮನ್ನಣೆ ಹಾಲರಾಜನ 'ಗಾಥಾ ಸಪ್ತಶತೀ' ವಾಕ್ಪತಿರಾಜನ 'ಗ ಉಡವ ಹೋ', ಪ್ರವರಸೇನನ 'ಸೇತು ಬಂಧ' ಮಹಾರಾಷ್ಟ್ರೀ ಪ್ರಾಕೃತಕ್ಕೆ ಉತ್ತಮ ಉದಾಹರಣೆಗಳು. ಈ ಪ್ರಭೇದ ನಾಟಕಗಳಲ್ಲಿಯೂ ಪ್ರಯೋಗಗೊಂಡಿದೆ. ಮಾಗಧೀ, ಪೈಶಾಚೀ ಮೊದಲಾದ ಪ್ರಭೇದಗಳೂ ನಾಟಕಗಳಲ್ಲಿ ಕಾಣಿಸಿಕೊಂಡಿವೆ. ಈ ಪೈಕಿ ಶೌರಸೇನೀ ಪ್ರಭೇದ ಹೆಚ್ಚು ಪ್ರಚಲಿತವಾಗಿದೆ.

ಭಾಷಾ ವಿಕಾಸದ ದೃಷ್ಟಿಯಿಂದ, ಶಾಸನಗಳ ಪ್ರಾಕೃತಗಳಾದ ಪಾಲೀ ಮತ್ತು ಪೈಶಾಚಿಗಳು ಪ್ರಾಚೀನವಾದುವು. ಶೌರಸೇನೀ ಮಾಗಧಿಗಳು ಅನಂತರ ಬರುತ್ತವೆ. ಈ ಪೈಕಿ ಒಂದು ಮಧ್ಯಪ್ರದೇಶದ ಉಪಭಾಷೆ ಮತ್ತೊಂದು ಪೂರ್ವಪ್ರದೇಶದ್ದು. ಅರ್ಧಮಾಗಧೀ ಪ್ರಭೇದ ಶಬ್ದಕೋಶ, ವಾಕ್ಯ ರಚನೆ ದೃಷ್ಟಿಯಿಂದ ಪಾಲಿಭಾಷೆಗೆ ಹತ್ತಿರವಾಗಿದೆ. ಮಹಾರಾಷ್ಟ್ರೀ ಪ್ರೌಢವಾದ ಮಹಾಕಾವ್ಯ ಮತ್ತು ಭಾವಗೀತೆ ಇವೆರಡಕ್ಕೂ ಒದಗುವಂಥ ವಿಸ್ತಾರ ಹಾಗೂ ಸಂಕೋಚ ಸಾಮರ್ಥ್ಯವುಳ್ಳ ಪ್ರಭೇದ. ಈ ಭಾಷಾ ಪ್ರಭೇದಗಳಲ್ಲಿ ಕೆಲವು ಆಡುನುಡಿಯಿಂದ ಸಾಹಿತ್ಯದ ದರ್ಜೆಗೆ ಏರಿವೆ. ಆದರೆ ವೈಯಾಕರಣರು ಅವುಗಳ ಪ್ರಾದೇಶಿಕತೆಗೆ ಗಮನಹರಿಸದೆ ಕ್ರಮೇಣ ಪಡಿಯಚ್ಚಾಗಿ ಮಾಡಿದರು. ಆ ವೇಳೆಗಾಗಲೇ ಜನರಾಡುವ ಭಾಷಾ ರೂಪಗಳು ಬಹಳಷ್ಟು ಮುಂದುವರಿದಿದ್ದುವು. ಸಾಹಿತ್ಯದಲ್ಲಿ ಪ್ರಯೋಗಗೊಳ್ಳುತ್ತಿದ್ದ ಪಾಕೃತಗಳಿಗೂ ಸಮಕಾಲೀನವಾದ ಜನರಾಡುತ್ತಿದ್ದ ಭಾಷರೂಪಕ್ಕೂ ನಡುವಣ ಅಂತರ ಅಧಿಕವಾಗುತ್ತಾ ಹೋಯಿತು. ಕ್ರಿ.ಶ. ೫ನೆಯ ಶತಮಾನದ ಹೊತ್ತಿಗೆ ಸಂಸ್ಕೃತ ಮತ್ತು ಪಾಕೃತಗಳ ಸಾಹಿತ್ಯಕ ರೂಪಗಳು ಪಡಿಯಚ್ಚಾಗಿ ಬಿಟ್ಟಿದ್ದುವು. ಜನರಾಡುವ ಭಾಷಾರೂಪಗಳಿಂದ ಅವು ಹೊರತಾಗಿ ಹೋಗಿರುವ ವಿಚಾರ ಹೆಚ್ಚು ಸ್ಪಷ್ಟವಾಗುತ್ತಿತ್ತು. ಅಪಭ್ರಂಶಗಳನ್ನು ಸಾಹಿತ್ಯದ ಭಾಷೆಯ ಮಟ್ಟಕ್ಕೇರಿಸಲು ಪ್ರಯತ್ನಗಳು ನಡೆದುವು. ಸಂಸ್ಕೃತ ಮತ್ತು ಪಾಕೃತಗಳ ಹಾಗೆ ಅಪಭ್ರಂಶವೂ ಪ್ರಾದೇಶಿಕ ರೂಪವಾಗಿ ಸ್ಥಿರಗೊಳ್ಳಲಿಲ್ಲ. ರಾಜಸ್ಥಾನ, ಗುಜರಾತ್ ಮೊದಲಾದ ಪ್ರದೇಶದಿಂದಾಚೆಗೂ ಅಪಭ್ರಂಶ ಹರಡಿ ಹೆಚ್ಚು ಪ್ರಾಚುರ್ಯವನ್ನು ಗಳಿಸಿಕೊಂಡಿತು. ನಾಮಪದ ಮತ್ತು ಕ್ರಿಯಾಪದಗಳ ಪ್ರತ್ಯಯಗಳು, ಸರ್ವನಾಮಗಳು, ಕ್ರಿಯಾ ವಿಶೇಷಣಗಳು, ಅವ್ಯಯಗಳು ಮೊದಲಾದ ವ್ಯಾಕರಣ ವರ್ಗಗಳನ್ನು ಅಪಭ್ರಂಶ ಜನಸಾಮಾನ್ಯರ ಆಡುನುಡಿಯಿಂದ ಪಡೆದುಕೊಂಡಿದೆ. ಕೆಲವೆಡೆ ಅನ್ಯಭಾಷಾ ಪ್ರಭಾವವೂ ಕಂಡುಬರುತ್ತದೆ. ಛಂದಸ್ಸು, ಅಲಂಕಾರಗಳು, ಜನಪದ ಗೀತೆಗಳ ಮಾಧುರ್ಯವನ್ನು ಒಳಗೊಂಡು ವಿನೂತನವಾಗಿದೆ. ತನ್ನ ಸರದಿಯಲ್ಲಿ ಅಪಭ್ರಂಶವೂ ಸಂಸ್ಕೃತ ಮತ್ತು ಪಾಕೃತದಂತೆಯೇ ಒಂದು ಸ್ಪಷ್ಟರೂಪವನ್ನು ಪಡೆಯಿತು. ಈ ಸಂದರ್ಭದಲ್ಲೇ ಆಧುನಿಕ ಇಂಡೋ ಆರ್ಯನ್

ಭಾಷೆಗಳು ಹುಟ್ಟಿಕೊಂಡುವು. ಇಂಡೋ ಆರ್ಯನ್‌ನ ಮಧ್ಯಕಾಲೀನ ಘಟ್ಟವನ್ನು ಪ್ರಾಕೃತಗಳೂ ಅಪಭ್ರಂಶವೂ ಪ್ರತಿನಿಧಿಸುತ್ತವೆ. ಪ್ರಾಕೃತ ಪ್ರಭೇಧಗಳ ಪೈಕಿ ಮಹಾರಾಷ್ಟ್ರೀ ಮತ್ತು ಅಪಭ್ರಂಶಗಳನ್ನು ಮೊತ್ತ ಮೊದಲು ಜನಸಾಮಾನ್ಯರು ತಮ್ಮ ಜನಪದ ಗೀತೆಗಳಿಗೂ ಕೆಲವು ದ್ವಿಪದಿಗಳಿಗೂ ಬಳಸಿಕೊಂಡು ಅವನ್ನು ಬೆಳೆಸಿದರೆಂದು ಊಹಿಸಲಾಗಿದೆ. ಆ ಮೂಲಗಳಿಂದ ಅವು ಕವಿಗಳ ಗಮನಕ್ಕೆ ಬಂದು ಆ ಮೂಲಕ ಸಾಹಿತ್ಯಕ್ಕೆ ಪ್ರವೇಶ ಪಡೆದವು. ಶೂದ್ರಕ ತನ್ನ ಮೃಚ್ಛಕಟಿಕದಲ್ಲಿ ಮಹಾರಾಷ್ಟ್ರೀ ಪದ್ಯಗಳಿಗೆ ಅವಕಾಶವಿತ್ತಿದ್ದಾನೆ. ಕಾಳಿದಾಸ ತನ್ನ ವಿಕ್ರಮೋರ್ವಶೀಯದಲ್ಲಿ ಅಪಭ್ರಂಶದ ಗೀತೆಗಳನ್ನು ಅಳವಡಿಸಿದ್ದಾನೆ. ವಿದ್ಯಾಪತಿ ಕ್ರಿ.ಶ. ೧೪೦೦ ರಲ್ಲಿ ತನ್ನ ಸಂಸ್ಕೃತ ಪ್ರಾಕೃತ ನಾಟಗಳಲ್ಲಿ ಮೈಥಿಲೀ ಗೀತಗಳನ್ನು ಬಳಸಿದ್ದಾನೆಂದು ವಿದ್ವಾಂಸರು ನಿರ್ಣಯಿಸಿದ್ದಾರೆ. ಆಧುನಿಕ ಇಂಡೋ ಆರ್ಯನ್ ಭಾಷೆಗಳು ಜನಸಾಮಾನ್ಯರ ದೈನಂದಿನ ಚಟುವಟಿಕೆಗಳಿಗೆ ಒದಗುವಂಥ ಕಾಲಘಟ್ಟವನ್ನು ತಲಪಿದ ಬಳಿಕವೂ ಸಂಸ್ಕೃತ, ಪ್ರಾಕೃತ ಮತ್ತು ಅಪಭ್ರಂಶಗಳ ಸಾಹಿತ್ಯ ಕೃಷಿ ನಡೆದೇ ಇತ್ತು.

ಪ್ರಾಕೃತ ಪ್ರಭೇದಗಳು ಸಂಸ್ಕೃತಕ್ಕಿಂತಲೂ ಭಿನ್ನವಾದ ಹಲವಾರು ವ್ಯಾಕರಣಾಂಶಗಳನ್ನು ಒಳಗೊಂಡಿವೆ. ಉಚ್ಚಾರಣೆಯಲ್ಲಿ ಋ,ಐ,ಔ ಸ್ವರಗಳು ಲೋಪವಾಗಿದೆ. ಮೂರು ಸಂಘರ್ಷ ಧ್ವನಿಗಳನ್ನು ಒಂದು ಧ್ವನಿಗಿಳಿಸಿರುವುದು ಕಂಡುಬರುತ್ತದೆ. ದ್ವಿತ್ವ ವರ್ಣಗಳ ಹಿಂದಿರುವ ದೀರ್ಘಸ್ವರ ಹ್ರಸ್ವವಾಗುತ್ತದೆ. ಎಲ್ಲ ಆಕೃತಿಮಾಗಳು ಸ್ವರಾಂತವಾಗಿವೆ ಮತ್ತು ದ್ವಿತ್ವವ್ಯಂಜನ ಗುಚ್ಛ ಹೇರಳವಾಗಿವೆ. ದ್ವಿವಚನ ರೂಪವಿಲ್ಲ, ಷಷ್ಠಿ ವಿಭಕ್ತಿ ಬಳಕೆ ಹೆಚ್ಚು, ಕ್ರಿಯಾಪದಗಳು ಆ ಅಂತವಾಗಿಯೇ ಅಥವಾ ಈ ಅಂತವಾಗಿಯೋ ಇರುವ ರೂಪಗಳನ್ನು ತೋರಿಸಿಕೊಡುತ್ತವೆ. ಅನಿಶ್ಚಿತ, ನ್ಯೂನ ಭೂತಕಾಲವಾಚಿಗಳನ್ನು ಸೂಚಿಸುವ ಲಕ್ಷಣಗಳು ಕಂಡುಬರುವುದಿಲ್ಲ. ಭೂತಕೃದಂತದ ಪ್ರಾಚುರ್ಯ ಹೆಚ್ಚು. ಧಾತುರೂಪಗಳು ಕೆಲವೆಡೆ ಸಂದಿಗ್ಧತೆಯಿಂದ ಕೂಡಿವೆ. ಸಂಕೀರ್ಣತೆಯಿಂದ ಸರಳತೆ ಕಡೆಗೆ ಹೊರಳುವುದೇ ಭಾಷೆಯ ಪ್ರಮುಖ ಲಕ್ಷಣ. ಹೀಗಾಗಿ ಒಂದೇ ರೂಪವನ್ನು ಹಲವಾರು ಉದ್ದೇಶಗಳಿಗೆ ಬಳಸಿಕೊಳ್ಳುವ ಪ್ರಕ್ರಿಯೆ ಕಾಣಿಸಿಕೊಳ್ಳುತ್ತದೆ.

ಪ್ರಾಕೃತ, ಕಾಲ ಉರುಳಿದಂತೆಲ್ಲ ವಿಕಾಸಗೊಳ್ಳುತ್ತಾ ಹೋಯಿತು. ಹಲವಾರು ಮಾರ್ಪಾಟುಗಳನ್ನು ಪಡೆದು ಪ್ರಭೇದಗಳನ್ನು ಹೆಚ್ಚಿಸಿಕೊಳ್ಳುತ್ತಾ ಹೋಯಿತು.

೩. ಆಧುನಿಕ ಇಂಡೋ ಆರ್ಯನ್ : ಕ್ರಿ.ಶ. ೧೦೦೦ದ ಹೊತ್ತಿಗೆ ಮಧ್ಯಕಾಲೀನ ಇಂಡೋ ಆರ್ಯನ್ ಭಾಷೆ ತನ್ನ ಮುಂದಿನ ಘಟ್ಟಕ್ಕೆ ಕಾಲಿಟ್ಟಿತು. ಅದೇ ಆಧುನಿಕ ಇಂಡೋ ಆರ್ಯನ್. ಪ್ರಾಕೃತ ಭಾಷೆಗಳು ಪ್ರಾದೇಶಿಕ ಅಪಭ್ರಂಶಗಳ ಮುಖೇಣ ಆಧುನಿಕ ಇಂಡೋ ಆರ್ಯನ್ ಭಾಷೆಗಳಾಗಿ ಪರಿವರ್ತಿತವಾದುವು. ಈ ಪ್ರಾದೇಶಿಕ ಭಾಷೆಗಳಲ್ಲಿ

ಆಡುನುಡಿಗಳಾದುದರಿಂದ ಮೂಲಕ್ಕಿಂತ ಬೇರೆ ಬೇರೆ ರೀತಿಗಳಲ್ಲಿ ವಿಕಾಸಹೊಂದಲಾರಂಭಿಸಿದುವು. ಸಂಸ್ಕೃತ ತನ್ನ ಮುಂಚಿನ ಗತವೈಭವವನ್ನು ಹೊತ್ತುಕೊಂಡು ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದ್ದರೂ ಪ್ರಾದೇಶಿಕ ಭಾಷೆಗಳು ವರ್ತಮಾನವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸಬೇಕಾಗಿತ್ತು. ಆಧುನಿಕ ಇಂಡೋ ಆರ್ಯನ್ ಭಾಷೆಗಳಿಗೆ ಕಾವ್ಯ ಪ್ರಕಾರ ಬಂದದ್ದು ಸಂಸ್ಕೃತ, ಪಾಲಿ ಮತ್ತು ಪ್ರಾಕೃತಗಳ ಬಳುವಳಿಯಾಗಿ. ಎಲ್ಲ ಆಧುನಿಕ ಇಂಡೋ ಆರ್ಯನ್ ಭಾಷೆಗಳಲ್ಲಿ ಸಾಹಿತ್ಯ ರಚನೆ ಸಾಮಾನ್ಯವಾಗಿ ಸಮಕಾಲೀನವಾಗಿರುವ ಅಂಶ ಕಾಣಿಸಿಕೊಳ್ಳುತ್ತವೆ. ಆಧುನಿಕ ಇಂಡೋ ಆರ್ಯನ್ ಭಾಷೆಗಳು ಹೆಚ್ಚಾಗಿ ಸಂಸ್ಕೃತದ ವಾತವರಣದಲ್ಲಿಯೇ ಬೆಳೆದು ಬಂದಂಥವು. ಸಂಸ್ಕೃತದಿಂದ ನೇರ ಸ್ವೀಕರಣ ಈ ಭಾಷೆಗಳಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಹೀಗಾಗಿ ಹಿಂದಿ, ಪಂಜಾಬಿ, ಗುಜರಾತಿ, ಮರಾಠಿ, ಬಂಗಾಲಿ ಮೊದಲಾದ ಯಾವುದೇ ಭಾಷೆಯನ್ನು ಗಮನಿಸಿದರೂ ಪ್ರಾಕೃತಕ್ಕಿಂತ ಸಂಸ್ಕೃತದ ಪ್ರಭಾವ ಹೆಚ್ಚಾಗಿರುವ ಅಂಶ ಬೆಳಕಿಗೆ ಬರುತ್ತದೆ.

ಪ್ರಾಕೃತ ಹೆಚ್ಚು ಸಂಪದ್ಭರಿತ ಭಾಷೆ. ಅನೇಕ ಶಾಸನಗಳು, ನಾಟಕಗಳು, ಧರ್ಮಗ್ರಂಥಗಳು, ಭಾವಗೀತೆಗಳ ಸಂಕಲನಗಳು, ಉಪದೇಶ ಸೂಕ್ತಿಗಳು, ಸ್ತೋತ್ರಗಳು, ಕಥನ ಸಾಹಿತ್ಯ, ಚಂಪೂ, ಪ್ರೌಢ ಕಾವ್ಯ, ಮತ ಸಿದ್ಧಾಂತಗಳಿಗೆ ಸಂಬಂಧಿಸಿದ ಪ್ರಕರಣ ಗ್ರಂಥಗಳು, ವ್ಯಾಕರಣಗಳು, ನಿಘಂಟುಗಳು, ಅಲಂಕಾರ ಮತ್ತು ಛಂದಸ್ಸನ್ನು ಕುರಿತ ಶಾಸ್ತ್ರೀಯ ಗ್ರಂಥಗಳು, ಜ್ಯೋತಿಷ್ಯಕ್ಕೆ ಸಂಬಂಧಿಸಿದ ಗ್ರಂಥಗಳು ಮತ್ತು ವೈದ್ಯಶಾಸ್ತ್ರ ಗ್ರಂಥಗಳು ಪ್ರಾಕೃತ ಭಾಷೆಯಲ್ಲಿ ರಚಿತವಾಗಿವೆ. ಇವು ಭಾರತೀಯ ಸಂಸ್ಕೃತಿಯನ್ನು ಬಿಂಬಿಸುವಲ್ಲಿ ಸಮರ್ಥ ಆಕರ ಗ್ರಂಥಗಳಾಗಿವೆ.

ಕನ್ನಡ ಭಾಷಾವಿಜ್ಞಾನ ಕ್ಷೇತ್ರಕ್ಕೆ ವಿದೇಶಿತ್ರಯರ ಕೊಡುಗೆಗಳು

ಡಾ. ಬಿ. ಕೆ. ಸುವರ್ಣಾದೇವಿ

19ನೆಯ ಶತಮಾನದಲ್ಲಿ ಕನ್ನಡವನ್ನು ಶ್ರೀಮಂತಗೊಳಿಸಿದ ವಿದೇಶಿಯರಲ್ಲಿ ಫರ್ಡಿನಾಂಡ್ ಕಿಟೆಲ್ (F. Kittel) ಅಗ್ರಗಣ್ಯರು. ಈತ ಒಬ್ಬ ಕ್ರೈಸ್ತಮಿಶನರಿ, ಈತನು ಜರ್ಮನಿಯ ರಾಸ್ಟರ್ ಹಾಫ್ ಎಂಬ ಊರಿನಲ್ಲಿ ೧೮೩೨ರಲ್ಲಿ ಜನಿಸಿದನು.

ಎಫ್. ಕಿಟೆಲ್ ಅವರು ಸ್ವಿಡ್ಜರ್ಲ್ಯಾಂಡಿನ ಬಾಸೆಲ್ ಮಿಶನ್ ಸಂಸ್ಥೆಯನ್ನು೧೮೫೦ರಲ್ಲಿ ಸೇರಿ ೧೮೫೩ರಲ್ಲಿ ಕ್ರೈಸ್ತ ಮತ ಪ್ರಚಾರಕರಾಗಿ ಕರ್ನಾಟಕದ ಮಂಗಳೂರಿಗೆ ಬಂದರು. ಅನಂತರ ಇವರು ಧಾರವಾಡಕ್ಕೂ ಹೋದರು. ಕರ್ನಾಟಕ ತಮ್ಮ ಕರ್ಮಭೂಮಿಯಾದ ಕಾರಣ ಅಲ್ಲಿನ ಜನಭಾಷೆಯನ್ನು ತನ್ನ ಭಾಷೆಯನ್ನಾಗಿ ಸ್ವೀಕರಿಸಿ ಅದನ್ನು ಆಳವಾಗಿ ಅಭ್ಯಸಿಸತೊಡಗಿದರು. ಕಿಟೆಲ್ ಮಂಗಳೂರುನಲ್ಲಿದ್ದುಕೊಂಡು ಕನ್ನಡ ಭಾಷೆ ಮತ್ತು ಸಾಹಿತ್ಯ ಕ್ಷೇತ್ರಕ್ಕೆ ಅತ್ಯಮೂಲ್ಯವಾದ ಕೊಡುಗೆಯನ್ನು ಸಲ್ಲಿಸಿದ್ದಾರೆ. ಕಿಟೆಲ್ ಅವರ ಕನ್ನಡ ಇಂಗ್ಲಿಷ್ ಶಬ್ದಕೋಶ ಮತ್ತು ಕನ್ನಡ ವ್ಯಾಕರಣ ಗ್ರಂಥಗಳು ಅವರು ನಮಗೆ ಕೊಟ್ಟ ಅಮೂಲ್ಯವಾದ ಕೊಡುಗೆಗಳು.

ಬಿಷಪ್ ಕಾಲ್ಡ್‌ವೆಲ್ ಅವರು ೧೮೫೬ರಲ್ಲಿ A Comparative Grammar of Dravidian Languages ಎಂಬ ಮಹತ್ವಪೂರ್ಣವಾದ ಗ್ರಂಥವನ್ನು ಕೊಟ್ಟು ಅದರ ಮೂಲಕ ದ್ರಾವಿಡ ಭಾಷಾ ವಿಜ್ಞಾನದ ಪಿತಾಮಹ ಎನಿಸಿಕೊಂಡಂತೆ ಕಿಟೆಲ್‌ರು ನಮ್ಮ ಕನ್ನಡ ಶಬ್ದಕೋಶ ಮತ್ತು ಕನ್ನಡ ವ್ಯಾಕರಣ ಗ್ರಂಥಗಳನ್ನು ಕೊಟ್ಟು ಕನ್ನಡ ಭಾಷಾವಿಜ್ಞಾನ ಕ್ಷೇತ್ರದ ಪಿತಾಮಹ ಎನಿಸಿಕೊಂಡಿದ್ದಾರೆ ಎಂದರೆ ಅತಿಶಯೋಕ್ತಿಯಲ್ಲ.

ಕಿಟೆಲ್‌ರವರ A Kannada-English Dictionary ಎಂಬ ಶಬ್ದಕೋಶವನ್ನು ಮಂಗಳೂರಿನ ಬಾಸೆಲ್ ಮಿಷನ್‌ನವರು ೧೮೯೪ರಲ್ಲಿ ಪ್ರಕಟಿಸಿದರು. (Basel Mission Book & Tract Depository, Mangalore)ಈ ಬೃಹತ್ ಶಬ್ದಕೋಶದಲ್ಲಿ ಸುಮಾರು ಎಪ್ಪತ್ತು ಸಾವಿರ ಶಬ್ದಗಳನ್ನು ಸಂಗ್ರಹ ಮಾಡಿ ಅರ್ಥದ ವಿವರಣೆಯೊಡನೆ ಯಥೋಚಿತವಾಗಿ ಕೊಡಲಾಗಿದೆ. ಇದರಲ್ಲಿ ಕಂಡುಬರುವ ಶಬ್ದಪ್ರಯೋಗಗಳು, ವಾಕ್ಯಗಳು, ಜ್ಞಾತಿಶಬ್ದಗಳು,

ಗಾದೆಗಳು, ನುಡಿಗಟ್ಟುಗಳು ಇದೊಂದು ಅಪೂರ್ವಗ್ರಂಥ ವೆನಿಸಿಕೊಳ್ಳಲು ದಾರಿಮಾಡಿ ಕೊಟ್ಟಿದೆ. ಇದು ಆಧುನಿಕ ಶಬ್ದಕೋಶದ ರಚನೆಗೆ ಒಂದು ಮಾದರಿ ಗ್ರಂಥವಾಗಿನಿಂತಿದೆ.

ಕಿಟೆಲ್‌ಗಿಂತ ಹಿಂದೆ ಕನ್ನಡದಲ್ಲಿ ಹಲವಾರು ಶಬ್ದಕೋಶಗಳು ರಚನೆಯಾಗಿದ್ದವು. ಅವುಗಳಲ್ಲಿ ರನ್ನಕಂದ (೧೮೮೩), ಕರ್ನಾಟಕದ ಭಾಷಾರತ್ನಾಕರ (೧೮೮೧) ಮುಂತಾದ ಶಬ್ದಕೋಶಗಳನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಈ ಶಬ್ದಕೋಶಗಳು ಹೆಚ್ಚು ಕಡಿಮೆ ಸಂಸ್ಕೃತದ ಶಬ್ದಕೋಶಗಳ ಮಾದರಿಯಲ್ಲಿಯೇ ರಚಿತವಾಗಿದ್ದವು. ಇವುಗಳಲ್ಲಿ ಹೆಚ್ಚು ಶಬ್ದಕೋಶಗಳು ಗ್ರಂಥಸ್ಥ ಭಾಷೆಗೆ ಮಾತ್ರ ಸೀಮಿತವಾಗಿದ್ದವು. ಕಿಟೆಲ್‌ನಂತೆ ಇವು ಭಾಷಾವಿಜ್ಞಾನದ ಹಿನ್ನಲೆಯಲ್ಲಿ ರಚಿತವಾಗಿರಲಿಲ್ಲ. ಈ ಎಲ್ಲ ಕಾರಣಗಳಿಂದ ಆ ಯಾವ ಶಬ್ದಕೋಶಗಳು ಕಿಟೆಲ್ ಕೋಶದಂತೆ ಹೆಚ್ಚು ಪ್ರಚಾರಕ್ಕೆ ಬರಲಾರದೆ ಹೋದವು. ಈ ದೃಷ್ಟಿಯಲ್ಲಿ ಕಿಟೆಲ್‌ರವರ ಶಬ್ದಕೋಶ ಹೆಚ್ಚು ವೈಜ್ಞಾನಿಕ ಕನ್ನಡ ಶಬ್ದಕೋಶವಾಗಿ ಪ್ರಕಾಶಿಸುತ್ತಿದೆ. ಭಾಷಾವಿಜ್ಞಾನ ಮತ್ತು ನಿಘಂಟು ಶಾಸ್ತ್ರ ಇನ್ನೂ ಬೆಳೆಯದೆ ಇದ್ದ ಕಾಲದಲ್ಲಿ ಕಿಟೆಲ್‌ರವರ ಈ ನಿಘಂಟು ರಚಿತವಾಯಿತು.

ಎಫ್. ಕಿಟೆಲ್ ತನ್ನ ಕನ್ನಡ - ಇಂಗ್ಲಿಷ್ ಶಬ್ದಕೋಶದ ರಚನೆಗೆ ಹಾಗೂ ಶಬ್ದಸಂಗ್ರಹಕ್ಕಾಗಿ ೧೮ ಹಳಗನ್ನಡದ ಸಾಹಿತ್ಯ ಕೃತಿಗಳನ್ನು, ೧೮ ನಡುಗನ್ನಡದ ಸಾಹಿತ್ಯ ಕೃತಿಗಳನ್ನು, ೫ ದ್ರಾವಿಡ ಇಂಗ್ಲಿಷ್ ಶಬ್ದಕೋಶಗಳನ್ನು, ೪ ಸಂಸ್ಕೃತದ ಕೃತಿಗಳನ್ನು, ಒಂದು ಮರಾಠಿ ಶಬ್ದಕೋಶವನ್ನು ಉಪಯೋಗಿಸಿಕೊಂಡಿದ್ದಾರೆ. ಇವುಗಳ ಜೊತೆಗೆ ಶಬ್ದ ಸಂಗ್ರಹ ಹಾಗೂ ಪ್ರಯೋಗಗಳಿಗಾಗಿ ಸಂಪರ್ಕದ ಮೂಲಕ ಆಡುನುಡಿಗಳನ್ನು, ನುಡಿಗಟ್ಟುಗಳನ್ನು, ಗಾದೆಗಳನ್ನು, ಪ್ರಾದೇಶಿಕ ರೂಪಗಳನ್ನು ಸಂಗ್ರಹಮಾಡಿದ್ದಾರೆ. ಪಂಡಿತರ ಉದಾಸೀನತೆಗೆ ಉಪೇಕ್ಷೆಗೆ ಒಳಗಾಗಿದ್ದ ಜಾನಪದ ಮತ್ತು ದೇಶೀಯ ಸಾಹಿತ್ಯಕ್ಕೂ ತನ್ನ ಶಬ್ದಕೋಶದಲ್ಲಿ ಸ್ಥಾನ ಕಲ್ಪಿಸಿಕೊಟ್ಟಿದ್ದಾರೆ. ಈ ಕೋಶಗಳಿಗೆ ನೆರವಾಗುವ ನಿಘಂಟುಗಳ ಆಯ್ಕೆಯಲ್ಲಿ ಹಿಂದಿನವರ ಮಡಿವಂತಿಕೆಯನ್ನು ಕೈ ಬಿಟ್ಟು ತಮ್ಮ ಹೃದಯವಂತಿಕೆಯಿಂದ ಮುಂದಿನವರಿಗೆ ಸನ್ಮಾರ್ಗ ತೋರಿದ ಕೀರ್ತಿ ಕಿಟೆಲ್‌ರವರಿಗೆ ಸಲ್ಲುತ್ತದೆ.

ಶಬ್ದಗಳನ್ನು ಶಬ್ದಕೋಶದಲ್ಲಿ ಉಚ್ಚಾರ ಅರ್ಥ ಮುಂತಾದವುಗಳ ಜೊತೆಗೆ ನಿಯಮಿತ ರೂಪದಲ್ಲಿ ಜೋಡಿಸಲಾಗಿದೆ. ಉಚ್ಚಾರವನ್ನು ಪರಿಶೀಲಿಸಿ ಅದನ್ನು ರೋಮನ್ ಲಿಪಿಯಲ್ಲಿ ಕೊಡಲಾಗಿದೆ. ಇವುಗಳ ಜೊತೆಗೆ ಶಬ್ದಗಳ ಪರ್ಯಾಯ ರೂಪಗಳು, ಶಬ್ದಗಳ ವ್ಯುತ್ಪತ್ತಿ ಮುಂತಾದವುಗಳಿಗೆ ಸಂಬಂಧಿಸಿದ ಜ್ಞಾತಿ ಶಬ್ದಗಳನ್ನು ಕೊಡಲಾಗಿದೆ.

ಕಿಟೆಲ್‌ರವರ ಶಬ್ದಕೋಶ ದ್ವಿಭಾಷಾಕೋಶಕ್ಕೆ ಸಂಬಂಧಿಸಿದ್ದು, ಇದರಲ್ಲಿ ಶಬ್ದಗಳ ಅರ್ಥ ವಿವರಣೆಯನ್ನು ಸಮಾನಾರ್ಥಕ ರೂಪಗಳನ್ನು ಕೊಟ್ಟು ಸ್ಪಷ್ಟಗೊಳಿಸುವುದರ ಜೊತೆಗೆ ಒಂದೇ ಶಬ್ದಕ್ಕೆ ವಿಭಿನ್ನ ಅರ್ಥ ವಿಶೇಷತೆಗಳಿದ್ದಾಗ ಅವನ್ನು ಪ್ರಯೋಗಗಳ ಮೂಲಕ ಸ್ಪಷ್ಟಪಡಿಸಲಾಗಿದೆ.

ಈ ಮೇಲಿನ ವಿಚಾರಗಳನ್ನು ಗಮನಿಸಿದಾಗ ಕಿಟೆಲ್ ಶಬ್ದಕೋಶ ಇದೊಂದು ವಿವರಣಾತ್ಮಕ ಶಬ್ದಕೋಶವೆನಿಸಿಕೊಳ್ಳುತ್ತದೆ. ಕನ್ನಡ ಶಬ್ದಗಳ ಅರ್ಥದ ವಿವರಗಳನ್ನು ಇಂಗ್ಲಿಷ್‌ನಲ್ಲಿ ಕೊಟ್ಟಿರುವುದರಿಂದ ಇದನ್ನು ಪಾರಿಭಾಷಿಕವಾಗಿ ದ್ವಿಭಾಷಾ ವಿವರಣಾತ್ಮಕ ಶಬ್ದಕೋಶ ಎಂದು ಕರೆಯಬಹುದಾಗಿದೆ. ಈ ವಿವರಣಾತ್ಮಕ ಶಬ್ದಕೋಶದಲ್ಲಿ ಕಿಟೆಲ್‌ರವರು ಶಬ್ದಗಳ ಜ್ಞಾತಿ ಪದಗಳನ್ನು ಮತ್ತು ಪದದ ವ್ಯುತ್ಪತ್ತಿಯನ್ನು ಸೂಚಿಸಿ ಕೋಶದ ಉಪಯುಕ್ತತೆಯನ್ನು ಹೆಚ್ಚಿಸಿದ್ದಾರೆ.

ಕಿಟೆಲ್‌ರವರ ಕನ್ನಡ - ಇಂಗ್ಲಿಷ್ ಶಬ್ದಕೋಶವನ್ನು ಪೂರ್ಣವಾಗಿ ಪರಿಶೀಲಿಸಿ ತಿಳಿಯಲು ಹೊರಟಾಗ ಮಾತ್ರ ಇದರ ವೈಜ್ಞಾನಿಕ ಮೌಲ್ಯವನ್ನು ನಿರ್ಧರಿಸಲು ಸಾಧ್ಯವಾಗುತ್ತದೆ. ಕಿಟೆಲ್ ಕೋಶದಲ್ಲಿ ಸಂಗ್ರಹವಾಗಿರುವ ಅಪಾರವಾದ ಶಬ್ದ ಸಂಪತ್ತು ಕನ್ನಡದ ಉಪಭಾಷೆಗಳ ಮಾತುಗಳು, ಗಾದೆಗಳು, ನುಡಿಗಟ್ಟುಗಳು, ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡದ ಪದ ಪ್ರಯೋಗಗಳು ಕಿಟೆಲ್‌ರವರ ಪರಿಶ್ರಮಕ್ಕೆ ಸಾಕ್ಷಿಯಾಗಿವೆ. ಈ ಶಬ್ದಕೋಶದಲ್ಲಿ ಕಿಟೆಲ್‌ರವರ ಶ್ರದ್ಧೆ ಪರಿಶ್ರಮ ಕರ್ತವ್ಯ ನಿಷ್ಠೆ, ವೈಜ್ಞಾನಿಕತೆ ಎದ್ದು ಕಾಣುತ್ತದೆ. ಈ ಎಲ್ಲ ವಿಚಾರಗಳಿಂದಲೆ ಕಿಟೆಲ್‌ರವರನ್ನು ಆಧುನಿಕ ಶಬ್ದಕೋಶ ರಚನಾ ಪದ್ಧತಿಯ ಪಿತಾಮಹ ಎಂದು ಕರೆಯಲು ಕಾರಣವಾಗಿದೆ.

ಕಿಟೆಲ್‌ರವರು ಕನ್ನಡ ಭಾಷೆಯನ್ನು ಆಳವಾಗಿ ಅಭ್ಯಸಿಸಿ ವ್ಯಾಕರಣ ಗ್ರಂಥವೊಂದನ್ನು ರಚಿಸಿದರು. ಕಿಟೆಲ್‌ರವರ ಈ ವ್ಯಾಕರಣದ ಹೆಸರು A Grammar of Kannada Language in English Comprising the Three Dialects of the Language (Ancient, Medieval and Modern) ಇದನ್ನು ಮಂಗಳೂರಿನ ಬಾಸೆಲ್ ಮಿಶನ್ನಿನವರು ೧೯೦೩ರಲ್ಲಿ ಪ್ರಕಟಿಸಿದರು. ಈ ವ್ಯಾಕರಣ ಗ್ರಂಥ ಸುಮಾರು ೪೮೩ ಪುಟಗಳಲ್ಲಿ ವ್ಯಾಪಿಸಿಕೊಂಡಿದೆ. ಇದರಲ್ಲಿ ಒಟ್ಟು ೨೮ ಅಧ್ಯಾಯಗಳಿವೆ. ಇದೊಂದು ಬೃಹತ್ ವ್ಯಾಕರಣ ಗ್ರಂಥ. ಇದರಲ್ಲಿ ಹಳಗನ್ನಡ. ನಡುಗನ್ನಡ ಮತ್ತು ಹೊಸಗನ್ನಡ ಎಂಬ ಕನ್ನಡ ಭಾಷೆಯ ವಿವಿಧ ಹಂತಗಳ ವಿವರಣೆಯನ್ನು ಒಳಗೊಂಡಿದೆ. ಈ ದೃಷ್ಟಿಯಲ್ಲಿ ಈ ವ್ಯಾಕರಣ ಗ್ರಂಥ ಒಂದು ರೀತಿಯಲ್ಲಿ ಚಾರಿತ್ರಿಕ ಭಾಷಾವೈಜ್ಞಾನಿಕ ವ್ಯಾಕರಣವೆನಿಸಿಕೊಳ್ಳುತ್ತದೆ.

ಕಿಟೆಲ್‌ಗಿಂತ ಹಿಂದೆ ಅನೇಕ ವ್ಯಾಕರಣ ಗ್ರಂಥಗಳು ಕನ್ನಡದಲ್ಲಿ ರಚನೆಯಾಗಿದ್ದವು, ನಾಗವರ್ಮ, ಕೇಶಿರಾಜ, ಭಟ್ಟಾಕಳಂಕ ಇವರ ವ್ಯಾಕರಣಗಳಲ್ಲದೆ ಜಾನ್ ಮೆಕೆರೆಲ್ (೧೮೨೦), ಥಾಮಸ್‌ಹಡ್ಸನ್ (೧೮೬೪), ಎಫ್. ಜೇಗ್ಲರ್(೧೮೯೨), ಧೋಂಡೋನರಸಿಂಹ ಮುಳಬಾಗಿಲು (೧೮೯೪) ಮುಂತಾದ ದೇಶಿಯ ಹಾಗೂ ವಿದೇಶೀಯ ವಿದ್ವಾಂಸರಿಂದ ರಚಿತವಾದ ವ್ಯಾಕರಣ ಗ್ರಂಥಗಳು ಕನ್ನಡದಲ್ಲಿ ಪ್ರಚಲಿತವಾಗಿದ್ದವು. ಈ ಯಾವ ವ್ಯಾಕರಣಗಳು ಕಿಟೆಲ್ ಅವರಿಗೆ ತೃಪ್ತಿನೀಡಲಿಲ್ಲ. ಈಗಾಗಲೇ ಕನ್ನಡಕ್ಕೊಂದು ಬೃಹದ್

ಶಬ್ದಕೋಶವನ್ನು ರಚಿಸಿಕೊಟ್ಟ ಇವರು ಕನ್ನಡಕ್ಕೆ ಒಂದು ಸಮಗ್ರವಾದ ವ್ಯಾಕರಣದ ಅವಶ್ಯಕತೆಯನ್ನು ಮನಗಂಡು ಸಮಗ್ರವಾದ ಕನ್ನಡ ವ್ಯಾಕರಣವೊಂದನ್ನು ರಚಿಸಿ ಪ್ರಕಟಿಸಿದರು.

ಕಿಟೆಲ್ ವ್ಯಾಕರಣದ ೨೮ ಅಧ್ಯಾಯಗಳಲ್ಲಿ ಧ್ವನಿಮಾಗಳು, ಆಕೃತಿ - ಧ್ವನಿಮಾ ವಿಚಾರಗಳು, ಆಕೃತಿಮಾವಿಚಾರಗಳು, ಮತ್ತು ವಾಕ್ಯ ವಿಚಾರಗಳು ಎಂಬ ಪ್ರಧಾನ ವಿಷಯಗಳು ಚರ್ಚಿತವಾಗಿವೆ. ಇವುಗಳ ಜೊತೆಗೆ ಕನ್ನಡ ಶಬ್ದ ಪ್ರಯೋಗಗಳು ನಿಘಂಟು ವಿಚಾರಗಳು ಸೇರುತ್ತವೆ. ಇದೊಂದು ವಿವರಣಾತ್ಮಕ ವ್ಯಾಕರಣವಾದರೂ ಇದರಲ್ಲಿ ಹಲವಾರು ಚಾರಿತ್ರಿಕ ವಿಚಾರಗಳು ಚರ್ಚಿತವಾಗಿವೆ.

ಕಿಟೆಲ್‌ರವರ ಈ ವ್ಯಾಕರಣ ಪೂರ್ಣವಾಗಿ ಬರಹದಭಾಷೆಗೆ ಮಾತ್ರ ಸೀಮಿತವಾಗಿದ್ದುದರಿಂದ ಧ್ವನಿಮಾಗಳನ್ನು ಸಾಂಪ್ರದಾಯಿಕ ವರ್ಣಗಳನ್ನೇ ಪ್ರಧಾನವಾಗಿಟ್ಟುಕೊಂಡು ಲಿಪಿಗೆ ಅನ್ವಯವಾಗುವಂತೆ ವಿವರಿಸಿಕೊಳ್ಳಲಾಗಿದೆ. ಕನ್ನಡದ ಮೇಲೆ ಸಂಸ್ಕೃತ ಮುಂತಾದ ಆರ್ಯಭಾಷೆಗಳ ಪ್ರಭಾವ ಅಧಿಕವಾಗಿದ್ದುದರಿಂದ, ಕನ್ನಡ ಲಿಪಿಯನ್ನು ಚರ್ಚಿಸುವಾಗ ಕಿಟೆಲ್‌ರವರು ತಮಿಳು, ತೆಲುಗು ಮತ್ತು ಮಲೆಯಾಳಂ ಲಿಪಿಗಳನ್ನು ತುಲನೆಮಾಡಿದ್ದಾರೆ. ಸಂಸ್ಕೃತಕ್ಕೆ ಸೀಮಿತವಾಗಿದ್ದ ಎಷ್ಟೋ ವರ್ಣಗಳನ್ನು ಕನ್ನಡ ವರ್ಣಮಾಲೆಯಲ್ಲಿ ಉಳಿಸಿಕೊಂಡಿದ್ದಾರೆ. ಕನ್ನಡದಲ್ಲಿ ಟಳ ಕುಳಕ್ಷರಗಳ ಉಚ್ಚಾರದಲ್ಲಿ ವ್ಯತ್ಯಾಸವಿಲ್ಲ. ಆದರೂ ಕಿಟೆಲ್‌ರವರು ಇವರೆಡನ್ನು ಉಳಿಸಿಕೊಂಡಿದ್ದಾರೆ 'ಱ' ಮತ್ತು 'ಟ' ಕಾರಗಳನ್ನು ಚಾರಿತ್ರಿಕ ಸ್ವರೂಪದ ದೃಷ್ಟಿಯಿಂದ ವಿವರಿಸಿಕೊಂಡಿರಬಹುದೆಂದು ಕಾಣುತ್ತದೆ. ಕನ್ನಡದಲ್ಲಿ ಏ, ಐ, ಒ ಮತ್ತು ಔ ಗಳು ವಿಶಿಷ್ಟವಾಗಿವೆ. ಐ ಮತ್ತು ಔ ಗಳು ಇಲ್ಲಿ ಸಂಧ್ಯಕ್ಷರಗಳಲ್ಲ.

ಎರಡು ಆಕೃತಿಮಾಗಳು ಪರಸ್ಪರ ಪದ ರಚನೆಯಲ್ಲಿ ಕೂಡಿದಾಗ ಉಂಟಾಗುವ ಧ್ವನಿವ್ಯತ್ಯಾಸವನ್ನು ಆಕೃತಿ ಧ್ವನಿಮಾ ವ್ಯತ್ಯಾಸ, ಸಂಧಿಕಾರ್ಯ ಎಂದು ಹೆಸರಿಸಿಕೊಳ್ಳಲಾಗಿದೆ. ಕಿಟೆಲ್‌ರವರು ಇವನ್ನು ಲೋಪ, ಆಗಮ, ಆದೇಶ ಎಂದು ಗುರುತಿಸಿಕೊಂಡಿದ್ದಾರೆ. ಸಂಧಿದೋಷಗಳನ್ನು ಇಲ್ಲಿ ಗಮನಿಸಲಾಗಿದೆ. ಕನ್ನಡದಲ್ಲಿ ಅನೇಕ ಸಂಸ್ಕೃತ ಶಬ್ದಗಳು, ಬಳಕೆಯಲ್ಲಿರುವುದರಿಂದ ಸಂಸ್ಕೃತ ಶಬ್ದಗಳಿಗೆ ಅನ್ವಯವಾಗುವ ಸಂಧಿ ವಿಚಾರಗಳನ್ನು ಇದರಲ್ಲಿ ವಿಚಾರಮಾಡಲಾಗಿದೆ. ಈ ಸಂಸ್ಕೃತ ಸಂಧಿವಿಚಾರಗಳನ್ನು ಬಿಟ್ಟರೆ ಕಿಟೆಲ್‌ರವರು ಅನೇಕ ವಿಚಾರಗಳಲ್ಲಿ ಶಬ್ದಮಣಿದರ್ಪಣವನ್ನೇ ಅನುಸರಿಸಿರುವಂತೆ ಕಂಡುಬರುತ್ತದೆ.

ಕಿಟೆಲ್ ಅವರು ಕ್ರಿಯಾಧಾತುಗಳನ್ನು ಒಂದರಿಂದ ನಾಲ್ಕಕ್ಷರಗಳವರೆಗೆ ವರ್ಗೀಕರಿಸಿಕೊಂಡು ವ್ಯಂಜನಾಂತ್ಯ ಪ್ರಕೃತಿಗಳು ಸ್ವರಾಂತ್ಯವಾಗುತ್ತವೆ ಎಂದು ಹೇಳಿ ಉದಾಹರಣೆಗಳನ್ನು ಕೊಟ್ಟಿದ್ದಾರೆ.

ಕಿಟೆಲ್ ಅವರು ಸರ್ವನಾಮ (ಅದು, ಉದು, ಇದು) ಗುಣವಾಚಕ (ಮೆಲ್ಲಿತು ಒಳ್ಳಿತು) ಮತ್ತು ಸಂಖ್ಯಾವಾಚಕ (ಒಂದು, ಎರಡು)ಎಂದು ಏಳು ಪ್ರಕಾರಗಳಲ್ಲಿ

ವಿವರಿಸಿಕೊಂಡಿದ್ದಾರೆ. ಸಂಸ್ಕೃತ ಶಬ್ದಗಳು ಕನ್ನಡಕ್ಕೆ ಬಂದು ಸೇರಿದಾಗ ಉಂಟಾಗುವ ವ್ಯತ್ಯಾಸಗಳ ನಿಯಮವನ್ನು ಚರ್ಚಿಸಿದ್ದಾರೆ.

ಕನ್ನಡ ವಿಭಕ್ತಿ ಪ್ರತ್ಯಯಗಳ ಚರ್ಚೆ ವಿವರವಾಗಿದೆ. ಇದರಲ್ಲಿ ಹಳಗನ್ನಡ, ನಡುಗನ್ನಡ, ಹೊಸಗನ್ನಡ ಪ್ರಯೋಗಗಳನ್ನು ಕೊಟ್ಟು ಚರ್ಚಿಸಿದ್ದಾರೆ. ಕನ್ನಡದೊಡನೆ ತಮಿಳು, ತೆಲುಗು, ಮತ್ತು ಮಲೆಯಾಳಂ ಪ್ರಯೋಗಗಳನ್ನು ಕೊಟ್ಟು ತುಲನಾತ್ಮಕನಾಗಿ ಚರ್ಚಿಸಿದ್ದಾರೆ. ಕಿಟೆಲ್ ಅವರು ವಿಭಕ್ತಿ ಎಂಬುದಕ್ಕೆ ಕಾರಣಗಳು ಮತ್ತು ಪ್ರತ್ಯಯಗಳು ಎಂಬ ಎರಡು ಪದಗಳನ್ನು ಬಳಸಿದ್ದಾರೆ.

ನಾಗವರ್ಮ, ಕೇಶಿರಾಜ, ಭಟ್ಟಾಕಳಂಕರು ಕ್ರಿಯಾಪದಗಳಲ್ಲಿ ಅಕರ್ಮಕ ಕ್ರಿಯಾಪದಗಳನ್ನು ಗುರುತಿಸಿದ್ದಾರೆ. ಕನ್ನಡ ಕ್ರಿಯಾಪ್ರಕೃತಿಗಳನ್ನು ಸಕರ್ಮಕ, ಅಕರ್ಮಕ ಮತ್ತು ಹೇತುಕ ಎಂದು ವಿಭಜಿಸಿಕೊಂಡು ವಿವರಿಸಿದ್ದಾರೆ. ಕ್ರಿಯಾ ಪ್ರಕೃತಿಗಳು ಕೃದ್ವಾಚಿಗಳಾಗುವ ವಿಚಾರವನ್ನು ಕಿಟೆಲ್ ಅವರು ಚರ್ಚಿಸಿದ್ದಾರೆ. ಇದರಲ್ಲಿ ವರ್ತಮಾನ, ಭೂತ, ಭವಿಷ್ಯತ್ ಎಂಬ ಮೂರು ಕಾಲಗಳನ್ನು ವಿಧ್ಯರ್ಥ, ಪ್ರತಿಕ್ಷೇಧ ಅಥವಾ ನಿಷೇಧ ಎಂಬ ಅರ್ಥಗಳನ್ನು ಹೇಳಿ ಮೂರು ಬಗೆಯ ಪುರುಷ ವಿವಕ್ಷೆಯನ್ನು ವಿವರಿಸಿದ್ದಾರೆ. ಕೇಶಿರಾಜನ ಗಮಕ ಸಮಾಸವನ್ನು ಪ್ರಸ್ತಾಪಿಸುತ್ತಾ, ಅದನ್ನು ಒಪ್ಪಕೊಂಡಿದ್ದಾರೆ. ಇಂಗ್ಲಿಷಿನ ಸಹಾಯಕ ಕ್ರಿಯಾ ಪದಗಳನ್ನು (Shall, Will, be, have) ಕನ್ನಡದಲ್ಲಿ ಹೇಗೆ ಭಾಷಾಂತರಿಸಿಕೊಳ್ಳಬಹುದು ಎಂಬುದನ್ನು ವಿವರಿಸಿದ್ದಾರೆ.

ಕಿಟೆಲ್‌ರವರ ಈ ಕನ್ನಡ ವ್ಯಾಕರಣ ಕನ್ನಡ ಕಲಿಯುವವರಿಗೆ ಮತ್ತು ಕಲಿಸುವವರಿಗೆ ತುಂಬ ಉತ್ತಮವಾದ ವ್ಯಾಕರಣವಾಗಿ ಕಾಣಿಸಿಕೊಳ್ಳುತ್ತವೆ. ಈ ಕಾರಣದಿಂದ ಇದನ್ನು ಕಲಿಕಾ ವ್ಯಾಕರಣವೆಂದು ಕರೆದುಕೊಳ್ಳಬಹುದಾಗಿದೆ. ಕಿಟೆಲ್‌ರವರು ತಮ್ಮ ವ್ಯಾಕರಣದಲ್ಲಿ ಕನ್ನಡದ ಎಲ್ಲಾ ಶಬ್ದಗಳನ್ನು ದೇಶ್ಯ (ಅಚ್ಚಕನ್ನಡ) ಸಮಸಂಸ್ಕೃತ (ತತ್ಸಮ) ಮತ್ತು ಅಪಭ್ರಂಶ (ತದ್ಭವ) ಎಂದು ವರ್ಗೀಕರಿಸಿಕೊಂಡಿದ್ದಾರೆ. ಕಿಟೆಲ್‌ರವರು ಒಂದು ವಾಕ್ಯದಲ್ಲಿ ಕ್ರಿಯಾಪದ ಬರಲೇ ಬೇಕು ಇಲ್ಲದಿದ್ದರೆ ಅಂತಹ ವಾಕ್ಯಪೂರ್ಣ ವೆನಿಸಿಕೊಳ್ಳುವುದಿಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಒಟ್ಟಿನಲ್ಲಿ ಕಿಟೆಲ್‌ರವರ ಈ ಕನ್ನಡ ವ್ಯಾಕರಣ ಸಾಂಪ್ರದಾಯಿಕ ವ್ಯಾಕರಣವಾಗಿಕಾಣಿಸಿಕೊಳ್ಳುತ್ತದೆಯಾದರೂ ಇದರಲ್ಲಿ ಅನೇಕ ಹೊಸ ಹೊಸ ವಿಚಾರಗಳು ಚರ್ಚಿತವಾಗಿವೆ. ಈತನ ವ್ಯಾಕರಣಕ್ಕೆ ಕೇಶಿರಾಜನ ಶಬ್ದಮಣಿದರ್ಪಣವೇ ಮೂಲ ಆಧಾರ. ಆ ಕನ್ನಡ ಪರಂಪರೆಯ ವ್ಯಾಕರಣಗಳು ಸಾಹಿತ್ಯ ರಚನೆ ಮತ್ತು ಅಭ್ಯಾಸಕ್ಕೆ ಬರೆದ ವ್ಯಾಕರಣಗಳಾಗಿದ್ದವು, ಕಿಟೆಲ್ ಅವರು ಇವೆಲ್ಲಕ್ಕಿಂತ ಭಿನ್ನವಾದ ರೀತಿಯಲ್ಲಿ ವ್ಯಾಕರಣ ರಚಿಸಿದ್ದಾರೆ. ಕನ್ನಡದ ಎಲ್ಲ ಅವಸ್ಥೆಗಳನ್ನು ಪ್ರಾಂತೀಯ ಪ್ರಭೇದಗಳನ್ನು ಒಟ್ಟಿಗೆ ತೆಗೆದುಕೊಂಡು ಅವುಗಳ ಶಬ್ದ ಪ್ರಯೋಗಗಳನ್ನು ಬಳಸಿಕೊಂಡು ಆಡುವ ಮಾತನ್ನು ಬಿಡದೆ

ಸಮಗ್ರವಾದ ವ್ಯಾಕರಣವೊಂದನ್ನು ಇಂಗ್ಲಿಷಿನಲ್ಲಿ ರಚಿಸಿ ಕನ್ನಡಿಗರ ಅಭಿಮಾನಕ್ಕೆ ಪಾತ್ರರಾಗಿದ್ದಾರೆ.

ಕಿಟೆಲ್ ಒಬ್ಬ ಕ್ರೈಸ್ತ ಮಿಶನರಿಯಾದರೂ ಕನ್ನಡ ಭಾಷೆಯನ್ನು ಆಳವಾಗಿ ಅಭ್ಯಸಿಸಿ ಆಧುನಿಕ ಸಂಶೋಧನೆಯ ನೆಲಗಟ್ಟಿನ ಮೇಲೆ ಮಾದರಿಯಾಗಿ ಬಹುಕಾಲ ನಿಲ್ಲಬಲ್ಲ ಕನ್ನಡ-ಇಂಗ್ಲಿಷ್ ಶಬ್ದಕೋಶವನ್ನು, ಕನ್ನಡದ ವ್ಯಾಕರಣವನ್ನು ಬರೆದು ಕನ್ನಡದ ಪಿತಾಮಹ ಎನಿಸಿಕೊಂಡಿದ್ದಾರೆ. ಇವರ ಈ ಎರಡು ಗ್ರಂಥಗಳು ಮುಂದಿನವರ ಸಂಶೋಧನೆಗೆ ನೆರವಾಗುವ ಅಪಾರ ಸಾಮಗ್ರಿಯನ್ನು ಒದಗಿಸಿ ಕೊಡುತ್ತವೆನ್ನಬಹುದು.

ಮೆಕೊರ್ಮ್ಯಾಕ್ ವಿಲಿಯಂ (Mccormack William) ಇವರು ಅಮೆರಿಕೆಯ ಡ್ಯುಕ್ (Duke) ವಿಶ್ವವಿದ್ಯಾನಿಲಯದಲ್ಲಿ ಸಾಮಾಜಿಕ ಮಾನವಶಾಸ್ತ್ರದ ಪ್ರಾಧ್ಯಾಪಕರಾಗಿದ್ದರು. ಇವರು ಅಮೆರಿಕೆಯ ಬೇರೆ ಬೇರೆ ವಿಶ್ವವಿದ್ಯಾನಿಲಯಗಳಲ್ಲಿ ಸೇವೆ ಸಲ್ಲಿಸುವುದರ ಜೊತೆಗೆ ಸೌತ್ ಏಷ್ಯನ್ ಸ್ಟಡೀಸ್ (South Asian Studies) ಎಂಬ ವಿಭಾಗದಲ್ಲಿ ಕೆಲಸ ಮಾಡಿದ್ದರು. ಇವರು ಅನೇಕ ಲೇಖನಗಳನ್ನು ಮತ್ತು ಗ್ರಂಥಗಳನ್ನು ರಚಿಸಿದ್ದಾರೆ. ಇವರ ಕೆಲವು ಲೇಖನಗಳು Economic Development and Cultural Change ಮತ್ತು Indian Linguistics ಎಂಬ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಮೆಕೊರ್ಮ್ಯಾಕ್ ಅವರ ಜನನ, ಶಿಕ್ಷಣ, ಸಾಧನೆಗಳನ್ನು ತಿಳಿಸುವ ಯಾವ ದಾಖಲೆಗಳು ಖಚಿತವಾಗಿ ದೊರೆಯುವುದಿಲ್ಲ.

ಮೆಕೊರ್ಮ್ಯಾಕ್ ಅವರು Kannada-A Cultural Introduction to the spoken Style of the Language ಎಂಬ ಗ್ರಂಥವನ್ನು ಇಂಗ್ಲಿಷಿನಲ್ಲಿ ಬರೆದು ೧೯೬೬ರಲ್ಲಿ ಪ್ರಕಟಿಸಿದರು. ಇದನ್ನು ಅಮೆರಿಕೆಯ ವಿಸ್‌ಕಾನ್ಸಿನ್ ವಿಶ್ವವಿದ್ಯಾನಿಲಯವು ಪ್ರಕಟಿಸಿದೆ. ಈ ಗ್ರಂಥವು ದಕ್ಷಿಣ ಭಾರತದ ಮೈಸೂರು ರಾಜ್ಯದ ದಾವಣಗೆರೆಯ ಸುತ್ತಮುತ್ತಲ ಪ್ರದೇಶದ ಜನರು ಆಡುವ ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ೨೦೩ ಪುಟಗಳಲ್ಲಿ ವಿವರಿಸುತ್ತದೆ. ಈ ಗ್ರಂಥದಲ್ಲಿ ಆಡುವ ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಹಂತ ಹಂತವಾಗಿ ಸುಮಾರು ಇಪ್ಪತ್ತು ಘಟಕ (units)ಗಳಲ್ಲಿ ವಿವರಿಸಲಾಗಿದೆ. ಇದರ ಒಂದೊಂದು ಘಟಕದಲ್ಲಿಯೂ ಆಡುಮಾತಿನ ಕನ್ನಡ ಶಬ್ದಗಳನ್ನು, ವಾಕ್ಯಗಳನ್ನು ವ್ಯಾಕರಣ ವಿಚಾರಗಳ ಮಾದರಿಗಳನ್ನು ಬಿಡಿಬಿಡಿಯಾಗಿ ಉಚ್ಚಾರ ಮತ್ತು ಅರ್ಥದ ಸಹಿತ ಕೊಡಲಾಗಿದೆ. ಇವು ಕನ್ನಡ ಶಬ್ದಗಳನ್ನು ವಾಕ್ಯಗಳನ್ನು, ವ್ಯಾಕರಣ ವಿಚಾರಗಳನ್ನು ಕಲಿಯುವವರಿಗೆ ಮತ್ತು ಕಲಿಸುವವರಿಗೆ ಅನುಕೂಲವಾಗುವಂತೆ ಅವನ್ನು ಅಭ್ಯಾಸದ ಮಾದರಿಗಳ ಮೂಲಕ ಅಳವಡಿಸಲಾಗಿದೆ. ಈ ಪ್ರತಿಯೊಂದು ಮಾದರಿಗಳಲ್ಲಿ ಉದಾಹರಣೆಗಳು, ಅವುಗಳ ಪ್ರಯೋಗಗಳು, ಉಚ್ಚಾರ ಮತ್ತು ಅರ್ಥ ಮುಂತಾದವುಗಳನ್ನು ರೋಮನ್ ಲಿಪಿಯಲ್ಲಿ ಸಂಕೇತಿಸಿಕೊಳ್ಳಲಾಗಿದೆ. ಮತ್ತೆ ಕೆಲವು ಘಟಕಗಳಲ್ಲಿ ಅಭ್ಯಾಸದ ಮಾದರಿಗಳ ಉದಾಹರಣೆಗಳನ್ನು ಮತ್ತು ಅವುಗಳ ಪ್ರಯೋಗಗಳನ್ನು ಕನ್ನಡದ ಲಿಪಿಯಲ್ಲಿಯೇ ವಿವರಿಸಿಕೊಳ್ಳಲಾಗಿದೆ. ಕನ್ನಡ ಕಲಿಯುವವರಿಗೆ

ತುಂಬ ಕ್ಲಿಷ್ಟವಾದ ವಿಚಾರಗಳನ್ನು ಕಲಿಸಲು ಅನುಕೂಲವಾಗುವಂತೆ ಪದ ಪ್ರಯೋಗಗಳು, ಅವುಗಳ ಉಚ್ಚಾರ ಮತ್ತು ಅರ್ಥವಿಚಾರಗಳನ್ನು ವಿವಿಧ ಮಾದರಿಗಳಲ್ಲಿ ಹಂತ ಹಂತವಾಗಿ ಎಲ್ಲ ವ್ಯಾಕರಣ ವಿಚಾರಗಳಿಗೂ ಅನ್ವಯವಾಗುವಂತೆ ಕೊಟ್ಟಿರುವುದು ಇದರ ಮತ್ತೊಂದು ವಿಶೇಷ. ಈ ಮಾದರಿ ಪಾಠಗಳು ಕನ್ನಡ ಭಾಷೆಯನ್ನು ಕಲಿಸುವವರಿಗೆ ತುಂಬ ಉಪಯುಕ್ತವಾಗಿವೆ. ಈ ವಿಚಾರಗಳ ಜೊತೆಗೆ ಈ ಮಾದರಿಗಳಲ್ಲಿ ಕನ್ನಡದ ಸಮಾಜ, ಸಂಸ್ಕೃತಿ ಮುಂತಾದ ವಿಚಾರಗಳು ಅಡಕವಾಗಿವೆ. ಈ ಗ್ರಂಥ ನೇರವಾಗಿ ಆಡುಭಾಷೆಗೆ ಸಂಬಂಧಿಸಿದ್ದು, ಆದುದರಿಂದ ಇದರಲ್ಲಿ ಪ್ರಾದೇಶಿಕ ಉಪಭಾಷೆಗಳನ್ನು ಬಿಡದೆ ಬಳಸಿಕೊಳ್ಳಲಾಗಿದೆ. ಈ ಗ್ರಂಥ ಮೈಸೂರು ರಾಜ್ಯದ ದಾವಣಗೆರೆಯ ಸುತ್ತಮುತ್ತಲ ಪ್ರದೇಶದ ಜನರು ಆಡುವ ಕನ್ನಡ ಭಾಷೆ, ಅವರ ಸಮಾಜ, ಸಂಸ್ಕೃತಿ ಮುಂತಾದವುಗಳನ್ನು ಒಳಗೊಂಡಿದೆ, ಕನ್ನಡ ಭಾಷೆ ಕಲಿಯುವ ವಿದ್ಯಾರ್ಥಿಗಳಿಗೆ ಇದನ್ನು ಕಲಿಸುವ ಅಧ್ಯಾಪಕರಿಗೆ ಇದೊಂದು ಕೈಪಿಡಿ (Hand Book) ಯಂತೆ ಕಾಣಿಸಿಕೊಳ್ಳುತ್ತದೆ. ಕನ್ನಡ ಬಾರದವರಿಗೆ ಕನ್ನಡ ಕಲಿಸುವುದು ಈ ಗ್ರಂಥ ರಚನೆಯ ಮುಖ್ಯ ಉದ್ದೇಶ.

ಮೆಕೊರ್ಮ್ಯಾಕ್ ಅವರು ಅಮೆರಿಕೆಯಿಂದ ಭಾರತಕ್ಕೆ ಬಂದು ಬೇರೆ ಬೇರೆ ಕಡೆಗಳಲ್ಲಿದ್ದುಕೊಂಡು ಈ ಗ್ರಂಥ ರಚನೆಯ (೧೯೬೨-೬೩) ಯೋಜನೆಯನ್ನು ಕೈಗೆತ್ತಿಕೊಂಡರು. ಇದಕ್ಕೆ ನೆರವಾಗುವ ಸಾಮಗ್ರಿಯನ್ನು ನೇರವಾಗಿ ಅಲ್ಲಿನ ಜನರನ್ನು ಸಂಪರ್ಕಿಸಿ ಪಡೆಯುವುದರ ಜೊತೆಗೆ ದಾವಣಗೆರೆಯ ಕಡೆಯವರಾದ ಎಂ.ಜಿ. ಕೃಷ್ಣಮೂರ್ತಿ ಎಂಬುವವರನ್ನು ಮೆಕೊರ್ಮ್ಯಾಕ್ ಅವರು ಈ ತಮ್ಮ ಯೋಜನೆಯ ಸಹಾಯಕರನ್ನಾಗಿ ನೇಮಿಸಿಕೊಂಡು ಅವರಿಂದ ಅನೇಕ ವಿಚಾರಗಳನ್ನು ಪಡೆದುಕೊಂಡರು. ಎಂ.ಜಿ. ಕೃಷ್ಣಮೂರ್ತಿಯವರು ಇಂಗ್ಲಿಷಿನಲ್ಲಿ ಪಿ.ಎಚ್.ಡಿ. ಪದವಿಯನ್ನು ಮೈಸೂರು ವಿಶ್ವವಿದ್ಯಾನಿಲಯದಿಂದ ಪಡೆದವರಾಗಿದ್ದರು. ಎಂ.ಜಿ. ಕೃಷ್ಣಮೂರ್ತಿಯವರು ಕನ್ನಡ ಭಾಷೆ, ಸಮಾಜ, ಸಂಸ್ಕೃತಿ ಮುಂತಾದವುಗಳನ್ನು ಚೆನ್ನಾಗಿಬಲ್ಲವರಾಗಿದ್ದರು.

ಪ್ರಸ್ತುತ ಗ್ರಂಥದಲ್ಲಿ ಜಾತಿ, ಧರ್ಮ, ವೃತ್ತಿ ಹಬ್ಬಹರಿದಿನಗಳು ಮುಂತಾದವುಗಳಿಗೆ ಸಂಬಂಧಿಸಿದ ಅನೇಕ ಸಾಮಗ್ರಿಗಳು ದೊರೆಯುತ್ತವೆ. ಈ ಗ್ರಂಥದ ಕೊನೆಯಲ್ಲಿ ಕನ್ನಡ-ಇಂಗ್ಲಿಷ್ ಶಬ್ದಕೋಶವನ್ನುಕೂಡಾ ಕೊಡಲಾಗಿದೆ. ಡಾ. ಕೃಷ್ಣಮೂರ್ತಿಯವರ ಸಹಾಯದಿಂದ ಅನೇಕ ನುಡಿಗಟ್ಟುಗಳನ್ನು, ಪ್ರಾದೇಶಿಕ ರೂಪಗಳನ್ನು ಸಂಗ್ರಹಿಸಿ ಯಥಾವತ್ತಾಗಿ ವಿವರಿಸಿಕೊಳ್ಳಲು ಇದರಲ್ಲಿ ಪ್ರಯತ್ನಿಸಲಾಗಿದೆ. ಕನ್ನಡದ ಆಡು-ನುಡಿಯನ್ನು ಮಾತನ್ನು ವಿವರಿಸುವ ಈ ಗ್ರಂಥ ಅನೇಕ ವ್ಯಾಕರಣ ವಿಚಾರಗಳನ್ನು ಹಂತ ಹಂತವಾಗಿ ವಿವರಿಸುತ್ತದೆ. ಈ ಗ್ರಂಥಕ್ಕೆ ನೆರವಾಗುವ ಸಾಮಗ್ರಿಯನ್ನು ೧೯೬೨-೬೩ರಲ್ಲಿ ಸಂಗ್ರಹಿಸಿ, ಆ ಸಾಮಗ್ರಿಯನ್ನು ಬಿಡಿ ಬಿಡಿಯಾಗಿ ಅನೇಕ ಮಾದರಿಗಳಲ್ಲಿ ಅಳವಡಿಸಿಲಾಯಿತು. ಈ ಯೋಜನೆ ಸುಮಾರು, ಮೂರು ವರ್ಷಗಳವರೆಗೆ ಮುಂದುವರಿದು ಇದನ್ನು ೧೯೬೫ರಲ್ಲಿ ಮುಗಿಸಲಾಯಿತು. ಈ

ಗ್ರಂಥ ಆಧುನಿಕ ಭಾಷಾ ವಿಜ್ಞಾನದ ನೆಲಗಟ್ಟಿನ ಮೇಲೆ ರಚಿತವಾಗಿಲ್ಲವಾದರೂ ಇದರ ವಿವರಣೆಗಳು ಹೆಚ್ಚು ವೈಜ್ಞಾನಿಕವಾಗಿ ಕಾಣಿಸಿಕೊಳ್ಳುತ್ತವೆ. ಇದು ಕನ್ನಡದ ಆಡು ಮಾತಿನ ಸ್ವರೂಪವನ್ನು ಹೆಚ್ಚು ವೈಜ್ಞಾನಿಕವಾಗಿ ವಿವರಿಸುವ ಮೊತ್ತಮೊದಲ ಗ್ರಂಥವಾಗಿದೆ.

ಮೆಕೊರ್ಮ್ಯಾಕ್ ಅವರು ಈ ಗ್ರಂಥದ ಜೊತೆಗೆ ಧಾರವಾಡ ಕನ್ನಡದ ಸಾಮಾಜಿಕ ಉಪಭಾಷೆಗಳ ಸ್ವರೂಪವನ್ನು ತಿಳಿಸುವ ಲೇಖನವನ್ನು ಬರೆದು ೧೯೬೦ರಲ್ಲಿ ಪ್ರಕಟಿಸಿದರು.(Social Dialects of Dharwar Kannada. IJAL, Vol. 26, 1960) ಮೆಕೊರ್ಮ್ಯಾಕ್ ಅವರು ಇದರ ಜೊತೆಗೆ ಮತ್ತೊಂದು ಲೇಖನವನ್ನು ಸಿದ್ಧಗೊಳಿಸಿ ೧೯೬೮ರಲ್ಲಿ ಪ್ರಕಟಿಸಿದರು. ಇದು ಭಾರತೀಯ ಭಾಷೆಗಳಲ್ಲಿ ಕಂಡುಬರುವ ಕೆಲವು ಹೇತುಕ ವಿಚಾರಗಳನ್ನು ವಿವರಿಸುತ್ತದೆ. ಈ ಲೇಖನ ಎಂ.ಬಿ. ಎಮಿನೋ ಅವರ ಷಷ್ಠಿಪೂರ್ತಿ ಎಂಬ ಸಂಪುಟದಲ್ಲಿ ಪ್ರಕಟವಾಗಿದೆ. (A Causal Analysis of Caste Dialects, Studies in Linguistics, M.B. Emeneau Sasti Purti Vol. (ed) Bh. Krishnamurthy, Poona and Annamalai University, 1968) ಈ ಲೇಖನಗಳ ಜೊತೆಗೆ ಕನ್ನಡ ಭಾಷೆಯನ್ನು ಕಲಿಯಲು ಹಾಗೂ ಕಲಿಸಲು ಯೋಗ್ಯವಾದ Elementary Kannada ಎಂಬ ಗ್ರಂಥವನ್ನು ಮೂರು ಮಿಮಿಯೋ ಸಂಪುಟಗಳಲ್ಲಿ ಬೇರೆ ಬೇರೆ ವಿದ್ವಾಂಸರ ಸಹಾಯದಿಂದ ಬರೆದು ೧೯೬೨ರಲ್ಲಿ ಪ್ರಕಟಿಸಿದರು. ವಿದ್ಯಾರ್ಥಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಆಧುನಿಕ ಭಾಷಾ ವಿಜ್ಞಾನದ ಮೂಲ ತತ್ವಗಳನ್ನು ಆಧರಿಸಿ ಇದನ್ನು ರಚಿಸಲಾಗಿದೆ. (Elementary Kannada, 3 Vols, Mimio, with Krishna Murthy, M.G, Krishna Murthy, S, Prasad, S.B. and Shanta Rau. 1962).

ಮೆಕೊರ್ಮ್ಯಾಕ್‌ರವರ ಈ ಗ್ರಂಥ ಮತ್ತು ಲೇಖನಗಳು ಆಡು ಕನ್ನಡದ ಸ್ವರೂಪವನ್ನು ಪ್ರಾದೇಶಿಕ ಹಾಗೂ ಸಾಮಾಜಿಕ ಉಪಭಾಷೆಗಳ ವಿಶೇಷತೆಗಳನ್ನು ತಿಳಿಸುತ್ತವೆ. ಇವರ ಗ್ರಂಥ ಹಾಗೂ ಲೇಖನಗಳು ಕನ್ನಡ ಭಾಷೆಯನ್ನು ಕಲಿಯುವವರಿಗೆ ಹಾಗೂ ಕಲಿಸುವವರಿಗೆ ತುಂಬ ಉಪಯುಕ್ತವಾದವು. ಅಲ್ಲದೆ ಇವು ಕನ್ನಡಿಗರ ಭಾಷೆ,ಸಮಾಜ, ಸಂಸ್ಕೃತಿ, ಜಾತಿ, ವರ್ಗ, ವೃತ್ತಿ ಮುಂತಾದವುಗಳನ್ನು ತಿಳಿಸಲು ನೆರವಾಗುತ್ತವೆ.

ವಿಲಿಯಂ ಬ್ರೈಟ್ (William Bright) ಮತ್ತೊಬ್ಬ ಅಮೆರಿಕೆಯ ಭಾಷಾವಿಜ್ಞಾನಿ, ಶ್ರೀಯುತರು ಅಮೆರಿಕೆಯ ಶಿಕಾಗೊ, ಕ್ಯಾಲಿಫೋರ್ನಿಯಾ ಮುಂತಾದ ವಿಶ್ವವಿದ್ಯಾಲಯಗಳ ದಕ್ಷಿಣ ಏಷ್ಯಾದ ಅಧ್ಯಯನ ವಿಭಾಗಗಳಲ್ಲಿ ಸೇವೆ ಸಲ್ಲಿಸಿದ್ದಾರೆ (South Asian Studies) ಇವರು ಭಾಷಾವಿಜ್ಞಾನಕ್ಕೆ ಸಂಬಂಧಿಸಿದ ಅನೇಕ ಲೇಖನಗಳನ್ನು ಮತ್ತು ಗ್ರಂಥಗಳನ್ನು ಇಂಗ್ಲಿಷಿನಲ್ಲಿ ಬರೆದು ಪ್ರಕಟಿಸಿದ್ದಾರೆ. ವಿಲಿಯಂ ಬ್ರೈಟ್ ಅವರು ಪೂನಾದ ಡೆಕ್ಕನ್ ಕಾಲೇಜಿನಲ್ಲಿದ್ದುಕೊಂಡು ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಆಳವಾಗಿ ಅಧ್ಯಯನಮಾಡಿ ಬೇರೆ ಬೇರೆ ಲೇಖನಗಳನ್ನು ಗ್ರಂಥಗಳನ್ನು ಬರೆದು ಕನ್ನಡ ಭಾಷಾ ಅಧ್ಯಯನ ಕ್ಷೇತ್ರಕ್ಕೆ ತಮ್ಮ ಅಮೂಲ್ಯವಾದ ಕೊಡುಗೆಗಳನ್ನು ಕೊಟ್ಟು ಉಪಕರಿಸಿದ್ದಾರೆ.

ವಿಲಿಯಂ ಬ್ರೈಟ್ ಅವರು ೧೯೫೮ರಲ್ಲಿ An outline of Colloquial Kannada ಎಂಬ ಗ್ರಂಥವನ್ನು ಇಂಗ್ಲಿಷಿನಲ್ಲಿ ಬರೆದು ಪೂನದ ಡೆಕ್ಕನ್ ಕಾಲೇಜಿನ ಮೂಲಕ ಪ್ರಕಟಿಸಿದರು. ಇದರಲ್ಲಿ ಮೈಸೂರು ರಾಜ್ಯದ ಬೇರೆ ಬೇರೆ ಕಡೆಗಳಲ್ಲಿ ಬಳಕೆಯಲ್ಲಿರುವ ವ್ಯಾವಹಾರಿಕ ಕನ್ನಡವನ್ನು ವಿಶ್ಲೇಷಿಸಿ ಸುಮಾರು ಐದು ಅಧ್ಯಾಯಗಳಲ್ಲಿ ವಿವರಿಸಿಕೊಳ್ಳಲಾಗಿದೆ. ಇದು ಆಧುನಿಕ ಭಾಷಾ ವಿಜ್ಞಾನದ ಹಿನ್ನಲೆಯಲ್ಲಿ ಆಡುವ ಕನ್ನಡಕ್ಕೆ ಸಂಬಂಧಿಸಿದಂತೆ ರಚಿತವಾದ ಮೊತ್ತಮೊದಲ ಗ್ರಂಥ. ಇದಕ್ಕೂ ಹಿಂದೆ ಕನ್ನಡ ಭಾಷೆಯನ್ನು ಆಧುನಿಕ ಭಾಷಾ ವಿಜ್ಞಾನದ ಮೂಲ ತತ್ವಗಳ ಆಧಾರದ ಮೇಲೆ ರಚಿತವಾದ ಅನೇಕ ಗ್ರಂಥಗಳು, ಆ ಹೊತ್ತಿಗಾಗಲೇ ಸಾಕಷ್ಟು ಹೊರಬಂದಿದ್ದವು. ಆದರೆ ಇವು ಇಷ್ಟೊಂದು ಸಮಗ್ರವಾದ ಅಧ್ಯಯನವಾಗಿ ಕಾಣಿಸಿ ಕೊಳ್ಳುತ್ತಿರಲಿಲ್ಲ. ಆಧುನಿಕ ಭಾಷಾವಿಜ್ಞಾನದ ಮೂಲ ತತ್ವಗಳನ್ನು ಪ್ರಚಾರಕ್ಕೆ ತರುವುದು ಈ ಗ್ರಂಥಗಳ ಮುಖ್ಯ ಉದ್ದೇಶ.

ಈ ಗ್ರಂಥಕ್ಕೆ ನೆರವಾಗುವ ಸಾಮಗ್ರಿಯನ್ನು ಸ್ಥಳೀಯರಿಂದ ನೇರವಾಗಿ ಪಡೆಯಲಾಗಿದೆ. ಒಕ್ಕಲಿಗ, ಬ್ರಾಹ್ಮಣ ಮತ್ತು ಇತರ ಜಾತಿಗಳಿಗೆ ಸೇರಿದ ಜನರಿಂದ ಅವರು ಆಡುವ ಕನ್ನಡದ ಸಾಮಗ್ರಿಯನ್ನು ಸಂಗ್ರಹಿಸಿ ಅದನ್ನು ಹೆಚ್ಚು ವೈಜ್ಞಾನಿಕವಾಗಿ ವಿಶ್ಲೇಷಿಸಿ ವಿವರಿಸಿಕೊಳ್ಳುವ ಪ್ರಯತ್ನಮಾಡಿದ್ದಾರೆ.

ಈ ಗ್ರಂಥದಲ್ಲಿ ವ್ಯಾವಹಾರಿಕ ಕನ್ನಡದ ಧ್ವನಿಮಾಗಳನ್ನು ಕುರಿತು ಮೊದಲ ಅಧ್ಯಾಯದಲ್ಲಿ ವಿಶ್ಲೇಷಿಸಿ ವಿವರಿಸಿಕೊಂಡರೆ, ಎರಡನೆಯ ಅಧ್ಯಾಯದಲ್ಲಿ ಧ್ವನಿಮಾತ್ಮಕ ನಿಯಮಗಳನ್ನು ವಿವರಿಸಿಕೊಳ್ಳಲಾಗಿದೆ. ವ್ಯಾವಹಾರಿಕ ಕನ್ನಡದ ವ್ಯಾಕರಣ ವಿಚಾರಗಳನ್ನು ಬಹು ಸೂಕ್ಷ್ಮವಾಗಿ ಮೂರನೆಯ ಅಧ್ಯಾಯದಲ್ಲಿ ವಿವರಿಸಿಕೊಂಡರೆ, ಇದರ ನಾಲ್ಕನೆಯ ಅಧ್ಯಾಯದಲ್ಲಿ ವಾಕ್ಯ ವಿಶ್ಲೇಷಣೆಯನ್ನು ವಿವರಿಸಿಕೊಳ್ಳಲಾಗಿದೆ. ವಾಕ್ಯ ವಿಶ್ಲೇಷಣೆಗೆ ನೆರವಾಗುವ ಕೆಲವು ಕಥೆಗಳನ್ನು ಈ ಗ್ರಂಥದಲ್ಲಿ ಕೊಡಲಾಗಿದೆ. ಇದರ ಕೊನೆಯಲ್ಲಿ ಕನ್ನಡ ಶಬ್ದಗಳ ಪಟ್ಟಿಯನ್ನು ಅರ್ಥದ ಸಹಿತ ಇಂಗ್ಲಿಷಿನಲ್ಲಿಕೊಡಲಾಗಿದೆ. ಈ ಗ್ರಂಥ ಎಷ್ಟೇ ಪುಟ್ಟ ಗ್ರಂಥವಾಗಿ ತೋರಿಬಂದರೂ ಇದರಲ್ಲಿ ಆಧುನಿಕ ಭಾಷಾವಿಜ್ಞಾನಕ್ಕೆ ಸಂಬಂಧಿಸಿದ ಮೂಲತತ್ವ ಗಳನ್ನು ಹಂತ ಹಂತವಾಗಿ ವಿವರಿಸಿಕೊಳ್ಳಲು ಪ್ರಯತ್ನಿಸಲಾಗಿದೆ. ಇದು ಅತ್ಯುತ್ತಮ ಗ್ರಂಥವಾಗಿ ಕಾಣಿಸಿಕೊಳ್ಳುತ್ತಿದೆ. ಅಲ್ಲದೆ ಇದು ಸಂಶೋಧಕರಿಗೆ ಭಾಷಾ ವಿಜ್ಞಾನದ ವಿದ್ಯಾರ್ಥಿಗಳಿಗೆ ಹೆಚ್ಚು ಉಪಯುಕ್ತ ಗ್ರಂಥವಾಗಿದೆ ಎನ್ನಬಹುದು.

ವಿಲಿಯಂ ಬ್ರೈಟ್ ಅವರು ಅನೇಕ ಲೇಖನಗಳನ್ನು ಬರೆದು ಪ್ರಕಟಿಸಿದ್ದಾರೆ. ಅವುಗಳಲ್ಲಿ ಕೆಲವು ಸ್ವತಂತ್ರವಾಗಿ ರಚಿತವಾಗಿದ್ದರೆ ಮತ್ತೆ ಕೆಲವು ಬೇರೆ ಬೇರೆ ವಿದ್ವಾಂಸರ ಸಹಾಯದಿಂದ ರಚಿತವಾದುವುಗಳಾಗಿವೆ. ಭಾರತದ ಕೆಲವು ಜಾತಿಯ ವ್ಯಕ್ತಿಗಳಲ್ಲಿ ತೋರಿಬರುವ ಭಾಷಿಕ ಬದಲಾವಣೆಯನ್ನು ಕುರಿತು ಒಂದು ಲೇಖನವನ್ನು ಸಿದ್ಧಗೊಳಿಸಿ ೧೯೬೦ರಲ್ಲಿ ಪ್ರಕಟಿಸಿದರು. (Linguistic Changes in some Indian Caste, IJAL,Vol. 26,1960.) ಭಾಷಾ ಪರಿವರ್ತನೆಗೆ ಜಾತಿ ಹೇಗೆ ಕಾರಣವಾಗುತ್ತದೆ ಎಂಬ ವಿಚಾರ ಇದರಲ್ಲಿ ಚಿತ್ರಿತವಾಗಿದೆ.

ಇದರ ಜೊತೆಗೆ ಮೈಸೂರು ರಾಜ್ಯದ ಜಾತಿಯ ಉಪಭಾಷೆಯನ್ನು ವಿವರವಾಗಿ ಪರಿಶೀಲಿಸಿ ಒಂದು ಲೇಖನವನ್ನು ಬರೆದು ಪ್ರಕಟಿಸಿದ್ದಾರೆ. ಈ ಲೇಖನ ೧೯೬೦ರಲ್ಲಿ ಪೂನಾದ Indian Linguistic ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿದೆ.(A Study of Caste and Dialects; n Mysore IL. Vol, 21,1960, Poona.) ಇದೇ ರೀತಿ ಸಾಮಾಜಿಕ ಉಪಭಾಷೆಗಳು ಮತ್ತು ಭಾಷಾ ಇತಿಹಾಸ ಎಂಬ ಲೇಖನವನ್ನು ಬರೆದು ೧೯೬೦ರಲ್ಲಿ ಪ್ರಕಟಿಸಿದರು. ಇದು Central Asiatic Journal, Hague, ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿದೆ. (Social Dialects and Language History, CAJ, Hague, 1960) ಈ ಲೇಖನಗಳಲ್ಲದೆ ವ್ಯಾವಹಾರಿಕ ಹಾಗೂ ಬರಹದ ಕನ್ನಡದ ಕೆಲವು ಧ್ವನಿಮಾತ್ಮಕ ನಿಯಮಗಳನ್ನು ಕುರಿತು ಒಂದು ಲೇಖನವನ್ನು ಸಿದ್ಧಗೊಳಿಸಿ ೧೯೭೦ರಲ್ಲಿ ಪ್ರಕಟಿಸಿದರು. ಈ ಲೇಖನ Journal of American Oriental Society ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿದೆ (Phonological rules in Literary and Colloquial Kannada, JAOS, Vol,90, New Haven, 1970) ೧೯೭೨ರಲ್ಲಿ ದ್ರಾವಿಡ ಶಬ್ದಗಳ ಅಂತ್ಯದ ಸ್ವರಗಳಲ್ಲಿ ಉಂಟಾಗುವ ವ್ಯತ್ಯಾಸಗಳನ್ನು ಕುರಿತು ಒಂದು ಲೇಖನವನ್ನು ಬರೆದು ಅದನ್ನು ಕೇರಳದ International Journal of Dravidian Linguistics ಎಂಬ ಪತ್ರಿಕೆಯಲ್ಲಿ ಪ್ರಕಟಿಸಿದರು. (The Enunciative Vowel, IJDL, Vol-1-1, 1972, Kerala,) ಈ ಮೇಲೆ ಹೇಳಿರುವ ಎಲ್ಲ ಲೇಖನಗಳು ಸ್ವತಂತ್ರವಾಗಿಯೇ ಸಿದ್ಧಗೊಂಡು ಪ್ರಕಟವಾದವುಗಳಾಗಿವೆ. ಇನ್ನೂ ಕೆಲವು ಕಿರು ಗ್ರಂಥ ಮತ್ತು ಲೇಖನಗಳನ್ನು ಬ್ರೈಟ್ ಅವರು ಬೇರೆ ಬೇರೆಯವರ ಸಹಾಯದಿಂದ ಸಿದ್ಧಗೊಳಿಸಿ ಪ್ರಕಟಿಸಿದ್ದಾರೆ. ವಿಲಿಯಂ ಬ್ರೈಟ್‌ರವರು ಶಾಂತರಾವ್ ಎಂಬುವವರೊಡನೆ ಸೇರಿ Spoken Kannada ಎಂಬ ಕಿರುಗ್ರಂಥವನ್ನು ೧೯೬೦ರಲ್ಲಿ ಪ್ರಕಟಿಸಿದರು. ಇದನ್ನು ಅಮೆರಿಕದ ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯ ಪ್ರಕಟಿಸಿದೆ. ಇದರಲ್ಲಿ ಆಡುವ ಕನ್ನಡವನ್ನು ಕಲಿಯಲು ಹಾಗೂ ಕಲಿಸಲು ನೆರವಾಗುವ ಕೆಲವು ಉಪಯುಕ್ತ ಪಾಠಗಳಿವೆ. ಇವು ಕನ್ನಡ ಕಲಿಯುವ ವಿದ್ಯಾರ್ಥಿಗಳಿಗೆ ತುಂಬ ಸಹಾಯಕವಾಗುತ್ತವೆ (Spoken Kannada, Lessons, 1-12, University of California, Berkely, 1960)ವಿಲಯಂ ಬ್ರೈಟ್‌ರವರು ಬಿ.ವಿ. ವೀರಭದ್ರಪ್ಪ ಅವರೊಡನೆ ಸೇರಿ ಮೈಸೂರು ಕನ್ನಡದ ಸಾಮಾಜಿಕ ಪ್ರಭೇದಗಳನ್ನು ಕುರಿತು ಒಂದು ಲೇಖನವನ್ನು ಬರೆದು ಪ್ರಕಟಿಸಿದರು. ಇದನ್ನು ಬಿ.ವಿ. ವೀರಭದ್ರಪ್ಪನವರು ಕನ್ನಡಕ್ಕೆ ಅನುವಾದಿಸಿ ಅದನ್ನು ಮೈಸೂರು ವಿಶ್ವವಿದ್ಯಾನಿಲಯ ಪ್ರಬುದ್ಧ ಕರ್ನಾಟಕ ಎಂಬ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. (ಮೈಸೂರು ಕನ್ನಡದ ಸಾಮಾಜಿಕ ಉಪಭಾಷೆಗಳು. ಪ್ರಬುದ್ಧ ಕರ್ನಾಟಕ ಮೈಸೂರು ವಿ.ವಿ. ವಾಲ್ಯೂಮ್ ೪೫, ೧೯೬೩) ಇವರು ಎ.ಕೆ. ರಾಮಾನುಜಂ ಅವರೊಡನೆ ಸೇರಿ ತಮಿಳಿನ ಧ್ವನಿಮಾಗಳನ್ನು ಕುರಿತು ಒಂದು ಕಿರುಗ್ರಂಥವನ್ನು ಬರೆದು ೧೯೬೨ರಲ್ಲಿ ಪ್ರಕಟಿಸಿದರು ಇದನ್ನು ಅಮೆರಿಕೆಯ ಶಿಕಾಗೊ ವಿಶ್ವವಿದ್ಯಾನಿಲಯವು ಪ್ರಕಟಿಸಿದೆ (Tamil Phonemics, University of Chicago, 1962.) ಇದರ ಜೊತೆಗೆ ತಮಿಳು ಉಪಭಾಷೆಗಳನ್ನು ಕುರಿತು ಒಂದು

ಕಿರುಗ್ರಂಥವನ್ನು ಬರೆದು ೧೯೬೧-೬೨ರಲ್ಲಿ ಪ್ರಕಟಿಸಿದರು. ಇದಕ್ಕೂ ಎ.ಕೆ. ರಾಮಾನುಜಂರವರೇ ಸಹಾಯಕರಾಗಿದ್ದರು. (Survey of Tamil Dialects, University of Chicago. 1961-62) ಇದೇ ರೀತಿ ಎ. ಕೆ. ರಾಮನುಜಂ ಅವರ ಸಹಾಯ ಪಡೆದು ಸಾಮಾಜಿಕ ಭಾಷಾ ಪರಿವರ್ತನೆಗಳು ಮತ್ತು ಭಾಷಿಕ ಪರಿವರ್ತನೆ ಎಂಬ ಲೇಖನವನ್ನು ವಿಲಿಯಂ ಬ್ರೈಟ್‌ರವರು ಸಿದ್ಧಗೊಳಿಸಿ ಮೆಸಾಚೂಸೆಟ್ಸ್‌ನಲ್ಲಿ ಜರುಗಿದ ಒಂಬತ್ತನೆಯ ಭಾಷಾ ವಿಜ್ಞಾನದ ಅಂತರಾಷ್ಟ್ರೀಯ ಕಾಂಗ್ರೆಸ್ ಎಂಬ ಸಮ್ಮೇಳನದಲ್ಲಿ ಮಂಡಿಸಿ ಇದನ್ನು 1962ರಲ್ಲಿ ಪ್ರಕಟಿಸಿದರು. ಇದರಲ್ಲಿ ಭಾಷಿಕ ಸಂವರ್ತನೆಗೆ ಸಮಾಜ ಹೇಗೆ ಕಾರಣವಾಗುತ್ತದೆ ಹಾಗೆ ಉಂಟಾದ ಭಾಷಾ ಪರಿವರ್ತನೆ ಹೇಗೆ ಸಾಮಾಜಿಕ ಉಪಭಾಷೆ ಎನಿಸಿಕೊಳ್ಳುತ್ತದೆ ಎಂಬ ವಿಚಾರಗಳನ್ನು ವಿವರವಾಗಿ ತಿಳಿಸಲಾಗಿದೆ. (Socio linguistic changes and Language change, 9th International congress of Linguistics, Massachusets, 1962) ಹೀಗೆ ವಿಲಿಯಂ ಬ್ರೈಟ್‌ರವರು ಅನೇಕ ಗ್ರಂಥಗಳನ್ನು ಲೇಖನಗಳನ್ನು ಬರೆದು ಕನ್ನಡ ಭಾಷಾ ವಿಜ್ಞಾನಕ್ಕೆ ತಮ್ಮ ಅಪೂರ್ವವಾದ ಕೊಡುಗೆಯನ್ನು ನೀಡಿದ್ದಾರೆ.

ಜರ್ಮನಿಯಿಂದ ಭಾರತಕ್ಕೆ ಬಂದು ಮಂಗಳೂರು ಮತ್ತು ಧಾರವಾಡಗಳಲ್ಲಿದ್ದು ಕೊಂಡು ಕನ್ನಡ ಭಾಷೆಯನ್ನು ಆಳವಾಗಿ ಪರೀಶೀಲಿಸಿ ಕನ್ನಡ ಇಂಗ್ಲಿಷ್ ಶಬ್ದಕೋಶವನ್ನು ಕನ್ನಡ ವ್ಯಾಕರಣ ಗ್ರಂಥವನ್ನು ಬರೆದುಕೊಟ್ಟು ಕನ್ನಡಿಗರ ಅಭಿಮಾನಕ್ಕೆ ಪಾತ್ರರಾಗಿರುವ ಎಫ್.ಕಿಟೆಲ್, ಅಮೆರಿಕೆಯಿಂದ ಭಾರತಕ್ಕೆ ಬಂದು ದಕ್ಷಿಣ ಭಾರತದ ಬೇರೆ ಬೇರೆ ಭಾಗಗಳಲ್ಲಿ ಸಂಚರಿಸಿ ಆಡುವ ಕನ್ನಡ ಭಾಷೆಗೆ ಅಪೂರ್ವ ಹಾಗೂ ಅಮೂಲ್ಯವಾದ ಕೊಡುಗೆಯನ್ನು ನೀಡಿದ ವಿಲಿಯಂ ಮೆಕೊರ್ಮೈಕ್ ಮತ್ತು ವಿಲಿಯಂ ಬ್ರೈಟ್ ಅವರನ್ನು ಕನ್ನಡಿಗರಾದ ನಾವು ಸ್ಮರಿಸಿಕೊಳ್ಳಲೇಬೇಕು. ಈ ವಿದೇಶಿತ್ರಯರು ತಮ್ಮ ಅಮೂಲ್ಯವಾದ ಗ್ರಂಥ ಹಾಗೂ ಲೇಖನಗಳ ಮೂಲಕ ಕನ್ನಡ ಭಾಷಾವಿಜ್ಞಾನಕ್ಷೇತ್ರ ಹೆಚ್ಚು ವೈಜ್ಞಾನಿಕ ಹಾಗೂ ವ್ಯಾಪಕವಾಗಿ ಬೆಳೆಯಲು ಕಾರಣರಾಗಿದ್ದಾರೆ. ಕನ್ನಡ ಭಾಷಾ ವಿಜ್ಞಾನ ಕ್ಷೇತ್ರಕ್ಕೆ ಇವರು ಕೊಟ್ಟ ಅಮೂಲ್ಯವಾದ ಚೊಚ್ಚಲು ಕೊಡುಗೆ ಇಂದಿನ ಕನ್ನಡ ಭಾಷಾವಿಜ್ಞಾನದ ವ್ಯಾಪಕತೆಗೆ ಸಾಕ್ಷಿಯಾಗಿದೆ ಎಂದರೆ ಅತಿಶಯೋಕ್ತಿಯಲ್ಲ.

ಕನ್ನಡ 'ಒಡಪುಗಳು' : ಒಂದು ವಿವೇಚನೆ

ವಿಜಯಮ್ಮ .ವಿ

ಜನಪದ ಸಾಹಿತ್ಯ ಮತ್ತು ಭಾಷೆಯ ದೃಷ್ಟಿಯಿಂದ ಗಮನಾರ್ಹವೆನಿಸಿರುವ ಗಾದೆ, ಒಗಟುಗಳಂತೆ 'ಒಡಪು' ಕೂಡ ಒಂದು ಪ್ರಮುಖ ಪ್ರಕಾರ. ಗಾದೆ, ಒಗಟು, ಒಡಪುಗಳನ್ನು ಗದ್ಯಪ್ರಕಾರ ಎಂದು ಗುರುತಿಸಿದ್ದರೂ ಪದ್ಯದ ಲಯ, ಪ್ರಾಸ, ಅನುಪ್ರಾಸಗಳ ವಿಶಿಷ್ಟ ಸಂಯೋಗವನ್ನು ಹೊಂದಿರುವುದರಿಂದ ಇವು ಗದ್ಯಪ್ರಕಾರಗಳಿಗಿಂತ ಭಿನ್ನವಾಗಿರುತ್ತವೆ. ವಚನ ಪ್ರಕಾರಕ್ಕೆ ಸಾಹಿತ್ಯದಲ್ಲಿ ಒಂದು ವಿಶಿಷ್ಟ ಸ್ಥಾನವುಂಟು. ಹೇಗೆ ವಚನಗಳು ಗದ್ಯದಷ್ಟು ಸರಳವೂ ಪದ್ಯದಷ್ಟು ಕಠಿಣವೂ ಅಲ್ಲವೋ ಹಾಗೆಯೇ ಒಗಟು. ಒಡಪುಗಳೂ ಕೂಡ.

ಜಾನಪದಕ್ಕೆ ಸಂಬಂಧಿಸಿದಂತೆ ಕೆಲವು ಕನ್ನಡ ಪಾರಿಭಾಷಿಕ ಶಬ್ದಗಳನ್ನು ಹಾ.ಮಾ. ನಾಯಕರು ಸೂಚಿಸಿದ್ದೇ ಅಲ್ಲದೆ ಜಾನಪದದ ಕೆಲವು ಪ್ರಕಾರಗಳಿಗೂ ಮೊದಲಬಾರಿಗೆ ಹೆಸರುಗಳನ್ನು ಸೂಚಿಸಿದರು. Folklore-ಜಾನಪದ, Folk-ಜನಪದ, Ballad-ಲಾವಣಿ, Folk Literature-ಜನಪದ ಸಾಹಿತ್ಯ, folksong -ಜನಪದ ಗೀತೆ, Myth-ಪುರಾಣ. Legend-ಐತಿಹ್ಯ. Marchen ಕಟ್ಟುಕಥೆ. Motif-ಆಶಯ, Type-ವರ್ಗ ಇತ್ಯಾದಿ. ಈ ದೃಷ್ಟಿಯಿಂದ ಪ್ರಪಂಚದ ಎಲ್ಲ ಸಂಸ್ಕೃತಿಗಳಲ್ಲೂ ಕಂಡುಬರುವ ಒಗಟು ಪ್ರಕಾರಕ್ಕೆ 'Riddle' ಶಬ್ದ ಬಳಕೆಯಲ್ಲಿರುವುದರಿಂದ ಒಡಪು ಶಬ್ದ ಹಾಗೂ ಸಾಹಿತ್ಯ ಒಗಟಿಗೆ ತೀರಾ ಹತ್ತಿರವಾದುದರಿಂದ ಒಡಪನ್ನು 'Naming Riddle' ಎಂದೂ ಆಚರಣೆಯೊಂದಿಗೆ ಬೆಳದುಕೊಂಡಿರುವ ವೀರಭದ್ರನ ವಡಬುಗಳನ್ನು 'Ritual Riddles' ಎಂದು ಕರೆಯಬಹುದೆಂದು ವಿ. ಎನ್. ಶಿವರಾಮು ಅವರು ಅಭಿಪ್ರಾಯಪಟ್ಟಿದ್ದಾರೆ.

ಜನಪದ ಸಾಹಿತ್ಯ ಪ್ರಕಾರಗಳಲ್ಲಿ ವಿಶಿಷ್ಟ ಸ್ಥಾನ ಪಡೆದಿರುವ ಒಡಪುಗಳನ್ನು ಮೊದಲಬಾರಿಗೆ ಸಂಗ್ರಹಿಸಿ ತಮ್ಮ 'ಗರತಿಯ ಮನೆಯಿಂದ ' (೧೯೫೫) ಕೃತಿ ಮೂಲಕ ಪರಿಚಯಿಸಿದ ಕೀರ್ತಿ ಶ್ರೀ ಈಶ್ವರಚಂದ್ರಚಿಂತಾಮಣಿ ಅವರಿಗೆ ಸಲ್ಲುತ್ತದೆ. ಇತ್ತೀಚಿನ ಸಂಕಲನ ಡಾ. ದಸ್ತಗೀರ ಅಲ್ಲೀಭಾಯಿ ಅವರ 'ಉತ್ತರ ಕರ್ನಾಟಕದ ಜನಪದ ಒಡಪುಗಳು' (೧೯೯೨) ಉತ್ತರ ಕರ್ನಾಟಕ ಭಾಗದ ಒಡಪುಗಳ ಸಂಕಲನಗಳು ಪ್ರಕಟವಾಗಿವೆ. ಮದುವೆಯ ವೇಳೆಯಲ್ಲಿ ಗಂಡನ ಹೆಸರನ್ನು ಕೇಳಿದಾಗ ಹೆಣ್ಣು ನೇರವಾಗಿ ಹೇಳುವುದಿಲ್ಲ. ಹಾಗೆ ಹೇಳಿದರೆ ಅಶುಭವೆಂಬ ನಂಬಿಕೆಯುಂಟು. ಆದ್ದರಿಂದ ಒಂದು ನಮೂನೆಯ ಬೆಡಗಿನ ನುಡಿಯಲ್ಲಿ ಹೇಳುತ್ತಾಳೆ. ಈ ಸಂಪ್ರದಾಯ ಮೊದಲು ಕರ್ನಾಟಕದ ಎಲ್ಲ ಭಾಗಗಳಲ್ಲೂ ಇದ್ದಿರಬೇಕು.

ಆದರೆ ನಾಗರಿಕತೆಯ ಸಂಪರ್ಕದಿಂದಾಗಿ ಹಲವಾರು ಭಾಗಗಳಲ್ಲಿ ಇತ್ತೀಚಿಗೆ ಈ ಸಂಪ್ರದಾಯ ಕಾಣೆಯಾಗುತ್ತಿದೆ. ಆದರೂ ಕರ್ನಾಟಕದ ಬಹುತೇಕ ಭಾಗಗಳಲ್ಲಿ ಇಂದಿಗೂ ಈ ಸಂಪ್ರದಾಯವನ್ನು ಕಾಣುತ್ತೇವೆ. ಈ ಒಡಪುಗಳನ್ನು ಕರ್ನಾಟಕದ ಪ್ರಾದೇಶಿಕತೆಗೆ ಅನುಗುಣವಾಗಿ ಬಳಸಿಕೊಂಡಿರುವುದನ್ನು ಗಮನಿಸಬಹುದು. ಆದರೆ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಒಡಪು ಇದ್ದ ಬಗ್ಗೆ ನಮಗೆ ಮಾಹಿತಿ ಎಲ್ಲೂ ದೊರೆಯುವುದಿಲ್ಲ.

ಒಡಪು ಉತ್ತರ ಕರ್ನಾಟಕ ಭಾಗದಲ್ಲಿ ಮಾತ್ರ ಅದೂ ಜನಪದರ ನಾಲಗೆ ಮೇಲೆ ಪ್ರಚಲಿತವಿರುವ ಶಬ್ದ. ದಕ್ಷಿಣ ಕರ್ನಾಟಕ ಭಾಗದಲ್ಲಿ ಜಾನಪದ ಅಧ್ಯಯನಕಾರರನ್ನುಳಿದು ಉಳಿದ ಯಾವ ವರ್ಗದ ಜನರಿಗೂ ಒಡಪು ಪದ ತಿಳಿದಿಲ್ಲ. ಚಿತ್ರದುರ್ಗ ಮತ್ತು ಶಿವಮೊಗ್ಗ ಭಾಗಗಳಲ್ಲಿ ಬೆಡಗು ಎಂದು ಕರೆಯುವ ಈ ಜನಪದ ಭಾಷಿಕ ಬಗೆಯನ್ನು ಚಿಕ್ಕಮಗಳೂರು ಮತ್ತು ಹಾಸನ ಸುತ್ತಿನಲ್ಲಿ 'ತೊಡಕು' ಅನ್ನುತ್ತಾರೆ. ನಾಗಮಂಗಲ, ತುಮಕೂರು ಕಡೆಗೂ ತೊಡಕು ಎಂಬ ಹೆಸರೇ ಇದ್ದರೂ ಒಡಪಿನೊಂದಿಗೆ ಹೆಸರುಹೇಳುವುದು 'ಜೋಡೆಸ್ರು'. ಒಡಪಿಲ್ಲದೆ ಹೇಳುವುದು 'ಒಂಟೆಸ್ರು' ಎನ್ನುತ್ತಾರೆ. ಬೆಂಗಳೂರಿನಲ್ಲಿ 'ಒಡಪು' ಎಂದಿದ್ದಾರೆ. ಮೈಸೂರು, ಚಾಮರಾಜನಗರ, ಗುಂಡ್ಲುಪೇಟೆ ತಾಲೂಕುಗಳಲ್ಲಿ 'ಅರ್ಥಮಾನ' ಎಂಬ ಹೆಸರಿದ್ದರೆ ಕೊಡಗಿನಲ್ಲಿ 'ಹೆಸರು ಹೇಳಿಸೋದು' ಎಂಬ ಮಾತು ರೂಢಿಯಲ್ಲಿದೆ.

ಸಾಮಾನ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ಹೆಂಗಸರಾಗಲಿ, ಗಂಡಸರಾಗಲಿ, ಮಕ್ಕಳಾಗಲಿ ಕಿರಿಯರು ಹಿರಿಯರ ಹೆಸರಿಡಿದು ಕರೆಯುವುದಿಲ್ಲ. ಅಗೌರವ ಎಂಬುದು ಇದಕ್ಕೆ ಕಾರಣ. ಹೆಂಗಸರು ತಮ್ಮ ಗಂಡನ ಹೆಸರು ಹೇಳಬಾರದೆಂಬ ಸಂಪ್ರದಾಯವಿದೆ. ಗಂಡನಿಗೆ ತಾವು ತೋರವ ಗೌರವ. ಅಲ್ಲದೆ ನಾಚಿಕೆ ಮತ್ತು ಗಂಡನ ಹೆಸರು ಹೇಳಿದರೆ ಆತನ ಆಯಸ್ಸು ಕಡಿಮೆಯಾಗುತ್ತದೆ ಎಂಬ ಜಾನಪದೀಯ ಕಾರಣಗಳಿವೆ. ಹೀಗಾಗಿ ಹೆಂಗಸರು ಗಂಡನ ಹೆಸರು ಹೇಳುವುದು ಅಪರೂಪ. ಹೆಸರು ಹೇಳುವುದು ಸಾಮಾನ್ಯವಾಗಿ 'ವರಸೆ' 'ಸಾಲು' ಅಥವಾ 'ಸಾಲಾವಳಿ' ಇರುವವರಲ್ಲಿ ಮಾತ್ರ. ಅಂದರೆ ಹೆಸರು ಹೇಳಬೇಕಾದವರು ಕೇಳುವವರಿಗೆ ಸೋದರತ್ತೆ-ಮಾವ ಅಥವಾ ಅವರ ಮಗ-ಮಗಳು, ಅತ್ತಿಗೆ-ನಾದಿನಿ, ಭಾವ-ಮೈದುನ, ಅತ್ತೆ-ಮಾವ ಈ ರೀತಿಯ ಸಂಬಂಧದವರಾಗಿರುತ್ತಾರೆ. ತಂದೆ-ತಾಯಿ, ಸೋದರ-ಸೋದರಿ ಸಂಬಂಧದವರನ್ನು ಹೆಸರೇಳುವಂತೆ ಕೇಳುವುದಿಲ್ಲ. ಪ್ರಧಾನವಾಗಿ ಹೆಂಗಸರು ಹೇಳುವ ಒಡಪುಗಳೆಂದು ಗುರುತಿಸಿ ಹೆಂಗಸರ ಒಡಪುಗಳನ್ನು ದಾಂಪತ್ಯಪ್ರೇಮ, ಗಂಡನ ಗುಣಗಾನ, ಮೊಂಡುತನದೋಷ, ಉಡುಗೆ-ತೊಡುಗೆ. ತಿಂಡಿ-ತಿನಿಸು, ಕ್ರೀಡೆ-ಕಲೆ, ದೇವರು-ಧರ್ಮ. ನ್ಯಾಯ-ನೀತಿ, ಹಾಸ-ಪರಿಹಾಸ, ಕೃಷಿಕಾರ್ಯ, ಮಂಗಳಕಾರ್ಯ ಮತ್ತು ಆಧುನಿಕ ಒಡುಪುಗಳೆಂದು ವರ್ಗೀಕರಿಸುವ ಪ್ರಯತ್ನಗಳು ನಡೆದಿವೆ. ಚಿತ್ರದುರ್ಗ, ಶಿವಮೊಗ್ಗ ಜಿಲ್ಲೆಗಳಲ್ಲಿ ಮದುವೆ, ಒಸಗೆ, ಸೀಮಂತ, ಮಗುವನ್ನು ತೊಟ್ಟಿಲಿಗೆ ಹಾಕುವಾಗ ಹೆಸರೇಳಿಸುವ ಸಂಪ್ರದಾಯವಿದೆ. ಸಾಮಾನ್ಯವಾಗಿ ಹೆಂಗಸರು ಹೇಳುವ ಒಡಪುಗಳಲ್ಲಿ ಹೆಚ್ಚಿನವು ಗಂಡನನ್ನು ಹೊಗಳುವುದು

ಅಥವಾ ವ್ಯಂಗ್ಯದ ನುಡಿಯಿಂದಲೇ ಕೊನೆಗೊಳ್ಳುತ್ತವೆ. ಗಂಡ ಹೆಂಡಿರು ಹೆಸರು ಹೇಳುವಾಗ ಹೆಸರಿಗೆ ಮೊದಲು ವರ್ಣನಾತ್ಮಕವಾಗಿ, ಉಪಮೆ, ವಿಶೇಷಣಗಳಲ್ಲಿ, ಒಪ್ಪವಾಗಿ ಹೇಳುವ ಚುಟುಕುಗಳೇ ಒಡಪುಗಳು. ಅಂತಹ ಕೆಲವು ಒಡಪುಗಳನ್ನು ಇಲ್ಲಿ ಪರಿಭಾವಿಸಬಹುದು.

ಮದುವೆ ಸಂದರ್ಭದ ಒಡಪುಗಳು

ಒಡಪುಗಳನ್ನು ಬಳಸುವ ಸಂದರ್ಭ ಮತ್ತು ಅವುಗಳ ಸೊಗಸನ್ನು ತಿಳಿಯುವುದಾದರೆ ಮೊದಲಿಗೆ ಮದುವೆ ಸಮಯದಲ್ಲಿ ಬಳಸುವ ಒಡಪುಗಳನ್ನು ನೋಡಬಹುದು. ಮೈಲಹಳ್ಳಿ ರೇವಣ್ಣನವರು 'ನಮ್ಮ ಒಡಪುಗಳು' ಎಂಬ ಪುಸ್ತಕದಲ್ಲಿ, ಒಡಪು ಹೇಳುವವರನ್ನು ಮೂರು ಗುಂಪುಗಳಲ್ಲಿ ವರ್ಗೀಕರಿಸಿದ್ದಾರೆ.

೧. ಹೆಣ್ಣುಮಕ್ಕಳ ಒಡಪುಗಳು.
೨. ಗಂಡುಮಕ್ಕಳ ಒಡಪುಗಳು.
೩. ಮದುಮಕ್ಕಳ ಒಡಪುಗಳು.

ಹೆಣ್ಣುಮಕ್ಕಳ ಒಡಪುಗಳು

ಒಂದು ಹೆಣ್ಣು ಹಲವಾರು ಆಸೆಗಳನ್ನು ಇಟ್ಟುಕೊಂಡವಳು. ಇದರಲ್ಲಿ ಮುಖ್ಯವಾಗಿ ಒಡವೆಯದು. ಈ ಆಸೆಯನ್ನು ಗಂಡ ಈಡೇರಿಸಿಲ್ಲ. ನಾಳೆ, ನಾಡಿದ್ದು. ಇನ್ನೊಂದು ದಿನ ಎಂದು ದಿನದೂಡುತ್ತಾ ಹೆಂಡತಿಗೆ ನಿರಾಸೆಯನ್ನು ಉಂಟು ಮಾಡಿದ್ದಾನೆ. ನಿರಾಶೆಗೊಂಡ ಹೆಂಡತಿ ಹೇಳುತ್ತಾಳೆ -

ನಾಲ್ಕು ತೋಳಿನ ಅಂಗಿ
ನಾನೂರು ರೂಪಾಯ ಸಂಬ್ಳ
ನಾಗರಡಿಕೆ ಮಾಡ್ಸಂದ್ರೆ
ನಾಳೆ ನಾಳೆ ಅಂತಾರೆ ದಾಸಪ್ಪ ಮಾವ.

ತನ್ನ ಗಂಡನ ವೃತ್ತಿಯನ್ನು, ತಾನು ಬಯಸಿದ ಒಡವೆಯನ್ನು ತಂದುಕೊಡಲು ತನ್ನ ಗಂಡ ಅನುಸರಿಸುತ್ತಿರುವ ವಿಳಂಬ ನೀತಿಯನ್ನು ತಮಾಷೆ ಮಾಡಿದ್ದಾಳೆ. ಗಂಡಸರು ಹೆಸರೇಳುವಾಗ ಹೆಂಡತಿಯ ಹೆಸರನ್ನು ಮೊಟಕಾಗಿ ಹೇಳುವುದು ಸಾಮಾನ್ಯ. ಕೆಂಪಮ್ಮನನ್ನು ಕೆಂಪಿ ಎಂದೂ ಹಾಗೆಯೇ ಮಂಜಿ, ರತ್ನಿ, ಕಮಲಿ, ಸರೋಜಿ ಅನ್ನುತ್ತಾರೆ. ಆದರೆ ಹೆಣ್ಣು ಮಾತ್ರ ಗೌಡ್ರು, ರಾಯರು, ಮಾವ ಎಂದು ಹೆಸರಿನ ಮುಂದೆ ಗೌರವ ಸೂಚಕ ಪದಗಳನ್ನು ಸೇರಿಸಿ ಹೇಳುತ್ತಾಳೆ. ಮದುವೆಗೆ ನಾನಾ ಬಗೆಯ ಹೆಣ್ಣು ಮಕ್ಕಳು ಸೇರುತ್ತಾರೆ. ಒಬ್ಬೊಬ್ಬರ ಅನುಭವ ಒಂದೊಂದು ರೀತಿ . ಆರತಿ ಬೆಳಗುವ ಸರದಿ ಮತ್ತೊಬ್ಬ ಹೆಣ್ಣಿಗೆ ಬಂದಾಗ ಅವಳು ಸಂಸಾರದಲ್ಲಿ ಸಾಕಷ್ಟು ಕಹಿಯನ್ನು ಅನುಭವಿಸಿದವಳಾಗಿರುತ್ತಾಳೆ. ತನ್ನ ಗಂಡ

ಬೇರೊಬ್ಬಳ ಸಹವಾಸ ಮಾಡಿದಾಗ ಅವನಿಗೆ ಅವಳು ಬುದ್ಧಿಮಾತು ಹೇಳಲು ಪ್ರಯತ್ನಿಸಿ ಸೋತಿದ್ದಾಳೆ. 'ಸೂಳೆಯ ಸಹವಾಸ ಮಾಡಬೇಡ. ಇಟ್ಟುಕೊಂಡವಳು ಇರುವ ತನಕ; ಕಟ್ಟಿಕೊಂಡವಳು ಕೊನೆಯ ತನಕ' ಎಂಬ ಗಾದೆ ಮಾತನ್ನು ನೆನಪಿಸಿದರೂ ಅದು ಪ್ರಯೋಜನವಾಗಿಲ್ಲ. ಹೆಂಡತಿ ಮಾತಿಗೆ ಸೊಪ್ಪು ಹಾಕದೆ ಇದ್ದಾಗ ಸಿಟ್ಟು ತಡೆದುಕೊಳ್ಳಲು ಆಗಿಲ್ಲ. ಆಗ!

ಕಂಚಿನ ಕದಬಿಟ್ಟು
ಹೆಂಚಿನ ಮನೆಬಿಟ್ಟು
ಮಲಗೋ ಮಂಚ ಬಿಟ್ಟು
ಮುತ್ತಿನಂಥ ಮೂರು ಮಕ್ಕಳಬಿಟ್ಟು
ಗತಿಗೆಟ್ಟವಳ ಮನ್ಗೆ
ಮತಿಗೆಟ್ಟು ಹೋಗ್ತಾರೆ ಸಿದ್ದಪ್ಪನೋರು

ಎಂದು ವ್ಯಂಗ್ಯವಾಗಿಯೇ ಹೇಳುತ್ತಾಳೆ. ತನಗಾದ ಅನ್ಯಾಯಕ್ಕೆ ಪ್ರತಿಭಟಿಸಿದ್ದಾಳೆ. ತುಂಬಿದ ಸಭೆಯಲ್ಲಿ ಗಂಡನ ವಕ್ರ ಬುದ್ಧಿಯನ್ನು ತಿಳಿಸಿದ್ದಾಳೆ. ಆಗಲಾದರೂ ಗಂಡ ತನ್ನ ನಡತೆಯನ್ನು ತಿದ್ದಿಕೊಳ್ಳಬಹುದೆಂಬ ಆಸೆ ಅವಳದು.

ಗಂಡ ಹೆಂಡತಿಯರೆಲ್ಲರೂ ಒಂದೇ ರೀತಿ ಇರುವುದಿಲ್ಲ. ಅದರಲ್ಲೂ ಹಳ್ಳಿಗರ ಬದುಕು ವಿಚಿತ್ರವಾದುದು. ದೇವರಲ್ಲಿ ಅಪಾರ ನಂಬಿಕೆ ಇಟ್ಟಿರುವ ಇವರಿಗೆ ಪುಣ್ಯಸ್ಥಳಗಳಿಗೆ, ಗುಡಿಗೋಪುರಗಳಿಗೆ ಹೋಗಿಬರುವುದೆಂದರೆ ಎಲ್ಲಿಲ್ಲದ ಸಂಭ್ರಮ. ಗಂಡನ ಒಡಗೂಡಿ ದೇವಸ್ಥಾನಕ್ಕೆ ಹೋಗಿ ಬಂದ ಗರತಿ ಹೇಳುತ್ತಾಳೆ -

ಮಲ್ಲು ಮಲ್ಲಂಗಿ ಮೈಯಾಗೆ
ಮದ್ರಾಸ್ ಕೋಟು ಕೈಯಾಗೆ
ಮಲ್ಲಮ್ಮನಂಥ ಮಡದಿ ಕರ್ಕೊಂಡು
ಮಲ್ಲಿಕಾರ್ಜುನ ಪೂಜೆಗೆ ಹೋಗ್ತಾರೆ

ಇಲ್ಲಿ ಆದರ್ಶ ದಂಪತಿಗಳ ಚಿತ್ರಣವಿದೆ. ಶಿವನ ಭಕ್ತೆಯಾದ ಈಕೆ ಗಂಡನ ಉಡುಗೆ ತೊಡುಗೆಯನ್ನು ಸೂಚಿಸುತ್ತಾಳೆ. ಪುರಾಣದ ಹೇಮರೆಡ್ಡಿ ಮಲ್ಲಮ್ಮನೊಡನೆ ತನ್ನನ್ನು ಹೋಲಿಸಿಕೊಂಡಿದ್ದಾಳೆ.

ಜನಪದರು ಕೇವಲ ದೈವ ಭಕ್ತರಾಗಿರದೆ ಮಹಾರಸಿಕರೂ ಆಗಿದ್ದರು ಎಂಬುದಕ್ಕೆ ಹೆಣ್ಣೊಬ್ಬಳು ತನ್ನ ಚಂಚಲ ಮನಸ್ಸಿನ ಗಂಡನನ್ನು ಕುರಿತು ಹೇಳುವ ಒಡಪನ್ನು ನೋಡಬಹುದು.

ಅಡಿಕೆ ಹಾಕ್ಕಂಡು ಕಿಟಿಗ್ಯಾಗೆ ನೋಡ್ತಾರೆ
ಲವಂಗ ಹಾಕ್ಕಂಡು ಲೋಲ್ ಮಾಡ್ತಾರೆ
ಹೂವಿನಂಥ ಹುಡ್ಗಿ ಕಂಡರೆ ಹುಬ್ಬು ಹಾರುಸ್ತಾರೆ ಸುಬ್ಬಣ್ಣೋರು-

ಗಂಡ ಎಂತಹವನೆ ಆಗಿದ್ದರೂ ಇವರು ಸಹಿಸುತ್ತಾರೆ. ಗಂಡನ ಕಪಟವನ್ನು ನೋಡಿಯೂ ಹಾಗೆ ಹೇಳಿಕೊಳ್ಳುವುದು ಅವಳ ದೊಡ್ಡಗುಣ. ಹಳ್ಳಿಗರ ಅನುಭವ ಅಪಾರವಾದುದು. ಅಷ್ಟೇ ಮಧುರವಾದುದು. ಏನೇ ಕಷ್ಟ ಬಂದರೂ ಸಹಿಸಿಕೊಂಡು, ಆತ್ಮೀಯರ ಮುಂದೆ ಸಂತೋಷವನ್ನು ಹಂಚಿಕೊಳ್ಳುತ್ತಾರೆ. ಅದು ತಮಾಷೆಯಾಗಿರಬಹುದು, ಅಣಕವಾಗಿರಬಹುದು ಅಥವಾ ವಿಡಂಬನೆಯೂ ಆಗಿರಬಹುದು. ಅಂತಹ ಕೆಲವು ಒಡಪುಗಳನ್ನು ಇಲ್ಲಿ ಗಮನಿಸಬಹುದು-

ಇದ್ಲಿಯಂಥ ಮಕಾ
ಮದ್ಲಿಯಂಥಾ ಹೊಟ್ಟೆ
ಇದ್ದದ್ದು ಉಣ್ಣಂದ್ರೆ ಎದ್ದೆದ್ದು ಹೋಗ್ತಾರೆ ಬಸಣ್ಣ ಮಾವ

ಇಲ್ಲಿ ತನ್ನ ಗಂಡನ ರೂಪವನ್ನು ಹಾಸ್ಯಮಯವಾಗಿ ವರ್ಣಿಸಿದ್ದಾಳೆ. ಇದ್ದಲಿಯಂಥ ಮುಖ ಕಪ್ಪು ಬಣ್ಣ ಅನ್ನುವುದಕ್ಕೆ ಅವರು ಕೊಡುವ ಸಾಂಕೇತಿಕ ವಸ್ತು. ಗುಡಾಣದಂಥ ಹೊಟ್ಟೆಯನ್ನು ಮದ್ದಲಿಗೆಗೆ (ಜನಪದ ವಾದ್ಯ) ಹೋಲಿಸಿದ್ದಾರೆ.

ಕಾಡಿನಲ್ಲಿ ಬೆಳೆದ ಜೋಳವನ್ನು ಕಾಗೆ ಕಚ್ಚಿಕೊಂಡು ಹೋದರೆ ಅದನ್ನು ಅಟ್ಟಿಸಿಕೊಂಡು ಏಳು ಹರಿದಾರಿ ದೂರ ಓಡಿ ಹೋಗುವಂತಹ ಗಂಡನನ್ನು ಹಾಸ್ಯಮಾಡಿರುವಂತಹದ್ದು

ಹರಕು ಅಂಗೇರು
ನೆರಕೆ ಮನೆಯೋರು
ಕರಿಕೆ ಹೊಲ್ದೋರು
ಕರಿಕೆ ಹೊಲಕ್ಕೆ ದರ್ಖಾಸು ಕೊಡ್ತಾರೆ ಈರಣ್ಣ ಗೌಡರು

ಇಕ್ಕೊಳ್ಳೋದು ಹರಿದ ಅಂಗಿ, ವಾಸ ಮಾಡೋದು ನೆರಕೆ ಮನೆ, ಬೆಳಿಯೋದು ಗರಿಕೆ ಹೊಲ. ಅಂತಾದ್ರಲ್ಲಿ ಸರ್ಕಾರಕ್ಕೆ ದರ್ಖಾಸು ಕೊಡ್ತೀನಿ ಎಂದು ಬೂಟಾಟಿಕೆ ಮಾತನಾಡುವ ಗಂಡನನ್ನು ಹಂಗಿಸಿದ್ದಾಳೆ (ವಿ. ಎನ್. ಶಿವರಾಮು. ದ. ಕ. ಒಡಪುಗಳು)

ಕೊರ್ಲೆ ಅನ್ನ ಕೊಕ್ಕಿನ ಸಾರು
ಇಕ್ಕಾಕೆ ಹೋದ್ರೆ ಕುಕ್ಕಾಕೆ ಬರ್ತಾರೆ

ಇದು ಗಂಡ-ಹೆಂಡಿರ ನಡುವೆ ಇರುವ ಸಾಮರಸ್ಯವನ್ನು ತಿಳಿಸುವುದರ ಜೊತೆಗೆ ಗಂಡನ ಸ್ವಭಾವವನ್ನೂ ಹಠಮಾರಿತನವನ್ನೂ ಹಾಗೂ ಜನಪದರ ಊಟದ ಪರಿಚಯವನ್ನು ತಿಳಿಸುತ್ತಾ ತಮ್ಮ ಬದುಕನ್ನು ಎಷ್ಟು ಸರಳವಾಗಿ ಕಂಡುಕೊಂಡಿದ್ದರು ಎನ್ನುವ ವಿಚಾರ ಸ್ಪಷ್ಟವಾಗುತ್ತದೆ.

ಗಂಡುಮಕ್ಕಳ ಒಡಪುಗಳು

ಮದುವೆಯಲ್ಲಿ ಮದುಮಕ್ಕಳಿಗೆ ಸೇಸೆ ಇಕ್ಕುವ ಕಾರ್ಯ ಹೆಣ್ಣುಮಕ್ಕಳಿಂದ ಮುಗಿಯುತ್ತದೆ. ಆ ಮೇಲೆ ಗಂಡುಮಕ್ಕಳು ಸೇಸೆ ಇಕ್ಕಬೇಕು. ಇದು ಸಂಪ್ರದಾಯ ಕೂಡ. ಹೆಣ್ಣು ಗಂಡಿಗೆ ಆರತಿ ಬೆಳಗುತ್ತಿದ್ದಂತೆ 'ಮಾವ ಅಕ್ಕನ ಹೆಸರು ಹೇಳು' ಎಂಬ ದನಿ ಕೇಳುತ್ತದೆ. ನನಗೆ ಬರುವುದಿಲ್ಲ ಎಂದರೂ ಆಕೆ ಬಿಡುವುದಿಲ್ಲ. ಅವನು ಮುಂದಕ್ಕೆ ಹೋಗದಂತೆ ಅಡ್ಡನಿಂತು ಅವನ ಅಂಗಿಯನ್ನು ಹಿಡಿಯುತ್ತಾಳೆ. ಆಗ ಅವನು ಒಡಪನ್ನು ಹೇಳಲೇಬೇಕಾಗುತ್ತದೆ.-

ಹಕ್ಕೇಗಳ ಸಗಣಿ
ಗೂಡೆಮ್ಯಾಗಳ ತಗಣಿ
ತಿಕ್ಕಿ ನೋಡಂದ್ರ ನೆಕ್ಕಿ ನೋಡ್ತಳೆ ನಿಂಗಿ

ಎಂದು ಹೇಳಿ ಎಲ್ಲರನ್ನೂ ನಗಿಸುತ್ತಾನೆ. ಜನ ಅಷ್ಟಕ್ಕೇ ಬಿಡದೆ ಮತ್ತೊಂದು ಹೇಳು ಎಂದಾಗ ಜನರ ಅಭಿರುಚಿಗನುಗುಣವಾಗಿ ಮತ್ತೊಮ್ಮೆ ಹಾಸ್ಯ ಚಟಾಕಿಯನ್ನು ಹಾರಿಸಿ ತಮಾಷೆಯ ಜೊತೆ ಸೇಡನ್ನು ತೀರಿಸಿಕೊಳ್ಳಲು ಇದೇ ಸಮಯ ಎಂದು ಹೇಳುತ್ತಾನೆ.

ಗುಂಗುರು ಕೂದ್ಲಿನೋಳು ಮಂಗ್ನ ಬುದ್ಧಿಯೋಳು
ಅಂಗೃದಾಗಿನ ಕಸ ಬಂಗಾರ್ದಂಗೆ ಹೊಡಿಯೋಳು ಮಂಜಿ

ಎಂದು ಹೇಳಿ ಇದಕ್ಕೂ ಮೊದಲು ಈತನ ಹೆಂಡತಿ 'ಇದ್ಲಯಂಥ ಮಕಾ ಮದ್ದಲಿಯಂಥಾ ಹೊಟ್ಟೆ' ಎಂಬುದಾಗಿ ಸಭೆಯಲ್ಲಿ ಮಾನ ಕಳೆದಿರುತ್ತಾಳೆ. ಅದರ ಸೇಡನ್ನು ಇವನ್ನು ಗುಂಗುರು ಕೂದಲು, ಮಂಗನ ಬುದ್ಧಿ ಇತ್ಯಾದಿ ಪದಗಳನ್ನು ಉಪಯೋಗಿಸಿ ಹೆಂಡತಿಯನ್ನು ಪರಿಚಯಿಸುತ್ತಾನೆ. ಹಳ್ಳಿಯ ಜನ ತಾವು ನಕ್ಕು ಇತರರನ್ನು ನಗಿಸುವ ಉದ್ದೇಶದಿಂದ ಈ ರೀತಿ ಒಡಪುಗಳನ್ನು ಕಟ್ಟಿ ಹೆಸರೇಳುತ್ತಿದ್ದರು. ಇನ್ನೊಬ್ಬನ ಒಡಪನ್ನು ಕೇಳಿದ ಜನರ ನಗು ಗಗನಕ್ಕೆ ಮುಟ್ಟುತ್ತದೆ.

ಹಗ್ಗದಲ್ಲಿ ಹೊಡಿದ್ರೆ
ಮಗ್ಗುಲಿಗೆ ಬರ್ತಳೆ - ನಂಜಿ -
ಹಂಡೆದಾಗ ಕುಂತುಕೊಂಡು
ಮಂಡಕ್ಕಿ ಬುಕ್ಕುತಾಳೆ - ರಾಜಿ -

ಗಂಡು ಮಕ್ಕಳ ಎಲ್ಲಾ ಒಡಪುಗಳು ಒರಟಾಗಿರುವುದಿಲ್ಲ. ತನ್ನಲ್ಲಿ ನಂಬಿಕೆ ಇಟ್ಟಿರುವವಳನ್ನು ಸಮಾನವಾಗಿ ಕಂಡು ಗೌರವಿಸುತ್ತಾನೆ.

ಜಾಲಿಮರ ಜೋಲಿ ಹೊಡಿ. ಮುತ್ತಿನ ತಡಿ ಮುಂದ್ಕೆ ನಡಿ
ಭಗವಂತಪ್ಪನ ಮಗಳು ಬರ್‍ತಾಳೆ ದಾರಿ ಬಿಡ್ರಿ

ಎಂದು ಹೇಳಿ ಹೆಣ್ಣಿನ ಬಗ್ಗೆ ಗೌರವವನ್ನು ತೋರಿಸಿದ್ದಾನೆ.

ಮದುಮಕ್ಕಳ ಒಡಪುಗಳು

ಮುತ್ತೈದೆಯರು ಸೇಸೆ ಇಕ್ಕುವ ಕಾರ್ಯ ಮುಗಿದ ಮೇಲೆ ಮದುಮಕ್ಕಳು ಪರಸ್ಪರ ತಮಗೆ ತಾವೇ ಒಬ್ಬರಿಗೊಬ್ಬರು ಸೇಸೆ ಇಕ್ಕಬೇಕು. ಮೊದಲಿಗೆ ಹೆಣ್ಣು ಗಂಡಿಗೆ ಸೇಸೆ ಇಕ್ಕಬೇಕು. ಇದಕ್ಕಾಗಿ ಅವಳು ಮೇಲೆದ್ದಾಗ ಗಂಡು ಅವಳ ಜಾಗದಲ್ಲಿ ಕೂರುತ್ತಾನೆ. ಶಾಸ್ತ್ರವೆಲ್ಲ ಮುಗಿದ ಮೇಲೆ ತನ್ನ ಜಾಗ ಬಿಟ್ಟು ಕೊಡುವಂತೆ ಅವಳು ಕೇಳಬೇಕು. ಇಲ್ಲದಿದ್ದರೆ ಅವನು ಜಾಗ ಬಿಡುವುದಿಲ್ಲ. ಹಾಗಂತ ಅವನ ಜಾಗದಲ್ಲಿ ಇವಳು ಕೂರುವಂತೆಯೂ ಇಲ್ಲ. ಅವಾಗ

ಮಾವನ ಮಗನೆ ಮಲ್ಲಿಗೆ ಹರಳೆ
ನನ್ನ ಬೆಳ್ಳಿ ಸದರ ಬಿಟ್ಟು
ನಿಮ್ಮ ಚಿನ್ನದ ಸದರಕ್ಕೆ ಹೋಗಿ.........

ಎಂದು ತನ್ನ ಪತಿಯ ಹೆಸರು ಸೇರಿಸಿ ಹೇಳುತ್ತಾಳೆ. ಗಂಡು ತನ್ನ ಜಾಗಕ್ಕೆ ಹೋಗಿ ಕೂರುತ್ತಾನೆ. ಹೆಣ್ಣು ಇನ್ನೇನು ತನ್ನ ಜಾಗದಲ್ಲಿ ಕೂರಬೇಕೆಂದಾಗ ಗಂಡಿನ ಕಡೆಯವರು ಹೆಸರೇಳು ಎಂದು ಬಿಡದೆ ಅವಳ ಸೆರಗನ್ನು ಹಿಡಿಯುತ್ತಾರೆ. ವಿಧಿಯಿಲ್ಲದೆ ಆಕೆ ಹೇಳುತ್ತಾಳೆ :

ಕೆರೆಯಾಗ ಸುರಹೊನ್ನೆ ಮರ
ಸರ್ವರು ಸೆರಗಿಡಿದು ಕೇಳ್ವಾಗ
ನಾನ್ಹೇಗೆ ಹೇಳಲಿ ನಮ್ಮ ರಾಯರ ಹೆಸರು
ನಮ್ಮತ್ತೆ ಹಡುದಾರೆ ಮುತ್ತಿನಂತಹ ಪುತ್ರ ಶೀನಪ್ಪ ಮಾವನ್ನ

ಎನ್ನುತ್ತಾಳೆ. ಇಷ್ಟು ಹೇಳುವ ಹೊತ್ತಿಗೆ ಹೆಣ್ಣು ಬೆವತು ಹೋಗಿರುತ್ತಾಳೆ. ಹೀಗೆ ಸೇಸೆ ಇಕ್ಕಿ ಆರತಿ ಬೆಳಗುವ ಕೆಲಸ ಗಂಡಿನದು. ಹೆಣ್ಣು ಆಗ ಅವನ ಜಾಗದಲ್ಲಿ ಕೂರುತ್ತಾಳೆ. ಆಗ ಅವನು

ಅತ್ತೆ ಮಗಳೆ ಮುತ್ತಿನ ಚಂಡೆ
ಮಾವನ ಮಗಳ ಮಲ್ಲಿಗೆ ಹರಳೆ
ನನ್ನ ಚಿನ್ನದ ಸದರ ಬಿಟ್ಟು
ನಿನ್ನ ಬೆಳ್ಳಿ ಸದರಕ್ಕೆ ಹೋಗೆ...........

ಎಂದು ತನ್ನ ಹೆಂಡತಿಯ ಹೆಸರು ಸೇರಿಸಿ ಹೇಳುತ್ತಾನೆ. ಹೆಣ್ಣು ತನ್ನ ಜಾಗಕ್ಕೆ ಹೋಗಿ ಕೂರುತ್ತಾಳೆ ಆಗ ಗಂಡು ತನ್ನ ಜಾಗದಲ್ಲಿ ಕೂರಬೇಕೆನ್ನುವಾಗ ಹೆಣ್ಣಿನ ಕಡೆಯುವರು ನಿನ್ನ ಹೆಂಡತಿ ಹೆಸರೇನು ಎಂದು ಪೀಡಿಸುತ್ತಾರೆ. ಹೊಸದಾಗಿ ಹೆಣ್ಣಿನ ಕೈ ಹಿಡಿದಿದ್ದಾನೆ ಏನು ಹೇಳಬೇಕೆಂದು ತಿಳಿತಾ ಇಲ್ಲ. ಆದರೂ ಮೈಚಳಿ ಬಿಟ್ಟು ಸಿಂಗರಿಸಿದ ಹೆಣ್ಣನ್ನು ನೋಡಿ ಒಂದು ಒಡಪನು ಹೇಳುತ್ತಾನೆ.

ಸಂಪಿಗೆ ಹೂ ಮುಡಿಕಂಡು
ಕೆಂಪು ಬಣ್ಣ ಹಾಕ್ಕೊಂಡು
ಮಿಂಚಿನಂಗೆ ಕುಂತುವಳೆ ಗೌರಿ

ಎಂದು ಹೆಸುರು ಹೇಳಿ ತನ್ನ ಜಾಗದಲ್ಲಿ ಕುಳಿತುಕೊಳ್ಳುತ್ತಾನೆ. ರೇಷ್ಮೆ ಸೀರೆಯುಟ್ಟು. ರೇಷ್ಮೆ ಕುಬಸ ತೊಟ್ಟು, ಬಣ್ಣಬಣ್ಣದ ಬಳೆ ಹಾಕಿಕೊಂಡ ಮದುಮಗಳು ಗಂಡಿನ ಕಣ್ಣಿಗೆ ಕಾಣಿಸಿದ್ದು ಮಿಂಚಿನಂಗೆ.

ಮದುವೆಯಾದ ರಾತ್ರಿ ಗಂಡು ಹೆಣ್ಣನ್ನು ಊರಿನಲ್ಲಿ ಮೆರವಣಿಗೆ ಮಾಡುತ್ತಾರೆ. ಮೆರವಣಿಗೆಯಲ್ಲಿ ಕೆಲವರು ಗಂಡನ್ನು ಅಡ್ಡ ಹಾಕಿ ನಿನ್ನ ಹೆಂಡತಿ ಹೆಸರನ್ನು 'ಮುತ್ತು ಕೊಟ್ಟು ಹೇಳು' ಎಂದೂ ಪೀಡಿಸುತ್ತಾರೆ. ಚುರುಕು ಬುದ್ಧಿಯ ಗಂಡು ಹೆಣ್ಣಿನ ಕೊರಳ ಹಾರದಿಂದ ಹೂವೊಂದನ್ನು ಕಿತ್ತುಕೊಂಡು ಅದಕ್ಕೆ ಮುತ್ತಿಟ್ಟು ಹೆಸರೇಳಿ ಮುಂದಕ್ಕೆ ಹೋಗುತ್ತಾನೆ.

ಮದುವೆಯಾದ ಮರುದಿನ ಹೆಣ್ಣಿನಿಂದ ನೀರು ತರಿಸುವ ಸಂಪ್ರದಾಯವಿದೆ. ಊರ ಮುಂದಿನ ಬಾವಿಗೆ ಕರೆದುಕೊಂಡು ಹೋಗುತ್ತಾರೆ. ಕೊಡದಲ್ಲಿ ನೀರು ತುಂಬಿಸಿ, ಪೂಜಿಸಿ. ಮೆರವಣಿಗೆಯಲ್ಲಿ ಮನೆಗೆ ಕರೆತರುತ್ತಾರೆ. ಆಗ ಗಂಡು ಹೊಸ್ತಿಲ ಬಳಿ ಇದ್ದು ಹೆಣ್ಣು ಹೊತ್ತ ಕೊಡವನ್ನು ಪೂಜಿಸಿ ಇಳಿಸಿಕೊಳ್ಳಬೇಕು. ಕೊಡ ಇಳಿಸುವ ಮೊದಲು ಹೆಸರು ಕೇಳುತ್ತಾನೆ. ಬಾಗಿಲ ಬಳಿ ನೆರೆದಿದ್ದ ಜನರ ಆಸೆಯೂ ಅದೇ ಆಗಿರುತ್ತದೆ. ಆಗ ಮದುಮಗಳು-

ಅರಗಿನ ಕೊಡ ಸೆರಗಿನ ಸಿಂಬಿ
ಶೀಲವಂತರ ಮಗ್ಳು ಸೀತಾದೇವಿ ಬರ್‍ತಾಳಂತ
ಮಾರಿ ನೋಡಿ ದಾರಿ ಬಿಡ್ತಾರೆ-ಎಂದು ಹೆಸರೇಳಿ ಒಳ ಹೋಗುತ್ತಾಳೆ

ಶೀಲವಂತರ ಮಗಳು, ಸೀತೆಯಂತಹ ಸುಗಣಿ ಕೊಡಹೊತ್ತು ಬರುವಾಗ ಮುಖನೋಡಿ ತಂತಾನೆ ದಾರಿ ಬಿಟ್ಟು ಸರಿಯುತ್ತಾನೆ. ಹೆಣ್ಣು ಮಕ್ಕಳಿಗೆ ದಾರಿ ಬಿಟ್ಟು ಕೊಡುವುದು ಅವರ ವ್ಯಕ್ತಿತ್ವಕ್ಕೆ ತೋರಿಸುವ ಗೌರವ 'ಮಾರಿನೋಡಿ ದಾರಿ ಬಿಡತಾರ' ಎಂಬುದು ಹೆಚ್ಚು ಅರ್ಥಪೂರ್ಣವಾಗಿದೆ. (ಕನ್ನಡ ಒಗಟುಗಳು, ಲೀಲಾವತಿ ತೋರಣಗಟ್ಟಿ)

ತೊಟ್ಟಿಲು ಶಾಸ್ತ್ರದಲ್ಲಿ ಒಡಪುಗಳು

ಜನಪದರಿಗೆ ಹೆಸರು ಹೇಳುವ ಮತ್ತೊಂದು ಸಂದರ್ಭವೆಂದರೆ ಮಗುವಿನ ನಾಮಕರಣದಂದು. ಮಗುವಿಗೆ ಸಿಂಗರಿಸಿ ಆರತಿ ಬೆಳಗಿ. ಹೆಸರು ಇಟ್ಟ ಶಾಸ್ತ್ರವಾದ ಮೇಲೆ ಹೆಸರು ಕೇಳುವುದು, ಹೇಳುವುದು ಶುರುವಾಗುತ್ತದೆ. ಮೊದಲು ಮಗುವಿನ ತಾಯಿಂದಲೇ ಪ್ರಾರಂಭವಾಗುತ್ತದೆ.

ಕಂಚಿನಕಪ್ಪು ಕಮಲದ ಹೂವು
ಮಂಚದ ಮೇಲೆ ಕೂತ್ಗಂಡು
ಮಗನ್ನ ಆಡುಸ್ತಾರೆ ಮಂಜಣ್ಣಗೌಡ್ರು

ಎಂದು ತನ್ನ ಗಂಡನ ಹೆಸರನ್ನು ಯಾವುದೇ ಸಂಕೋಚವಿಲ್ಲದೆ ಹೇಳುತ್ತಾಳೆ. ಈಗಾಗಲೆ ಅವಳು ಸಂಸಾರದಲ್ಲಿ ಪಳಗಿದವಳಾಗಿದ್ದಾಳೆ, ಮಗುವನ್ನು ಹೆತ್ತು ತಾಯಿ ಆಗಿದ್ದಾಳೆ. ಹಾಗೆ ಆಕೆ ಹೇಳುವ ಒಡಪು-ಅರ್ಥಪೂರ್ಣವಾಗಿದೆ. ಮಗವನ್ನು ಬೆಳಸುವುದು. ಆರೈಕೆ ಮಾಡುವುದು ಇಬ್ಬರ ಕೆಲಸವೆಂದು ಗಮನಿಸಿದ್ದಾಳೆ.

ಇವೇ ಅಲ್ಲದೆ ಮತ್ತಿತರ ಕಾರ್ಯಕ್ರಮದಲ್ಲೂ ಕೆಲವು ಒಡಪುಗಳನ್ನು ಗುರುತಿಸಬಹುದು. ಈ ಒಡಪುಗಳಲ್ಲಿ ತನ್ನ ಗಂಡನನ್ನು ಹೊಗಳುವಂತಹ ಲೇವಡಿ ಮಾಡುವಂತಹ. ಗೌರವಿಸುವಂತಹ ನೀತಿಯನ್ನು ಹೇಳುವಂತಹ, ಎಚ್ಚರಿಕೆ ನೀಡುವಂತಹ ಒಡಪುಗಳನ್ನು ನೋಡಬಹುದು. ಅಂತಹ ಒಂದು ಒಡಪನ್ನು ಗರತಿಯೊಬ್ಬಳು ಹೀಗೆ ಹೇಳುತ್ತಾಳೆ :

ದೊಡ್ಡಕ್ಕಿ ಉಣ್ಣರಲ್ಲ, ಸಣ್ಣಕ್ಕಿ ತರರಲ್ಲ
ಮನೆಯಾಗ ಇರರಲ್ಲ ಮಾತು ಕೇಳರಲ್ಲ
ಹರಗಕ್ಹೋಗು ಅಂದ್ರ ತಿರುಗಾಕೆ ಹೊಗ್ತರೆ ಮಾರಣ್ಣೋರು-

ಎಂದು ಗಂಡನ್ನು ತಮಾಷೆ ಮಾಡುವುದಲ್ಲದೆ, ಎಚ್ಚರಿಸಿಯೂ ಇದ್ದಾಳೆ ಹಾಗೆಯೇ ಪುರುಷನು ಸಹ ತನ್ನ ಹೆಂಡತಿಯನ್ನು ಹೊಗಳುವಂತಹ ತಮಾಷೆ ಮಾಡುವಂತಹ, ಗೌರವಿಸುವಂತಹ ಒಡಪುಗಳನ್ನು ಕಟ್ಟಿ ಹೇಳುವುದು ರೂಢಿಯಲ್ಲಿದೆ.

ಇಂಗ್ಲಿಷ್ ಭಾಷೆಯ ಪರಿಚಯವಿರುವ ಆಧುನಿಕ ಮಹಿಳೆ ಕಟ್ಟಿರುವ ಒಡಪಿನ ಬಗೆಯನ್ನು ಗಮನಿಸಬಹುದು.

೧ ಇಂಗ್ಲಿಷಿನಲ್ಲಿ ಕೋಳಿಗೆ ಅನ್ನುವರು ಹೆನ್
ನಮ್ಮ ರಾಯರಿಗೆ .... ಕೊಡುವೆನು ಪೆನ್

೨. ಇಂಗ್ಲಿಷಿನಲ್ಲಿ ನೀರಿಗೆ ಅನ್ನುವರು ವಾಟರ್
ನಮ್ಮ ರಾಯರ ಹೆಸರು ಹೇಳುವೆನು ಪ್ರಸಾದ್ ಅವರ ಡಾಟರ್

೩. ತ್ರೀ X ತ್ರೀ = ನೈನ್
ಮೈ ಹಸ್ಬೆಂಡ್ ಈಸ್ ವೆರಿ ಫೈನ್

ಹೀಗೆ ಒಡಪುಗಳನ್ನು ವ್ಯಾಪಿಸದ ವಿಷಯಗಳೇ ಕಡಿಮೆ. ಹೆಸರು ಹೇಳುವುದು ಕೇಳುವುದು ಇಂದಿಗೂ ಮನರಂಜನೆಯ ಸನ್ನಿವೇಶವಾಗಿ ಮುಂದುವರೆಯುತ್ತಿದೆ. ಜಾನಪದವು ಸಾವನ್ನು ನಿರಾಕರಿಸುವ ಜೀವಂತ ಪಳೆಯುಳಿಕೆ. ಅದು ನಿರಂತರವಾಗಿ ಹುಟ್ಟು ಮರುಹುಟ್ಟುಗಳನ್ನು ಪಡೆಯುತ್ತಾ ಹೋಗುತ್ತದೆ ಎಂಬ ಮಾತನ್ನು ಒಡಪುಗಳು ಸಾಬೀತುಪಡಿಸಿದೆ.

ಒಡಪು ಎಂದ ಕೂಡಲೇ ಒಗಟು ನೆನಪಿಗೆ ಬರುತ್ತದೆ. ಒಗಟು ಮತ್ತು ಒಡಪು ಒಂದೇ ಎಂದು ಕೆಲವರು ಭಾವಿಸುತ್ತಾರೆ. ಒಡಪು ಮತ್ತು ಒಗಟುಗಳ ನಡುವಿನ ಅರ್ಥ ಗೊಂದಲಕ್ಕೀಡಾದಂತಿದೆ. ಕಿಟ್ಟೆಲ್ ಅವರು ತಮ್ಮ ಕನ್ನಡ-ಇಂಗ್ಲಿಷ್ ನಿಘಂಟುವಿನಲ್ಲಿ ಒಗಟು ಮತ್ತು ಒಡಪುಗಳು ಪರ್ಯಾಯ ಪದಗಳೆಂದು ಭಾವಿಸಿದ್ದಾರೆ. "ಶ್ರೀ ಶಂ.ಬಾ. ಜೋಷಿಯವರಂತೂ ತಮ್ಮ ಒಗಟುಗಳ (Riddles) ಸಂಗ್ರಹಕ್ಕೆ 'ಮಕ್ಕಳ ಒಡಪು' ಎಂದು ಹೆಸರನ್ನೇ ಇಟ್ಟಿದ್ದಾರೆ. ಒಡಪು ಎಂಬ ಜನಪದ ಸಾಹಿತ್ಯ ಪ್ರಕಾರವೂ ಒಂದಿದೆಯೆಂಬ ಅಂಶ ಬೆಳಕಿಗೆ ಬಂದಿರುವುದೇ ಇದಕ್ಕೆಲ್ಲ ಕಾರಣವಾಗಿರಬಹುದು" ಎಂದು ಜ್ಯೋತಿ ಹೊಸೂರರು ಅಭಿಪ್ರಾಯಪಟ್ಟಿದ್ದಾರೆ.

ಒಗಟುಗಳಲ್ಲಿ ಸಮಸ್ಯೆ ಇರುತ್ತದೆ. ಎರಡು ಗುಂಪು ಅಥವಾ ಇಬ್ಬರು ವ್ಯಕ್ತಿಗಳ ನಡುವೆ ಸ್ಪರ್ಧಾತ್ಮಕವಾಗಿ ಒಗಟು ಹೇಳುವುದು, ಒಡೆಯುವುದು ಅಂದರೆ ಉತ್ತರಿಸುವುದೂ ನಡೆಯುತ್ತದೆ. ಇದು ಒಗಟುಗಳ ಲಕ್ಷಣ ಎದುರಾಳಿ ಒಗಟನ್ನು ಬಿಡಿಸಬೇಕು. ಇಲ್ಲದಿದ್ದರೆ ಒಗಟು ಹೇಳಿದವರೇ ಅದಕ್ಕೆ ಉತ್ತರ ಹೇಳಿ, ಎದುರಾಳಿಯನ್ನು ಸೋಲಿಸುತ್ತಾರೆ ಇದನ್ನೇ ಒಗಟು, ಒಡಗತೆ, ಒಡಸೌಕತೆ ಅಥವಾ ಒಡಚುವ ಕಥೆ ಎಂದು ಕರೆಯುವರು.

ಉದಾಹರಣೆಗೆ ಕೆಲವನ್ನು ಗಮನಿಸಬಹುದು :

೧ 'ದುಡ್ಡುಕೊಟ್ಟು ತರೂದು, ಮುಂದ ಕುಂತು ಅಳೂದು' - ಉತ್ತರ 'ಈರುಳ್ಳಿ'

ನಾಟಕ, ಸಿನಿಮಾಗಳಲ್ಲಿ ಪಾತ್ರಮಾಡುವಾಗ ಕೃತಕ ಅಳುವನ್ನು ತರಲು ದುಡ್ಡು ಕೊಟ್ಟು ತಂದ ಗ್ಲಿಸರಿನ್ ಎಂಬ ರಾಸಾಯನಿಕ ಬಳಕೆ ಮಾಡುತ್ತಾರೆ. ಆದರೆ ಅಡುಗೆ ಮನೆಯಲ್ಲಿ ಈರುಳ್ಳಿಯನ್ನು ಕೊಯ್ಯುವ ಹೆಂಗಸರ ಕಣ್ಣಲ್ಲಿ ನೀರು ಸುರಿಯುತ್ತದೆ.

೨. 'ಅಯ್ಯಯ್ಯೊ ಜೋಗಿ, ಮೈಯೆಲ್ಲಾ ಬೂದಿ,
ಕೈಯಾಗ ಕೊಪ್ಪರಗಿ, ಕೊರಳಾಗ ರುದ್ರಾಕ್ಷಿ' - ಉತ್ತರ - 'ಔಡಲ'

ಈ ಒಗಟಿನಲ್ಲಿ ಒಬ್ಬ ಸಾಧುವಿನ ಲಕ್ಷಣಗಳೇ ಬಂದಿವೆ. ಜೋಗಿಯ ಲಕ್ಷಣಗಳನ್ನು ಹೊಂದಿದ ಬೇರೆ ವಸ್ತುವನ್ನು ಒಗಟು ಪ್ರತಿನಿಧಿಸುತ್ತದೆಯೆಂದು ತಿಳಿದು ಬರುತ್ತದೆ. ಔಡಲ ಗಿಡದ ಕಾಂಡದ ಮೇಲೆಲ್ಲಾ ಬೂದು ಬಣ್ಣದ ಹೊದಿಕೆ ಇರುತ್ತದೆ. ಅದರ ಹರವಾದ ಎಲೆಗಳು ಸನ್ಯಾಸಿಯ ಕೊಪ್ಪರಿಗೆಯನ್ನು ಹೋಲುತ್ತವೆ. ಔಡಲ ಕಾಯಿಗಳು ರುದ್ರಕ್ಷಿಯ ತದ್ರೂಪಗಳು. ಸರ್ವಲಕ್ಷಣಗಳುಳ್ಳ ಔಡಲ ಸಸ್ಯ ಪ್ರಕೃತಿದತ್ತ-ಜೋಗಿ

೩. 'ಗೂಡಲ್ಲಿ ಕುಂತು ನಾಡೆಲ್ಲ ನೋಡ್ತದೆ - ಉತ್ತರ 'ಕಣ್ಣು'
೪. 'ಚಿಕ್ಕ ಮನೆಗೆ ಚೆಕ್ಕೆ ತುಂಬಿದೆ - ಉತ್ತರ 'ಬಾಯಿ ಮತ್ತು ಹಲ್ಲು'

ಬಾಯಿಯನ್ನು ಒಂದು ಚಿಕ್ಕ ಮನೆಗೆ ಹೋಲಿಸಿ ಹಲ್ಲುಗಳನ್ನು ಚೆಕ್ಕೆಗೆ ಹೋಲಿಸಿರುವುದನ್ನು ಕಾಣಬಹುದು, ಹೀಗೆ ಅರ್ಥವನ್ನು ಗುಟ್ಟಿನಲ್ಲಿಟ್ಟಿರುವುದು ಒಗಟಿನ ಲಕ್ಷಣವಾದರೆ ಒಡಪಿನಲ್ಲಿ ಯಾವ ಅರ್ಥವೂ ಗುಟ್ಟಿನಲ್ಲಿರುವುದಿಲ್ಲ, ಅದರ ಬದಲಾಗಿ ದೈನಂದಿನ ಬದುಕಿನ ವಿವರಗಳಿರುತ್ತವೆ. ಸಾಧ್ಯವಿಲ್ಲದ್ದನ್ನು ಬರೀ ಮಾತುಗಳಲ್ಲಿ ಸಾಧ್ಯಮಾಡಿಕೊಟ್ಟವರು ಕನಸಿನಲ್ಲಿ ಕಂಡು ತೃಪ್ತಿ ಹೊಂದಿರುವುದು ಜನಪದರ ಜೀವನದ ಕ್ರಮವಾಗಿದೆ. ಇತ್ತೀಚೆಗೆ ಕಲಿತವರ ಸಹವಾಸದಿಂದ ಒಡಪುಗಳು ಕೃತಕತೆ ಪಡೆಯುತ್ತಿವೆ. ರೇಡಿಯೋ, ಚಲನಚಿತ್ರ, ದೂರದರ್ಶನಗಳ ಪ್ರಭಾವದಿಂದ ಗ್ರಾಮೀಣ ಮಂದಿ ಒಡಪುಗಳನ್ನು ಕಡೆಗಣಿಸಿದ್ದಾರೆ. ಆಕರ್ಷಕವಿಲ್ಲದ ಒಡಪುಗಳನ್ನು ಹುಟ್ಟುಹಾಕಿದ್ದಾರೆ. ಆದರೆ ಈ ರೀತಿ ಮಾಡದೆ ಮೂಲಒಡಪುಗಳನ್ನು ನಮ್ಮೊಟ್ಟಿಗೆ ಉಳಿಸಿಕೊಳ್ಳುವ ಪ್ರಯತ್ನ ಮಾಡಬೇಕು.

ಪರಾಮರ್ಶನ ಗ್ರಂಥಗಳು

೦೧. ಜಂಬುನಾಥ ಕಂಚ್ಯಾಣಿ(ಸಂ) : 'ಹಸರ ಗಿಡದ ಮೇಲೆ ಮಸರ ಚೆಲ್ಲೇದ' ಜನಪದ ಒಗಟುಗಳ ಸಂಗ್ರಹ ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು ೧೯೮೧

೦೨. ಜವರೇಗೌಡ ದೇ : ಜಾನಪದ ಅಧ್ಯಯನ ಡಿ.ವಿ.ಕೆ ಮೂರ್ತಿ, ಕೃಷ್ಣಮೂರ್ತಿಪುರಂ ಮೈಸೂರು ೧೯೭೬

೦೩. ನಾಯಕ ಹಾ ಮಾ : 'ಜಾನಪದ ಸ್ವರೂಪ'
ತಳುಕಿನವೆಂಕಣ್ಣಯ್ಯ ಸ್ಮಾರಕ
ಗ್ರಂಥಮಾಲೆ. ಗೋಕುಲಂ ೩ನೇ
ಹಂತ, ಮೈಸೂರು-೨
೮ನೇ ಮುದ್ರಣ ೧೯೯೬

೦೪. ಪರಮಶಿವಯ್ಯ ಜೀ ಶಂ : 'ಜಾನಪದ' ಚೇತನ ಬುಕ್ ಹೌಸ್
ನಾರಾಯಣಶಾಸ್ತ್ರೀ ರಸ್ತೆ,
ಮೈಸೂರು ೧೯೮೯

೦೫. ರೇವಣ್ಣ ಮೈಲಹಳ್ಳಿ : 'ನಮ್ಮ ಒಡಪುಗಳು'
(ರಾಜ್ಯಸಂಪನ್ಮೂಲ ಕೇಂದ್ರ)
ಕರ್ನಾಟಕ ರಾಜ್ಯ ವಯಸ್ಕರ
ಶಿಕ್ಷಣ ಸಮಿತಿ
ಮಾನಸಗಂಗೋತ್ರಿ
ಮೈಸೂರು ೧೯೮೯

೦೬. ಲೀಲಾವತಿ ತೋರಣಗಟ್ಟಿ : 'ಕನ್ನಡ ಒಡಪುಗಳು'
ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು ೧೯೭೯

೦೭. ಶಿವರಾಮು ವಿ ಎನ್ (ಸಂ) : 'ದಕ್ಷಿಣ ಕರ್ನಾಟಕ ಒಡಪುಗಳು'
ಕರ್ನಾಟಕ ಜಾನಪದ ಮತ್ತು
ಯಕ್ಷಗಾನ ಅಕಾಡೆಮಿ,
ನೃಪತುಂಗ ರಸ್ತೆ,
ಬೆಂಗಳೂರು ೧೯೯೩

ಗುರುಭಜನೆ

ಆ.ನಂ. ಕೋಕಿಲ

ಗುರುಬ್ರಹ್ಮ, ಗುರುವಿಷ್ಣು, ಗುರುದೇವೋ ಮಹೇಶ್ವರಃ
ಗುರು ಸಾಕ್ಷಾತ್ ಪರಬ್ರಹ್ಮ.....

ಇಲ್ಲೆಲ್ಲಾ 'ಗುರು'ವಿನ ಮಹಿಮೆ ಎಷ್ಟು ವಿಶಾಲವಾದುದೆಂದು ಅರ್ಥವಾಗದಿರದು ಗುರುವನ್ನು ದೇವರ ಮಟ್ಟಕ್ಕೆ ಹೋಲಿಸುವ ಮೂಲಕ ಅಗೋಚರವಾಗಿರುವ ದೇವನನ್ನು ಗೋಚರ ರೂಪದಲ್ಲಿರುವ ಗುರುವಿನಲ್ಲಿ ಕಾಣುತ್ತೇವೆ. ಹಾಗಾದರೆ ಈ ಗುರು ಯಾರು? ಹೇಗಿರಬೇಕು? ಆತನ ಸ್ಥಾನ ಏನು ಎಂಬೆಲ್ಲಾ ಪ್ರಶ್ನೆಗಳು ಮೂಡುತ್ತವೆ.

ಸಾಮಾನ್ಯವಾಗಿ ನಾವು ವಿದ್ಯೆ ಕಲಿಸುವಾತನನ್ನು 'ಗುರು' ಎಂದು ನಂಬಿದ್ದೇವೆ. ಹಿಂದೆ ಗುರುಕುಲದಲ್ಲಿ ವಿದ್ಯಾರ್ಜನೆಗಾಗಿ ಶಿಷ್ಯರು ಗುರುವನ್ನು ಹುಡುಕಿಕೊಂಡು ಹೋಗಿ ವಿದ್ಯೆಯನ್ನು ಕಲಿಯುತ್ತಿದ್ದರು. ಇಂದು ವಿದ್ಯಾರ್ಥಿ ಸಮೂಹವಿರುವಡೆ ಗುರು ಹೋಗಿ ಕಲಿಸುತ್ತಾರೆ. ಅಂದರೆ ಇಲ್ಲಿ 'ಗುರು' ಎಂಬುದರ ಅರ್ಥ 'ವಿದ್ಯೆಯನ್ನು ಕಲಿಸುವವನು' ಎಂದಾಯಿತು. ಕಲಿಯುವವರು ಸಾಮಾನ್ಯವಾಗಿ ಎಳೆಯವಯಸ್ಸಿನ ಮಕ್ಕಳು, ಯುವಕಯುವತಿಯರು.

ಆದರೆ ಇಲ್ಲಿ ಹೇಳಹೊರಟಿರುವ ಗುರು ಅಕ್ಷರಾಭ್ಯಾಸ, ವಿದ್ಯಾಭ್ಯಾಸ ಮಾಡಿಸುವವರಲ್ಲ, ಶಿಷ್ಯರು ವಿದ್ಯೆಯನ್ನು ಕಲಿಯಲು ಬಂದ ಮಕ್ಕಳು, ಯುವಕರಲ್ಲ, ಇಲ್ಲಿಯ ಗುರು ತತ್ವಜ್ಞಾನವನ್ನು, ಭಕ್ತಿಯ ಮಾರ್ಗವನ್ನು ಕಂಡು ಕೇಳಿ ಅನುಭವದಿಂದ ತಿಳಿದಿದ್ದನ್ನು ತಿಳಿಸುವವರು. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ಅಲೌಕಿಕ ಜ್ಞಾನವನ್ನುಂಟು ಮಾಡುವವರು. ಈ ಗುರುವಿನ ಉಪದೇಶವನ್ನು ಕೇಳುವವರನ್ನು 'ಭಕ್ತರು', 'ಗುರುಭಕ್ತ'ರೆಂದು ಕರೆಯಲಾಗುತ್ತದೆ. ಈ ಭಕ್ತರು ಸಾಮಾನ್ಯವಾಗಿ ವಯಸ್ಸಾದವರು. ಸಮವಯಸ್ಕರು. ಗಂಡಸರಿಗಿಂತ ಹೆಂಗಸರೇ ಹೆಚ್ಚು.

ಮಂಡ್ಯ ಮೈಸೂರು ಜಿಲ್ಲೆಯ ಸುತ್ತಮುತ್ತಲಿನ ಕೆ. ಆರ್. ನಗರ, ಕೆ.ಆರ್. ಪೇಟೆ, ಪಾಂಡವಪುರ ತಾಲ್ಲೂಕಿನ ಕೆಲವು ಹಳ್ಳಿಗಳಲ್ಲಿ 'ಗುರು'ವನ್ನು ಆರಾಧಿಸುವ ಪದ್ಧತಿ ಇತ್ತು, ವಿರಳವಾಗಿ ಇಂದೂ ಇದೆ. 'ಆರಾಧನೆ'ಎಂಬುದು ಗೌರವಸೂಚಕವಾದ ಕ್ರಿಯೆಯಾಗಿದೆ. ಹಿರಿಯರನ್ನು ಗೌರವಿಸುವ ಪದ್ಧತಿ ನಮ್ಮಲ್ಲಿದೆ. ಜ್ಞಾನಿಗಳೂ ತಿಳಿವಳಿಕೆಯುಳ್ಳ ಗುರುಗಳೂ ಆಗಿದ್ದ ಆ ಹಿರಿಯರಿಗೆ ತೋರಿಸುವ ಗೌರವ ಅವರು ಗತಿಸಿದ ಅನಂತರ ಕೆಲವೊಂದು ಮಾರ್ಪಾಟುಗಳೊಂದಿಗೆ ಆರಾಧನೆ ಎನಿಸಿಕೊಳ್ಳುತ್ತದೆ, ಅವರು ಗತಿಸಿದ ವರ್ಷಕ್ಕೆ ಸರಿಯಾಗಿ ಅವರ ಮೇಲಿನ ಶ್ರದ್ಧೆ, ಗೌರವ, ಪ್ರೀತಿ ಅಭಿಮಾನದಿಂದ ಆರಾಧನೆ ಆಚರಿಸುತ್ತಾರೆ.

ಈ ಗುರುಗಳು ಖಾವಿ ವಸ್ತ್ರಧಾರಿಗಳು ಕೊರಳಲ್ಲಿ ರಾದ್ರಾಕ್ಷಿ, ಹಣೆಯಲ್ಲಿ ವಿಭೂತಿಯನ್ನು ಧರಿಸಿರುತ್ತಾರೆ. ಖಾವಿ ಬಣ್ಣದ ವಸ್ತ್ರವೊಂದನ್ನು ಬಿಟ್ಟರೆ ಬಸವಣ್ಣನ ಕಾಲದ ಶಿವಶರಣರಂತೆ, ತಂಬೂರಿ ಸಹಿತ ನೋಡಿದರೆ ದಾಸರಂತೆ ಕಾಣುತ್ತಾರೆ. ಇವರು ಸಂಸಾರಸ್ಥರೂ ಆಗಿರುತ್ತಾರೆ. ಇವರಿಂದ 'ದೀಕ್ಷೆ' ಸ್ವೀಕರಿಸಿದ ಅನಂತರ ಯಾವನೇ ವ್ಯಕ್ತಿ ಗುರುಭಕ್ತರಾಗುತ್ತಾರೆ. 'ದೀಕ್ಷೆ' ಸ್ವೀಕರಿಸುವವರು ಮೊದಲೇ ನಿಗದಿಪಡಿಸಿದ ದಿನದಂದು ಸ್ನಾನ ಪೂಜೆಯನ್ನು ಮುಗಿಸಿಕೊಂಡು ಕೆಲವು ಆಚರಣೆಗಳ ರಹಸ್ಯ ಮಂತ್ರವೊಂದನ್ನು ಕಿವಿಯಲ್ಲಿ ಗುಟ್ಟಾಗಿ ಸ್ವೀಕರಿಸುತ್ತಾರೆ. ಅವರು ಬೆಳಿಗ್ಗೆ ಒಂದು, ಸಂಜೆ ಒಂದು ಮಂತ್ರವನ್ನು ಪ್ರತಿದಿನ ಜಪಿಸುತ್ತಾರೆ. ಪೂರ್ವ ದಿಕ್ಕಿಗೆ ಎದುರಾಗಿ ಮಣೆ ಅಥವಾ ಚಾಪೆಯ ಮೇಲೆ ಕುಳಿತು ವಿಭೂತಿ ಧರಿಸಿ ಆ ರಹಸ್ಯಾ ಮಂತ್ರವನ್ನು ತನಗೆ ತಾನೇ ಜಪಿಸಿಕೊಳ್ಳುತ್ತಾರೆ. ಅನಂತರ ಧ್ಯಾನದಿಂದ ಎಚ್ಚೆತ್ತ ಮೇಲೆ (ಒಂದು ತಾಮ್ರದ ತಟ್ಟೆಯಲ್ಲಿ ಗುರುವಿನಿಂದ ಮಂತ್ರಿಸಿದ ವಿಭೂತಿಗಟ್ಟಿ, ಅರಿಶಿನ, ಕುಂಕುಮದ ಭರಣಿ, ಒಂದು ಸಣ್ಣ ತಾಮ್ರದ ಚೊಂಬಿನಲ್ಲಿ ನೀರಿರುತ್ತದೆ) ತಟ್ಟೆಯಲ್ಲಿದ್ದ ತಾಮ್ರದ ಚೊಂಬಿನ ನೀರನ್ನು ಅಂಗೈಗೆ ಹಾಕಿಕೊಂಡು ತೀರ್ಥದೋಪಾದಿಯಲ್ಲಿ ಸೇವಿಸುತ್ತಾರೆ. ಈ ಗುರುಭಕ್ತರು ಒಬ್ಬರನ್ನೊಬ್ಬರು ಎಲ್ಲೇ ಭೇಟಿಯಾದರೂ 'ಶರಣು ಶರಣು' ಎಂದು ಒಬ್ಬರಿಗೊಬ್ಬರು ನಮಸ್ಕರಿಸುವ ವಾಡಿಕೆಯೂ ಇದೆ.

ಭಜನೆ, ಪಾದಪೂಜೆ ಒಂದೇ ರೀತಿ ಏರ್ಪಟ್ಟರೂ ಭಜನೆಯಲ್ಲಿ ಗುರುಗಳು ಪಾಲ್ಗೊಳ್ಳುವುದಿಲ್ಲ. ಅಲ್ಲದೆ ಪಾದಪೂಜೆಗೆ ಸೇರುವಷ್ಟು ಭಕ್ತರಾಗಲೀ ಖರ್ಚಾಗಲೀ ಆಗುವುದಿಲ್ಲ.

ಪಾದ ಪೂಜೆಯನ್ನು ಪಾರ್‌ಪೂಜೆ ಎಂದೂ ಕರೆಯುತ್ತಾರೆ. ಅ ಭಕ್ತರು ವಿದ್ಯಾವಂತರೇನೂ ಅಲ್ಲದ್ದರಿಂದ ಉಚ್ಚಾರಣಾ ಸೌಲಭ್ಯದಿಂದ ಹಾಗೆ ಕರೆಯುತ್ತಾರೆ. ಸಾಮಾನ್ಯವಾಗಿ ಹಬ್ಬ-ಹರಿದಿನಗಳಲ್ಲಿ, ಹುಣ್ಣಿಮೆ-ಅಮಾವಾಸ್ಯೆಗಳಲ್ಲಿ ಹಸು ಕರು ಹಾಕಿದ ಸಂದರ್ಭಗಳಲ್ಲಿ ಪಾದಪೂಜೆ ಏರ್ಪಾಡು ಮಾಡುತ್ತಾರೆ. ಎಲ್ಲಾ ಗುರುಭಕ್ತರು ಇಂತಿಷ್ಟು ಹಣವೆಂದು ಸಂಗ್ರಹಿಸಿ ಯಾರಾದರೂ ಒಬ್ಬರ ಮನೆಯಲ್ಲಿ ಈ ಪೂಜೆ ಏರ್ಪಡಿಸುತ್ತಾರೆ. ಹಸು ಕರು ಹಾಕಿದ ಸಂದರ್ಭಗಳಲ್ಲಿ, ಹರಕೆ ಇದ್ದ ಸಂದರ್ಭಗಳಲ್ಲಿ ಒಬ್ಬರೆ ಖರ್ಚು ಮಾಡಿ ಮಾಡಿಸುವುದುಂಟು. ಗುರುವನ್ನು ಎತ್ತರದ ಪೀಠ, (ಕುರ್ಚಿಗೆ ಕಂಬಳಿ ಹೊದಿಸಿರುತ್ತಾರೆ) ಮೇಲೆ ಕೂರಿಸಿ, ಉಳಿದ ಭಕ್ತರು ತಂಬೂರಿ ಹಿಡಿದು ನಾದಮಯವಾಗಿ ಹಾಡತೊಡಗುತ್ತಾರೆ.

ನೆನೆ ಮನವೇ ನೀ ನೆನೆ ಮನವೇ
ಘನ ಗುರು ಪಾದವ ಮರೆತಿರುವೆ
ಸದ್ಗುರು ಪಾದದ ಮರೆತಿರುವೆ

ಇವುಗಳಿಂದ 'ಆರಾಧನೆ'ಯನ್ನು ಮಾಡುತ್ತಾರೆ. ಈ ಆರಾಧನೆಯಲ್ಲಿ ಸುತ್ತಮುತ್ತಲಿನ ಹಳ್ಳಿಯ ಗುರುಭಕ್ತರೆಲ್ಲ ಸೇರಿ, ವರಿ ಎತ್ತಿ ಧನಧಾನ್ಯ ಸಂಗ್ರಹಿಸಿ ಆರಾಧನೆ ಮಾಡುತ್ತಾರೆ. ಆ ಗುರು

ಸಾಮಾನ್ಯವಾಗಿ ಆರಾಧ್ಯವಂಶದವರೇ ಆಗಿರುತ್ತಾರೆ. ಭಕ್ತರು ಯಾವ ಜಾತಿ-ಕುಲವಾದರೂ ಆಗಬಹುದು. ಗುರುವಿನ ವಂಶದ ಒಬ್ಬ ಬಾಲಕನೂ ಸೇರಿದಂತೆ ಗುರುಭಕ್ತ ಮುತ್ತೈದೆಯರು ನದಿ ಅಥವಾ ಕಾಲುವೆಯಿಂದ ಐದು ತಾಮ್ರದ ಚೊಂಬು ಅಥವಾ ಬಿಂದಿಗೆ ಗಂಗೆಯನ್ನು ಕಳಸದೊಂದಿಗೆ ಆರಾಧನಾ ಸ್ಥಳಕ್ಕೆ ಮೆರವಣಿಗೆಯ ಮೂಲಕ ಬರುತ್ತಾರೆ. ಆ ಗುರುಭಕ್ತರಾದರೋ ಹಣೆ, ಕತ್ತು, ಕಣ್ಣು, ಬೆನ್ನು, ಕೈ ಮತ್ತು ಕಾಲಿನ ಹಲವು ಭಾಗಗಳಿಗೆ ವಿಭೂತಿಯನ್ನು, ಹಣೆಗೆ ಅರಿಶಿನ-ಕುಂಕುಮವನ್ನು ಧರಿಸಿರುತ್ತಾರೆ. ಕೈಯಲ್ಲಿ ತಂಬೂರಿ (ಸೋರೆಕಾಯಿ ಬುರುಡೆ, ಬಿದಿರು ಕೋಲು ಮತ್ತು ತಂತಿಗಳನ್ನುಪಯೋಗಿಸಿ ಮಾಡಿದ ಒಂದು ವಾದ್ಯ) ಹಿಡಿದು ಗುರುವನ್ನು ಭಜಿಸುತ್ತಾರೆ. ಆಗ ಊರಿನಲ್ಲಿ ಪ್ರತಿ ಮನೆಯ ಮುಂದೆ ಜನರು ಅವರನ್ನು ನಿಲ್ಲಿಸಿ, ಕಾಲ್ತೊಳೆದು ಕಳಸ, ಗಂಗೆಗಳನ್ನು ಹೊತ್ತಿರುವ ಭಕ್ತರಿಗೆ ವಿಭೂತಿ, ಅರಿಶಿನ-ಕುಂಕುಮ ಹಚ್ಚಿ ಗಂಧದಕಡ್ಡಿಯಿಂದ ಬೆಳಗಿ ಕಾಯೊಡೆದು ಪೂಜಿಸುತ್ತಾರೆ. ಅವರಿಂದ ಚಿಕ್ಕವರು ದೊಡ್ಡವರೆನ್ನದೆ ಎಲ್ಲರೂ ಆಶೀರ್ವಾದ ಪಡೆಯುತ್ತಾರೆ. ಮೆರವಣಿಗೆಯಲ್ಲಿ ಗತಿಸಿದ ಗುರುವಿನ ಫೋಟೋವನ್ನು ಒಬ್ಬರು ಹಿಡಿದಿರುತ್ತಾರೆ. ತರುವಾಯ ಒಂದೆಡೆ ಕಲೆತು ಭಕ್ತರಿಂದ ಸಂಗ್ರಹಿಸಿದ ಧಾನ್ಯಗಳಿಂದ ಅಡುಗೆ ಮಾಡಿ ಎಲ್ಲರಿಗೂ ಅನ್ನ ಸಂತರ್ಪಣೆ ಕಾರ್ಯ ಮಾಡುತ್ತಾರೆ. ಭಕ್ತರು ಇಡೀ ರಾತ್ರಿ ಗುರುಭಜನೆಯಲ್ಲಿ ಪಾಲ್ಗೊಳ್ಳುತ್ತಾರೆ.

ಈ ಗುರು ಭಜನೆ ಆರಾಧನೆ ದಿವಸ ಮಾತ್ರವೇ ನಡೆಯುವುದಿಲ್ಲ. ಇತರ ದಿನಗಳಲ್ಲೂ ನಡೆಯುತ್ತಿರುತ್ತದೆ. ಇದರಲ್ಲಿ ಎರಡು ವಿಧ. ಒಂದು ಭಜನೆ ಮತ್ತೊಂದು ಪಾದಪೂಜೆ. ಆರಾಧನೆಯನ್ನು ಸತ್ತ ಗುರುವಿಗಾಗಿ ಮಾಡಿದರೆ ಇಲ್ಲಿ ಆ ಗುರುವಿನ ಮಗ (ಸಾಮಾನ್ಯವಾಗಿ ಹಿರಿಯ ಮಗ) ನ ನೇತೃತ್ವದಲ್ಲಿ ಮಾಡುತ್ತಾರೆ. ಅವನನ್ನೂ 'ಗುರು' ಎಂದೇ ಕರೆಯಲಾಗುತ್ತದೆ. ಈ ಗುರುವನ್ನು ಕೆಲವೆಡೆ ಕೆ. ಆರ್. ಪೇಟೆ ತಾಲ್ಲೂಕಿನ ಆಲಂಬಾಡಿ ಕಾವಲು ಗುಡುಗನಹಳ್ಳಿಗಳಲ್ಲಿ 'ಗುರುಗಳು' ಎಂದು ಸಂಬೋಧಿಸಿದರೆ, ಕೆ. ಆರ್. ನಗರ ತಾಲ್ಲೂಕಿನ ಗಂಧನಹಳ್ಳಿ, ಮಿರ್ಲೆ ಕಡೆ 'ಗುರುನಯ್ಯಾ' ಎನ್ನುತ್ತಾರೆ. 'ಗುರು' ಪದ ಏಕವಚನ ಎನಿಸಿದ್ದರಿಂದಲೋ ಏನೋ 'ಅಯ್ಯ'ಎಂಬ ಬಹುವಚನ, ಗೌರವಾರ್ಥಕ ಪದಗಳನ್ನೂ ಜೊತೆಗೆ ಸೇರಿಸುತ್ತಾರೆ, 'ಸ್ವಾಮಿಗಳು ಬುದ್ಧಿಗಳು' ಎಂಬಲ್ಲಿ ಬಳಸುವಂತೆ ಮನಸ್ಸು ಯಾವಾಗಲೂ ಗುರುವನ್ನು ಸ್ಮರಿಸುತ್ತಿರಬೇಕೆಂದು ಬಯಸುತ್ತಾರೆ. ಗುರುವು ಕೆಲವೊಂದು ಹಾಡಿನ ಅರ್ಥವಿವರಣೆಯನ್ನು ನೀಡುತ್ತಾರೆ. ಈ ತತ್ವ ಪದಗಳ ಬಗೆಗಿನ ಚರ್ಚೆ-ಸಂವಾದ, ಗುರು-ಭಕ್ತರ ನಡುವೆ ನಡೆಯುತ್ತಿರುತ್ತದೆ. ಈ ಪೂಜೆ ಸಾಮಾನ್ಯವಾಗಿ ರಾತ್ರಿಯ ಸಮಯದಲ್ಲೇ ಊಟ ಮುಗಿಸಿದ ಬಳಿಕ ನಡೆಯುತ್ತದೆ. ಇಲ್ಲಿ ತತ್ವ ಪದಗಳ ಚರ್ಚೆಯಲ್ಲದೆ ಇಡೀ ಊರಿನ ಹಬ್ಬ, ಮದುವೆ, ಜಗಳ, ಗದ್ದೆ ಕೆಲಸಕ್ಕೆ ಸಂಬಂಧಿಸಿದ ಮಾತುಕತೆಗಳೂ ನಡೆಯುತ್ತವೆ. ಇಲ್ಲಿ ದೀಕ್ಷೆ ಸ್ವೀಕರಿಸಿದವರಲ್ಲದೆ ಇತರರೂ ಪಾಲ್ಗೊಳ್ಳಬಹುದು. ಬಹುಶಃ ಇಂದಿನ ಕ್ಲಬ್ಬುಗಳು, ಸಂಘ'ಗಳ ರೀತಿಯಲ್ಲಿಯೇ ಇಲ್ಲಿಯೂ ಎಲ್ಲಾ ವಿಷಯಗಳ ಚರ್ಚೆ ನಡೆಯುತ್ತದೆ. ಸಂಘದ ಸದಸ್ಯರೆಂದು ತಿಳಿಯಲು ಬ್ಯಾಡ್ಜ್‌ಗಳಿರುವಂತೆ ಗುರುಭಕ್ತರಿಗೆ ವಿಭೂತಿ ಧರಿಸುವಿಕೆ

ಇದೆ. ಈ ಭಜನೆಗೆ ಸೇರಿದಾಗ ಬೆಳಿಗ್ಗೆಯಿಂದ ಕಷ್ಟಪಟ್ಟು ದುಡಿದ ಆಯಾಸ ಕಳೆದು, ಸಮವಯಸ್ಕರೊಂದಿಗೆ ಕಲೆಯುವ, ಗುರುವನ್ನು ಭಜಿಸುವ ಮೂಲಕ ಮನಸ್ಸಿಗೆ ನೆಮ್ಮದಿ ಉಂಟಾಗುತ್ತದೆ.

ಈ ತತ್ವಪದಗಳಲ್ಲಿ ತಂಬೂರಿಯ ಪಾತ್ರವೂ ಮುಖ್ಯವಾಗಿದ್ದು ತಂಬೂರಿ ನುಡಿಸುವವರು ಸ್ವರವನ್ನು ಗಮನಿಸಬೇಕೆಂದು

ತರವಲ್ಲ ತಗಿ ನಿನ್ನತಂಬೂರಿ
ಸ್ವರ ಬರದೆ ಬಾರಿಸದಿರು ತಂಬೂರಿ

ಎಂಬ ಪದದ ಮೂಲಕ ತಿಳಿಸುತ್ತಾರೆ.

ಈ ಲೌಕಿಕ ಪ್ರಪಂಚದಲ್ಲಿ ಮನುಷ್ಯ ಎಲ್ಲವೂ ತನ್ನದಾಗಬೇಕೆಂದು ಬಯಸುತ್ತಾನೆ. ಅದಕ್ಕಾಗಿ ಜಗಳ, ಕೊಲೆಗಳೇ ನಡೆಯುತ್ತವೆ. ಇದನ್ನು ಕುರಿತು ಈ ಪ್ರಪಂಚವೆಲ್ಲಾ ಗುರುವಿನದು, ನಾವು ಕೆಲವು ದಿನ ಇದ್ದು ಹೋಗಲು ಮಾತ್ರ ಬಂದವರೆಂದು ತಿಳಿಸುತ್ತಾರೆ.

ಮನೆ ಮನೆ ಇದು ಯಾರ ಮನೆ
ಇದು ತಾತನು ಹೋದ ಮೇಲೆ 'ನಾಥ' ಮನೆ

ಇಲ್ಲಿ ಬಂದಿರುವ 'ನಾಥ' ಎಂಬುದು ವಾಸಮಾಡಲು ಯೋಗ್ಯವಲ್ಲದ 'ಅನಾಥ' ಮನೆಯಾಗುತ್ತದೆನ್ನುವ ಮೂಲಕ ತನ್ನದೆಂಬ ಅಹಂಕಾರ ಪಡಬಾರದೆಂದು ತಿಳಿಸುತ್ತಾರೆ. ಇಲ್ಲಿಯ ಎಷ್ಟೋ ಪದಗಳು ಶರೀಫರ ತತ್ವಪದಗಳನ್ನೇ ಹೋಲುವುದನ್ನು ಗಮನಿಸಬಹುದಾಗಿದೆ.

ಹಾಲ್ ಕಾಯ್ಸವ್ವ ತಂಗಿ ಹಾಲ್‌ಹಾಯ್ಸೆ
ಹಾಲು ಕಾಯ್‌ಸಿ ಕೆನೆಯ ಬರಿಸಿ
ಹೆಪ್ಪನ್ಹಾಕ್ಕವ್ವ ತಂಗಿ ಹೆಪ್ಪನ್ಹಾಕೆ

ಎಂದು ದಿನನಿತ್ಯದ ಕಾಯಕವನ್ನೂ ಕುರಿತು ಹಾಡುತ್ತಾರೆ. ಈ ಪಾದ ಪೂಜೆಯಲ್ಲಿ ಎರಡು - ಮೂರು ಬಾರಿ ಚಹಾ ಕೊಡುತ್ತಾರೆ, ನಿದ್ರೆ ಬಾರದಿರಲೆಂದು. ಪ್ರಸಾದವಾಗಿ ಬೆಲ್ಲದನ್ನ ಕೊನೆಯಲ್ಲಿ ಹಣ್ಣು ತುಪ್ಪ ಕೊಡುತ್ತಾರೆ. ಇತ್ತೀಚಿನ ದಿನಗಳಲ್ಲಿ ಬೆಲ್ಲದನ್ನದ ಬದಲು ಉಪ್ಪಿಟ್ಟು, ತರಕಾರಿ ಬಾತು ಮಾಡುವುದುಂಟು ಹಣ್ಣುತುಪ್ಪ ಕೊಡುವುದಕ್ಕೆ ಮುಂಚೆ ಗುರುವಿನ ಪಾದಪೂಜೆಯನ್ನು ಮಾಡುತ್ತಾರೆ.

ಗುರುವನ್ನು ಪೀಠದ ಮೇಲೆ ಕೂರಿಸಿ ಒಂದು ಮಣೆಗೆ ಶುಭ್ರವಾದ ಬಿಳಿಬಟ್ಟೆಯನ್ನು ಹಾಸಿ ಅದರ ಮೇಲೆ ಅವರ ಪಾದವನ್ನಿಡಿಸುತ್ತಾರೆ. ಮೊದಲೇ ಸಿದ್ಧಪಡಿಸಿಕೊಂಡಿರುವ ಬಿಲ್ವಪತ್ರೆ, ವಿಭೂತಿ, ಅರಿಶಿನ ಕುಂಕುಮ ಹಚ್ಚಿ ಗಂಧದ ಕಡ್ಡಿಯಿಂದ ಪೂಜಿಸಿ ದಕ್ಷಿಣೆ ಹಾಕಿ ಆಶೀರ್ವಾದ

ಪಡೆಯುತ್ತಾರೆ. ಗುರು ಪ್ರತಿಯೊಬ್ಬರಿಗೆ ಹಣೆಗೆ ವಿಭೂತಿ ಹಚ್ಚಿ ಆಶೀರ್ವದಿಸುತ್ತಾರೆ. ಅನಂತರ ಮಂಗಳವಾಗಿದೆ ಜಯಜಯ ಮಂಗಳವಾಗಿದೆ ಎಂದು ಮಹಾಮಂಗಳಾರತಿ ಮಾಡುತ್ತಾರೆ. ಪ್ರತಿಯೊಂದು ತತ್ವಪದದ ನಂತರ ಮತ್ತು ಪ್ರಾರಂಭ ಮತ್ತು ಕೊನೆಯಲ್ಲಿ ಶ್ರೀ ಗುರು ಮಾರಾಜ್‌ಕಿ ಜೈ ಸದ್ಗುರು ಮಾರಾಜ್‌ಕಿ ಜೈ, ಗುರು ಶ್ರೀ ಸಂಜೀವ ಸದ್ಗುರು ಮಾರಾಜಕಿ ಜೈ, ಬಸವಲಿಂಗ ಆರಾಧ್ಯ ಮಾರಾಜಕಿ ಜೈ ಎಂದು ಹಿಂದೆ ಗತಿಸಿದ ಹಲವಾರು ಗುರುಗಳನ್ನು ನಮಿಸಿ ಜೈಕಾರ ಹಾಕುತ್ತಾರೆ. ಪ್ರಸಾದ ವಿನಿಯೋಗದ ತರುವಾಯ ತಂತಮ್ಮ ಮನೆಗಳಿಗೆ ಹಿಂದಿರುಗುತ್ತಾರೆ.

ಈ ಗುರಪದ ತತ್ವಪದ ಗುರುಭಜನೆ ಗಳನ್ನು ಹಾಡುವ ಭಕ್ತರು ವರ್ಷಕ್ಕೊಮ್ಮೆ ಶಿವರಾತ್ರಿಯ ಸಮಯದಲ್ಲಿ ಚೆನ್ನಪಟ್ಟಣದ ಸಮೀಪವಿರುವ ರೇವಣಸಿದ್ದನ ಬೆಟ್ಟಕ್ಕೆ ಹೋಗುವ ವಾಡಿಕೆಯಿದೆ ಈ ಬೆಟ್ಟದಲ್ಲಿ ಶಿವಲಿಂಗವಿದೆ. ರೇವಣಸಿದ್ಧರಾಧ್ಯರು ಐಕ್ಯವಾಗಿದ್ದರೆಂಬ ಪ್ರತೀತಿ ಇದೆ ಇಲ್ಲಿ ರೇಣುಕಾಂಬೆಯ ಮೂರ್ತಿಯೂ ಇದೆ. ಭೀಮನೂ ಈ ಗುರುದೀಕ್ಷೆಯನ್ನು ಸ್ವೀಕರಿಸಿ ಗುರುಭಕ್ತನಾಗಿದ್ದರಿಂದ ಅವನ ಮೂರ್ತಿ ಆ ಬೆಟ್ಟದಲ್ಲಿರುವುದಾಗಿ ಹೇಳುತ್ತಾರೆ.

ಗುರು ಬಂದಾ ಹರಾ ಬಂದಾ
ಶಿವ ಬಂದಾ ಮನೆಗೆ
ಗುರುವೇ ರೇವಣಸಿದ್ದ
ತಾ ಬಂದ ಮನೆಗೆ

ಇಲ್ಲಿ ಬರುವ ರೇವಣಸಿದ್ದ ಬೆಟ್ಟದ ರೇವಣಸಿದ್ದನೇ ಆಗಿರಬಹುದು. ಇಲ್ಲಿ ಶಿವಲಿಂಗ ವಿರುವುದರಿಂದ ಈ ಗುರು ಭಕ್ತರೆಲ್ಲ ಒಂದು ರೀತಿ ಶಿವನ ಆರಾಧಕರೆನಿಸುತ್ತಾರೆ. ಬಸವಣ್ಣನ ಕಾಲದಲ್ಲಿಯೂ ಶಿವನಿಗಿಂತ ಶಿವಭಕ್ತರಿಗೆ ಪ್ರಾಮುಖ್ಯತೆ ಇದ್ದಂತೆ ಇಲ್ಲಿ ಶಿವನಿಗಿಂತ ಗುರುವಿಗೆ ಪ್ರಾಮುಖ್ಯತೆ ನೀಡಿದ್ದಾರೆನಿಸುತ್ತದೆ.

ಇಂದು ಈ ಗುರುಭಜನೆ ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡಿದೆ. ಆಧುನಿಕ ಮಾಧ್ಯಮಗಳಾದ ದೂರದರ್ಶನ ವೀಡಿಯೋಗಳಿಂದಲೋ ಮನರಂಜನೆಯನ್ನು ಜನತೆ ಬಯಸುತ್ತಾರೆ. ಇನ್ನು ಕೆಲವು ದಿನಗಳ ಕಳೆದರೆ ದೇವಸ್ಥಾನ, ಮಠಗಳಲ್ಲಿ ಮಾತ್ರ ಭಜನೆಯನ್ನು ಕೇಳಬಹುದು ಹಳ್ಳಿಗಳಲ್ಲಿ ಯಾರಾದರೂ ಗುರುಭಕ್ತರು ಸತ್ತರೆ, ೧೧ ದಿನಗಳವರೆಗೆ ಊರಿನ ಹೆಣ್ಣು ಮಗಳು ಋತುಮತಿಯಾದರೆ ಇಡೀ ರಾತ್ರಿ ಭಜನೆ ಏರ್ಪಡಿಸುತ್ತಿದ್ದರು. ಇಂದು ಆ ಸಂಪ್ರದಾಯವೂ ಕಣ್ಮರೆಯಾಗಿದೆ. ಜನಪದರ ಒಂದು ಸಂಪ್ರದಾಯವಾಗಿಯೇ ಮುಂದುವರಿದಿದ್ದ ಈ ಪದ್ಧತಿ ಸರಿಯಾದ ತಿಳಿವಳಿಕೆಯುಳ್ಳ ಗುರುವಿನ, ಗುರು ಭಕ್ತರ ಸಂಘಟನೆ ಸಹಕಾರವಿಲ್ಲದೆ ಸೊರಗುತ್ತಿದೆ.

ಲಂಬಾಣಿಗರಲ್ಲಿ ಅಳುವ ಸಂಪ್ರದಾಯ

ಮಹಾದೇವಿ ಬಾಯಿ

ಪ್ರತಿಯೊಂದು ಕೋಮು, ಆದಿವಾಸಿ ಬುಡುಕಟ್ಟು, ಜನಪದ ಸಮೂಹಗಳಲ್ಲಿ ಮದುವೆ ಮುಂತಾದ ಸಂಪ್ರದಾಯಗಳು ರೂಢಿಯಲ್ಲಿರುವುದನ್ನು ಕಾಣಬಹುದು. ಆದರೆ ಆಚಾರ-ವಿಚಾರ, ಸಂಪ್ರದಾಯ, ನಂಬಿಕೆಗಳು ಒಂದೊಂದು ಸಮುದಾಯ, ಗುಂಪುಗಳಲ್ಲಿ ಪ್ರತ್ಯೇಕವಾಗಿರುವುದು ಸಹಜ. ಈ ವಿಚಾರದಲ್ಲಿ ಮೂಲಪ್ರವೃತ್ತಿಯನ್ನು ಬಹುಕಟ್ಟುನಿಟ್ಟಾಗಿ ಅನುಸರಿಸಿಕೊಂಡು ಬಂದಿರುವುದು ಗಮನಾರ್ಹ ಸಂಗತಿ. ಈ ದಿಶೆಯಲ್ಲಿ ಲಂಬಾಣಿಗರು ಕೆಲವು ಆಚಾರ-ವಿಚಾರ, ನಂಬಿಕೆ-ಸಂಪ್ರದಾಯಗಳನ್ನು ಹಾಗೆಯೇ ಉಳಿಸಿಕೊಂಡು ಬಂದಿದ್ದಾರೆ. ಅದರಲ್ಲಿ ಅವರ ಅಳುವ ಸಂಪ್ರದಾಯ ಬಹಳ ಮುಖ್ಯವಾದುದು. ಮದುವೆ ಸಮಾರಂಭಗಳಲ್ಲಿ, ಹಬ್ಬ-ಹರಿದಿನಗಳಲ್ಲಿ ಹಾಗೂ ಶವಸಂಸ್ಕಾರಗಳಲ್ಲಿ ಅವರು ಅಳುತ್ತಾರೆ. ಆದರೆ ವಿಶೇಷವಾಗಿ ಮದುವೆ ಸಂಪ್ರದಾಯಗಳು ಹಾಗೂ ಹಬ್ಬ ಹರಿದಿನಗಳಲ್ಲಿ ಒಬ್ಬರನ್ನೊಬ್ಬರು ಕೊರಳು ತಬ್ಬಿ ಅಳುವ ಅವರ ಸಂಪ್ರದಾಯ ಬಹಳ ವಿಶಿಷ್ಟವಾದುದು. ಅವರ ಮದುವೆ ಸಮಾರಂಭವು ಹಿಂದೆ ಒಂದು ತಿಂಗಳ ಕಾಲ ನಡೆಯುತ್ತಿತ್ತಂತೆ. ಆದರೆ ಈಗೀಗ ಒಂದು ವಾರದ ಮಟ್ಟಿಗೆ ನಡೆಯುತ್ತಿದೆ. ಅವರು ಮದುವೆಯನ್ನು ಒಟ್ಟು ೧೯ ಸಂಪ್ರದಾಯಾಚರಣೆಗಳ ಮೂಲಕ ನೆರವೇರಿಸುತ್ತಾರೆ. ಲಂಬಾಣಿಗರ ಈ ಮದುವೆ ಸಂಪ್ರದಾಯಗಳಲ್ಲಿ ಅಳುವ ಸಂಪ್ರದಾಯಗಳನ್ನು ಪರಿಚಯಿಸುವುದು ಪ್ರಸ್ತುತ ಲೇಖನದ ಪ್ರಮುಖ ಆಶಯ.

ಯಾವ ಒಬ್ಬ ಮನುಷ್ಯನೂ ಸಾಮಾನ್ಯವಾಗಿ ಅಳುವುದು ದುಃಖದ ಸನ್ನಿವೇಶದಲ್ಲಿ. ಅಂದರೆ ಆತ್ಮೀಯರು ಅಗಲಿದಾಗ, ದೈಹಿಕವಾಗಿ ಪೆಟ್ಟಾದಾಗ ಇಲ್ಲವೆ ಮಾನಸಿಕವಾಗಿ ನೋವಾದಾಗ ಹಾಗೂ ಮದುವೆ ಸಮಾರಂಭ ಮುಗಿಯುತ್ತಿದ್ದಂತೆ ಮಗಳನ್ನು ಗಂಡನ ಮನೆಗೆ ಕಳುಹಿಸಿಕೊಡುವ ಸಂದರ್ಭದಲ್ಲಿ ಹೆಣ್ಣು ಹೆತ್ತವರು ಮಗಳನ್ನು ಅಗಲಿರಬೇಕಾದ ಸಂದರ್ಭ ನೆನೆಸಿಕೊಂಡು ಅಳುತ್ತಾರೆ. ಅದು ಸಹಜ ಕೂಡ. ಆದರೆ ಅಲ್ಲಿ ಅದು ಒಂದು ಸಂಪ್ರದಾಯವಲ್ಲ. ಆದರೆ ಲಂಬಾಣಿಗರು ಮದುವೆಯಂತಹ ಸಂತೋಷದ ಸಮಾರಂಭದಲ್ಲಿ ಅಳುವುದನ್ನು ಒಂದು ಸಂಪ್ರದಾಯವಾಗಿ ಆಚರಣೆಯಲ್ಲಿ ರೂಢಿಸಿಕೊಂಡು ಬಂದಿದ್ದಾರೆ. ಅವರು ಬಹಿರಂಗದಲ್ಲಿ ಒರಟಾಗಿ ಕಂಡರೂ ಅಂತರಂಗದಲ್ಲಿ ಅವರ ಸ್ವಭಾವ ಕೋಮಲವಾದುದು.

ಅಳುವ ಸಂಪ್ರದಾಯಗಳೆಂದರೆ :

೧. ಮದುಮಗನ ಬೀಳ್ಕೊಡುಗೆ
೨. ತಿಲಕ ಕಾರ್ಯ
೩. ಗಣತೋರಿ ತೋಡೆರೋ
೪. ಮಂಗಳ ಸ್ನಾನ
೫. ಪೇರಾಪರೇರೋ
೬. ಮಾಂಗಲ್ಯಧಾರಣ
೭. ಢಾವಲೋ ಕಲಿಸುವುದು
೮. ಹವೇಲಿ
೯. ಮದುಮಕ್ಕಳನ್ನು ಬೀಳ್ಕೊಡುವುದು.

ಈ ಮೇಲಿನ ಸಂಪ್ರದಾಯದ ಸಂದರ್ಭಗಳಲ್ಲಿ ಮದುಮಗಳು ತನ್ನ ಎಲ್ಲಾ ನೋವನ್ನು ತೋಡಿಕೊಂಡು ಅಳುವಂತಹದನ್ನು ಕಾಣುತ್ತೇವೆ.

ಈ ರೀತಿ ಮದುಮಗಳು ಅಳುವುದಕ್ಕೆ ಮುಖ್ಯವಾದ ಒಂದು ಕಾರಣವೆಂದರೆ ಅಲೆಮಾರಿಗಳಾದ ಲಂಬಾಣಿಗರು ತಂಡೋಪತಂಡವಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಅಲೆಯಬೇಕಾಗುತ್ತಿತ್ತು. ಆ ಸಂದರ್ಭದಲ್ಲಿ ಅಲೆಯುವುದು ಅವರಿಗೆ ಅನಿವಾರ್ಯವೂ ಆಗಿತ್ತು. ಅವರು ವಿವಿಧ ಬಗೆಯ ಕಸುಬುಗಳನ್ನು ಅವಲಂಬಿಸಿದ್ದರು. ಕೆಲವರು ವ್ಯಾಪಾರ, ದವಸ-ಧಾನ್ಯಗಳ ಸಾಗಣಿಕೆ ಮಾಡಿದರೆ, ಇನ್ನು ಕೆಲವರು ಸೇನೆಗಳಿಗೆ ಆಹಾರ ಸರಬರಾಜು ಮಾಡುವ ಕೆಲಸವನ್ನು ನಿರ್ವಹಿಸಿಕೊಂಡಿದ್ದರು. ತಮ್ಮ ವೃತ್ತಿಗಾಗಿ ಹರಿದು ಹಂಚಿಹೋಗಿರುವ ಇವರು ಒಮ್ಮೆಲೇ ಒತ್ತಟ್ಟಿಗೆ ಸೇರುವುದು ಅಪರೂಪವಾಗಿತ್ತು. ತಮ್ಮ ಮಕ್ಕಳು ಮದುವೆಯ ವಯಸ್ಸಿಗೆ ಬಂದಕೂಡಲೇ ಆಯಾ ಗುಂಪುಗಳಲ್ಲಿ ಯೋಗ್ಯರಾದ ವಧುವರರು ಸಿಗದೇ ಇದ್ದ ಪಕ್ಷದಲ್ಲಿ ಬೇರೆ ಗುಂಪಿನವರ ಜೊತೆಗೆ ಸಂಪರ್ಕ ಬೆಳೆಸುತ್ತಿದ್ದರು. ಇವರು ಒತ್ತಟ್ಟಿಗೆ ಸೇರುವುದು ದೀಪಾವಳಿ ಇಲ್ಲವೆ ಹೋಳಿಹಬ್ಬದ ಸಂದರ್ಭದಲ್ಲಿ. ಈ ಬುಡಕಟ್ಟಿನವರಿಗೆ ಇದೊಂದು ಸುವರ್ಣಾವಕಾಶ. ಆಗಲೇ ಈ ಜನಸಮುದಾಯ ತಮ್ಮ ವಧುವಿಗೆ ವರ, ವರನಿಗೆ ವಧು ಆಯ್ಕೆ ಮಾಡಿಕೊಳ್ಳುತ್ತಿದ್ದರು. ಮದುವೆ ಕಾರ್ಯಗಳು ಮುಗಿದ ಬಳಿಕ ಮತ್ತೆ ತಮ್ಮ ವೃತ್ತಿಗಾಗಿ ತಂಡೋಪತಂಡವಾಗಿ ವಲಸೆಹೋಗುತ್ತಿದ್ದರು. ಈ ಗುಂಪು ಮದುವೆ ಮಾಡಿದ ಅನಂತರ ಪುನಃ ಒಬ್ಬರಿಗೊಬ್ಬರು ಭೇಟಿ ಆಗುವುದು ಅಪರೂಪ. ಆದ ಕಾರಣ ದುಃಖದಿಂದ ಒಬ್ಬರಿಗೊಬ್ಬರು ಅಪ್ಪಿಕೊಂಡು ಗದ್ಗದಿತ ಕಂಠದಿಂದ ತಮ್ಮ ದುಃಖವನ್ನು ಹಾಡಿನ ಮುಖಾಂತರ ವ್ಯಕ್ತಪಡಿಸಿಕೊಳ್ಳುತ್ತಿದ್ದರು.[೧] ಈ ಹಿನ್ನಲೆಯಲ್ಲಿ ಹುಟ್ಟಿಕೊಂಡ ಇವರ ಅಳುವ ಸಂಪ್ರದಾಯ ಮದುವೆ ಸಮಾರಂಭದಲ್ಲಿ ಮಿಳಿತವಾಗಿ ಅದುವೇ ಒಂದು ಸಂಪ್ರದಾಯವಾಗಿ ಇಂದಿಗೂ ರೂಡಿಯಲ್ಲಿರುವುದು ವಿಸ್ಮಯವನ್ನುಂಟು ಮಾಡುತ್ತದೆ.

---

೧. ಲಂಬಾಣಿಗರಲ್ಲಿ ಮದುವೆ ಸಂಪ್ರದಾಯಗಳು - ಡಾ. ಹರಿಲಾಲ್ ಪವಾರ. ೧೯೯೬ ಪು. ೩

ಲಂಬಾಣಿಗರು ಇಂದು ಹಿಂದಿನ ಸ್ಥಿತಿಯಲ್ಲಿಲ್ಲ. ಹೆಣ್ಣು ತನ್ನ ತವರಿಗೆ ಬೇಕೆನಿಸಿದಾಗ ಬರಲು ಅವಕಾಶವಿದೆ. ಹಿಂದೆ ಅವರು ಅಲೆಮಾರಿಗಳಾಗಿದ್ದರಿಂದ ಇದು ಸಾಧ್ಯವಿರಲಿಲ್ಲವಷ್ಟೆ. ಇಂದು ಅವರು ಅಲೆಮಾರಿಗಳಾಗಿಲ್ಲ. ಕೃಷಿಕರಾಗಿ, ಕೂಲಿಕಾರರಾಗಿ ಅಲ್ಲಲ್ಲಿ ಖಾಯಂ ಆಗಿ ನೆಲೆ ನಿಂತಿದ್ದಾರೆ.

ಲಂಬಾಣಿಗರು ಇಂದು ನಿಶ್ಚಿತವಾಗಿ ತಾಂಡಾಗಳ ರೂಪದಲ್ಲಿ ನೆಲೆಯಾಗಿದ್ದರೂ ಆಯಾ ಸಂದರ್ಭಗಳಲ್ಲಿ ಅಳುವುದನ್ನು ನಿಲ್ಲಿಸಿಲ್ಲ. ಇದು ಅವರು ತಮ್ಮ ಪರಂಪರೆಯನ್ನು ಉಳಿಸಿಕೊಂಡು ಬಂದಿರುವುದರ ಸಂಕೇತ. ಅವರು ತಮ್ಮ ಮದುವೆ-ಮುಂಜಿ, ಹಬ್ಬ-ಹರಿದಿನ, ಉತ್ಸವಗಳಲ್ಲಿ ದೂರದ ತಾಂಡಾಗಳಿಂದ ಸಂಬಂಧಿಗಳು ಬಂದು ಸೇರಿದಾಗ ಅವರ ಕೊರಳುತಬ್ಬಿ ಹಾಡುತ್ತಾ ಅಳುತ್ತಾರೆ. ಇದಕ್ಕೆ ಅವರು 'ಧಾವಲೋ'ಎನ್ನುತ್ತಾರೆ. ಈ ರೀತಿಯಾಗಿ ಹಾಡುವುದರ ಮೂಲಕ ತಮ್ಮ ಭಾವನೆಗಳನ್ನು, ಹೃದಯದ ಭಾರವನ್ನು ತೋಡಿಕೊಳ್ಳುತ್ತಾರೆ, ಕಷ್ಟಸುಖವನ್ನು ಹಂಚಿಕೊಳ್ಳುತ್ತಾರೆ. ಲಂಬಾಣಿಗರ ಈ ಬಗೆಯ ಅಳುವ ಹಾಡುಗಳಲ್ಲಿ ಜೀವನದ ಸರಸ-ವಿರಸ ಪ್ರಸಂಗಗಳು, ಸುಖ-ದುಃಖದ ಸನ್ನಿವೇಶಗಳು, ನೋವು ನಲಿವುಗಳು ಹಾಗೂ ಬದುಕಿನ ಅನೇಕ ಜಟಿಲತೆಗಳು ಅಡಕವಾಗಿರುತ್ತವೆ. ಅವರ ಈ ಅಳುವ ಹಾಡುಗಳನ್ನು ಕೇಳಿದರೆ ಎಂಥ ಕಲ್ಲು ಹೃದಯವೂ ಕರಗಿಹೋಗುತ್ತದೆ, ಕನಿಕರಗೊಳ್ಳುತ್ತದೆ. ಈ ಸಂದರ್ಭದಲ್ಲಿ ತವರು ಹಾಗೂ ಗಂಡನ ಮನೆಯ ಸಿಹಿ-ಕಹಿ ಅನುಭವಗಳು ಅವರ ಬಾಯಿಂದ ನಿರರ್ಗಳವಾಗಿ ಕೇಳಿಬರುತ್ತವೆ.

ಲಂಬಾಣಿಗರು ಇಂದು ಎಷ್ಟೇ ಸುಶಿಕ್ಷಿತ ಹಾಗೂ ಸುಸಂಸ್ಕೃತರಾಗಿದ್ದರೂ ಈ ಬಗೆಯ ಅಳುವಿಕೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಿಲ್ಲ. ತಮ್ಮ ಮನೆಗೆ ಸಂಬಂಧಿಕರು ಬೇರೆ ಕಡೆಯಿಂದ ಅಥವಾ ತವರೂರಿನಿಂದ ಬಂದಲ್ಲಿ ಅವರು ಹೆಣ್ಣಾಗಿರಲಿ ಗಂಡಾಗಿರಲಿ ಅವರ ಕೈಗೆ ಒಂದು ತಂಬಿಗೆ ನೀರು ಕೊಟ್ಟು, ಕೊರಳು ಬಾಚಿಕೊಂಡು ಅಳಲು ಪ್ರಾರಂಭಿಸುತ್ತಾರೆ. ಹಾಗೆಯೇ ಅವರು ನಾಲ್ಕುದಿನ ಇದ್ದು ಊರಿಗೆ ಹೊರಡುವಾಗ ಮತ್ತೆ ಕೊರಳು ತಬ್ಬಿ ಅಳುವ ಹಾಡಿನ ಮುಖಾಂತರ ತವರಿಗೆ ಸಂದೇಶ ರವಾನಿಸುತ್ತಾರೆ. ಸಾಮಾನ್ಯವಾಗಿ ಮದುವೆಯಾದ ಹೆಣ್ಣು ಈ ಅಳುವ ಹಾಡನ್ನು ಹೇಳುತ್ತಾಳೆ. ಈ ಬಗೆಯ ಅಳುವ ಹಾಡಿನಲ್ಲಿ ಬದುಕಿನ ಜಟಿಲತೆ ಕಾವ್ಯಮಯವಾಗಿ ಅವರ ಬಾಯಿಯಿಂದ ಹೊರಹೊಮ್ಮುತ್ತದೆ. ಗಂಡನ ಮನೆಯಲ್ಲಿ ಬಾಳುವ ಹೆಣ್ಣಿಗೆ ಅನೇಕ ನಿರ್ಬಂಧಗಳಿರುತ್ತವೆ. ಇಂಥ ಸಂದರ್ಭಗಳಲ್ಲಿ ಮನೆಗೆ ಬಂದ ಸಂಬಂಧಿಕರೊಂದಿಗೆ ತನ್ನ ಸಿಹಿ-ಕಹಿ ಅನುಭವಗಳನ್ನು ಬಾಯಿಮಾತಿನಿಂದ ನೇರವಾಗಿ ಹೇಳಲು ಸಾಧ್ಯವಾಗದಿರಬಹುದು. ಆದರೆ ಅಳುವ ಹಾಡಿನ ಮುಖಾಂತರ ಯಾವ ಆತಂಕವಿಲ್ಲದೆ ಅದನ್ನು ಸುಲಭವಾಗಿ ಹೇಳಬಹುದು. ಹೀಗೆ ಬದುಕಿನ ಜಟಿಲತೆಯನ್ನು, ಅನಂತತೆಯನ್ನು, ಕಷ್ಟ-ಕಾರ್ಪಣ್ಯಗಳನ್ನು ತಿಳಪಿಸುವ ಮಾಧ್ಯಮವೇ ಈ ಅಳುವ ಹಾಡು.

ಮದುಮಗನ ಬೀಳ್ಕೊಡುಗೆ :- ನಸುಕಿನಲ್ಲಿ ಮದುಮಗನಿಗೆ ನೀರೆರೆದು ವಿಶೇಷ ಉಡುಗೆ ತೊಡುಗೆಗಳನ್ನು ತೊಡಿಸಿ ವೀರಯೋಧನಂತೆ ಅಲಂಕರಿಸುತ್ತಾರೆ. ಅಲಂಕೃತನಾದ ಮದುಮಗನಿಗೆ ಮನೆಯಲ್ಲಿ ವರನ ತಾಯಿ ಕೊರಳುತಬ್ಬಿ ಅಳುವುದು ಇವರ ವಿಶೇಷವಾದ ಸಂಪ್ರದಾಯ. ತನ್ನ ಭಾವನೆಗಳೆಲ್ಲವನ್ನೂ ತೋಡಿಕೊಂಡು ತಾಯಿ ತನ್ನ ಮಗನನ್ನು ಬಿಟ್ಟುಕೊಡಲಾಗದೆ ಅಳುವ ದೃಶ್ಯ ಹೃದಯಸ್ಪರ್ಶಿಯಾಗಿರುವಂಥದು. ಕುಲದ ಕಳಂಕ ತೊಡೆಯಲು, ಹುಡುಗಿಯನ್ನು ರಕ್ಷಿಸಲು ಗಂಡಿನ ಕೈಗೆ ವೀರತ್ವದ ಸಂಕೇತವಾದ 'ಖತಾರಿ' ನೀಡುತ್ತಾರೆ. ಹೆಣ್ಣಿನ ತಾಂಡಾದ ಯೋಧರನ್ನು ಎದುರಿಸಿ ತನ್ನ ಶಕ್ತಿ ಸಾಮರ್ಥ್ಯ ಮತ್ತು ವೀರತ್ವವನ್ನು ಪ್ರದರ್ಶಿಸಿ ಹೆಣ್ಣನ್ನು ತಂದು ಮದುವೆಯಾಗುವ ಪದ್ಧತಿ ಇವರಲ್ಲಿ ರೂಢಿಯಲ್ಲಿ ಇತ್ತೆಂಬುದರ ಬಗೆಗೆ ಅವರ ಮೌಖಿಕ ಸಾಹಿತ್ಯದಲ್ಲಿ ಮಾಹಿತಿ ಸಿಗುತ್ತದೆ. ಹಾಗಾಗಿ ಮಗನಿಗೆ ಏನಾದರೂ ಕೆಡುಕಾದರೆ ಎಂಬ ಆತಂಕದಿಂದಾಗಿ ತಾಯಿಯಾದವಳು ದುಃಖಿಸುವಳು.

ದಿಬ್ಬಣ ಗಂಡಿನ ತಾಂಡಾದಿಂದ ಬೀಳ್ಕೊಂಡು ಹೆಣ್ಣಿನ ತಾಂಡ ಸೇರುವ ಹೊತ್ತಿಗೆ ಸಾಕಷ್ಟು ಶಾಸ್ತ್ರಗಳು ನಡೆದಿರುತ್ತವೆ. ಮದುಮಗ ಮದುಮಗಳ ಮನೆಗೆ ಬರುವಷ್ಟರಲ್ಲಿ ಮದುಮಗಳನ್ನು ಕರೆದುಕೊಂಡು ಸಂಬಂಧಿಕರ ಮನೆಯಲ್ಲಿ ಬಿಡಲು ಹೋಗುತ್ತಾರೆ. ಆ ಸಂದರ್ಭದಲ್ಲಿ ಮದುಮಗಳ ಕಾಲಿಗೆ ಹಸಿರು ಮಣಿಸರ (ಗೆಜ್ಜೆಸರ) ವನ್ನು ಅವಶ್ಯವಾಗಿ ಕಟ್ಟುತ್ತಾರೆ. ಆಗ ಮದುಮಗಳು 'ನನ್ನೊಬ್ಬಳನ್ನು ನಿಮ್ಮೊಂದಿಗೆ ಇರಿಸಿಕೊಳ್ಳಲಾರದೆ ದೂರ ಕಳುಹಿಸುತ್ತಿದ್ದೀರಲ್ಲ, ನಿಮಗೆ ಮನಸ್ಸಾದರೂ ಹೇಗೆ ಬಂತು' ಎಂಬುದಾಗಿ ತನ್ನ ಮಾನಸಿಕ ತೊಳಲಾಟವನ್ನು ಹಾಡಿನ ಮೂಲಕ ವ್ಯಕ್ತಪಡಿಸಿ ಕಣ್ಣೀರು ಮಿಡಿಯುತ್ತಾಳೆ.

ತಿಲಕ ಕಾರ್ಯ : ಹೆಣ್ಣಿನ ಮನೆಯಲ್ಲಿ ಪಾನಕ ಹಂಚುವ ದಿನ ಈ ಕಾರ್ಯ ನಡೆಯುತ್ತದೆ. ಐದು ಜನ ಮುತ್ತೈದೆಯರು ಒಬ್ಬೊಬ್ಬರಾಗಿ ಮದುಮಗಳನ್ನು ತಬ್ಬಿಕೊಂಡು ಅಳುತ್ತಾರೆ. ದುಃಖತಪ್ತಳಾದ ವಧುವನ್ನು ಕರೆದು ಹೆಣ್ಣುಮಕ್ಕಳ ಮಧ್ಯದಲ್ಲಿ ಕೂರಿಸುತ್ತಾರೆ. ಒಂದು ಕಂಚಿನ ತಟ್ಟೆಯಲ್ಲಿ ಅರಿಶಿಣದ ಪುಡಿ ಕಲಸಿಟ್ಟು, ಒಂದು ದಂತದ ಬಳೆ, ಒಂದು ಕಾಲು ರೂಪಾಯಿ ಹಾಕಿಡುವರು.

ಮದುಮಗಳ ಸಹೋದರ ಅಕ್ಕನ ತಲೆಯ ಮೇಲಿನ ಮುಸುಕು ತೆಗೆದು ಹಣೆಗೆ ತಿಲಕವಿಡುತ್ತಾನೆ. ತಿಲಕ ಇಡುವಾಗ ಮದುಮಗಳು ಈ ರೀತಿ ಪದ ಹೇಳಿಕೊಂಡು ಅಳುತ್ತಿರುತ್ತಾಳೆ

ಮತ ಲಗಾಡೋರೆ ವಿರೇಣ
ಹಳದೇರೊ ಟೀಕೋ
ತಮಜೆ ಲಗಾಡಿಯೆತೋ
ತಮಾರಿ ಭೇನಜ ಮ ವೆರಾಣಿ ವಾಜಿಯೂ ಅಂಹೀಯಾsss|

ಸಹೋದರನೆ ಹಚ್ಚಬೇಡ ನೀನು ಈ ಅರಿಶಿಣದ ತಿಲಕ, ನೀನೇನಾದರೂ ತಿಲಕ ಹಚ್ಚಿದರೆ ಈ ನಿನ್ನ ಸಹೋದರಿ ಬೇರೆಯವಳಾಗಿ ಬಿಡುತ್ತಾಳೆ. ನೀವು ಅರಿಶಿಣದ ತಿಲಕ ಹಚ್ಚಿ ನನ್ನನ್ನು ನಿಮ್ಮಿಂದ ದೂರಮಾಡಬೇಡಿರಿ. ಈ ಹಾಡಿನಲ್ಲಿ ಅಬಲೆ ಹೆಣ್ಣೊರ್ವಳ ಅಸಹಾಯಕ ಸ್ಥಿತಿ, ಅಣ್ಣ-ತಮ್ಮ, ತಂದೆ-ತಾಯಿ, ಬಳಗದವರೆಲ್ಲರೂ ಸೇರಿ ತನ್ನನ್ನು ಅಪರಿಚಿತ ಲೋಕವೊಂದಕ್ಕೆ ದೂಡುತ್ತಿರುವರೆಂಬ ಅನಾಥ ಪ್ರಜ್ಞೆ, ಹತಾಶೆಯ ನೋವಿನ ಚಿತ್ರಣವಿದೆ. ಅವಳ ಹಾಡಿನಲ್ಲಿ ಬೇರೆಯವರ ಸ್ವತ್ತಾಗುವ ಭಯ, ವೇದನೆ, ದುಃಖ ಕರುಳು ಮಿಡಿಯುವಂತೆ ಚಿತ್ರಿತವಾಗಿದೆ. ಮದುಮಗಳು ಒಂದೊಂದು ನುಡಿಯನ್ನು ಉಚ್ಚರಿಸುತ್ತಾ ಅಳುತ್ತಿದ್ದರೆ ಎಂಥವರ ಮನಸ್ಸು ಮಿಡಿಯುತ್ತದೆ. ತಿಲಕ ಹಚ್ಚುವುದರಿಂದ ಅದುವರೆಗೂ ಕುಮಾರಿಯಾಗಿದ್ದ ಹೆಣ್ಣು ಸೌಭಾಗ್ಯವತಿಯಾಗುವ ಬದುಕಿನ ಮತ್ತೊಂದು ಮಜಲಿಗೆ ಪ್ರವೇಶಿಸುವುದರ ಸೂಚನೆಯಿದೆ.

ಗಣತೋರಿ ತೋಡೇರೋ : ಮದುಮಗಳ ಕಾಲಿನಲ್ಲಿರುವ ಹಸಿರು ಮಣಿಸರ ಕೀಳುವುದನ್ನು 'ಗಣತೋರಿ ತೋಡೇರೋ' ಎಂದು ಕರೆಯುತ್ತಾರೆ. ಮದುಮಗಳ ಕಾಲಿನಲ್ಲಿರುವ ಈ ಸರವನ್ನು ಅವಳ ಗೆಳತಿಯರು ಕೀಳುವ ಸಂದರ್ಭದಲ್ಲಿ ಮದುಮಗಳು ಈ ರೀತಿ ಹಾಡು ಹೇಳಿಕೊಂಡು ಅಳುತ್ತಾಳೆ.

ಮತ ತೊಡೋ ಸಾತಣೊಯೇ
ಮಾರಿ ಕಾಯ ಕಚನೇರಿ ಹರಿ ಗಣತೋರಿ
ಏಕ ಅಂಗಡಿ ಮೋಲಾವತೋ
ಸೋ ಅಂಗಡಿ ವೇರಾಜಿ ಗಣತೋರಿ
ಮಾರ ನಾಯಕಣ ಯಾಡಿ ಮೋಲಾಯಿ ಗಣತೋರಿ ಅಂಹೀಯಾsss|

ಗೆಳತಿಯರೇ ನನ್ನ ತಾಯಿಯ ಕೈಯಿಂದ ಸುಂದರವಾಗಿ ಹೆಣೆಯಲ್ಪಟ್ಟ ಈ ಹಸಿರು ಮಣಿಸರವನ್ನು ನನ್ನ ಕಾಲಿನಿಂದ ತೆಗೆಯದಿರಿ, ಜೊತೆಗಾತಿಯರೇ ನನ್ನ ತಂದೆ ಮೂವತ್ತು ಅಂಗಡಿ ಸುತ್ತಿ ತಂದ ಈ ಮಣಿಸರವನ್ನು ಕೀಳಬೇಡಿ ಎಂದು ವಿನಂತಿಸುತ್ತಾ ಅಳುವ ದೃಶ್ಯ ಎಂಥವರ ಮನಸ್ಸನ್ನು ಕಲಕಿ ಬಿಡುತ್ತದೆ. ಮಣಿಸರ ಕೀಳುವುದರ ಮೂಲಕ ತಂದೆಯ ಮನೆಯ ಸಂಬಂಧವನ್ನು ಒಂದೊಂದಾಗಿ ಕಡಿತಗೊಳಿಸುತ್ತಿರುವ ಆ ಜನರ ಬಗೆಗೆ ಜಿಗುಪ್ಸೆ, ಆತಂಕ, ದುಃಖ ಮಡುಗಟ್ಟಿರುವುದನ್ನು ಗಮನಿಸಬಹುದು.

ಮಂಗಳ ಸ್ನಾನ : ಸುರಗಿ ಕಾರ್ಯ ನಡೆಸುವ ಮುನ್ನ ಮದುಮಕ್ಕಳಿಗೆ ಮಂಗಳಸ್ನಾನ ಮಾಡಿಸುತ್ತಾರೆ. ಎರಡು ದೊಡ್ಡ ದೊಡ್ಡ 'ಮಾಟ್ಲಾ' (ಗುಡಾಣ)ದಲ್ಲಿ ತಣ್ಣೀರು ತುಂಬಿ ಅದರ ಮುಂದೊಂದು ಕೂಣಿಗೆ ಮಗಚಿಟ್ಟು, ಅದರ ಮೇಲೆ ಮದುಮಗಳನ್ನು ಕೂರಿಸಿ ಮುತ್ತೈದೆಯರು ಸ್ನಾನ ಮಾಡಿಸುತ್ತಾರೆ. ಈ ಸಂದರ್ಭದಲ್ಲಿ ಅವಳು ಈ ರೀತಿ ಹೇಳಿಕೊಂಡು ದುಃಖಿಸುತ್ತಾಳೆ.

ಸೀಂಪಾಡೋ ಸೀಯಾಳೋ ವರಸೋಯೇ
ಏ ಮತ ಕರಾವೊ ಯಾಡಿಯೇ
ಏ ಸೀಳಿ ಪಾಣೇರಿ ಸೀಳಿ ವಂಗೋಳಿ ಅಂಹೀಯಾsss|
ಆಳೇನ ಬೋಳೇನ ಲೇಲಾಲೇ ತಂಬೊಳೆಯಾ
ಸುಶೀಲ ಸರೀಕಿಯೇ ಮಾರಿ ಯಾಡಿಯೇ
ಯಾಡಿ ತಾರೊ ಗಳೇ ನಹಾಂಸಲೋಯೇ
ಏ ಬೋತ ಖೋಲಾಚಯೆ ಅಂಹೀಯಾsss|

ತಾಯಿಂದಿರೇ ಏನೂ ಅರಿಯದ ನನಗೆ ತಣ್ಣೀರಿನ ಸ್ನಾನ ಮಾಡಿಸಿ ಪರಕೀಯಳನ್ನಾಗಿ ಮಾಡಬೇಡಿ, ಓ ನನ್ನ ತಾಯಿಯೇ ನಿನಗೆ ಬೆಳ್ಳಿಯ ಕೊರಳಹಾರವನ್ನು ತಂದುಕೊಡುವೆ, ದಯಮಾಡಿ ನನಗೆ ತಣ್ಣೀರಿನ ಸ್ನಾನ ಮಾಡಿಸದೆ ನನ್ನನ್ನು ನಿನ್ನಿಂದ ದೂರದೂಡಬೇಡ ಎಂದು ಅಂಗಲಾಚಿ ಹಾಡುವ ಈ ಪರಿ ಬೇರೆ ಯಾವ ಸಮುದಾಯದಲ್ಲಿಯೂ ಕಂಡುಬರದ ವಿಶಿಷ್ಟ ಅಂಶವಾಗಿದೆ.

ಫೇರಾಪರೇರೊ (ಸಪ್ತಪದಿ) - ಮದುಮಗಳ ಕೈಯಲ್ಲಿ ಎಲೆ ಅಡಿಕೆ, ಕವಡೆ, ಸಪಾರ, ಬೆಳ್ಳಿ ನಾಣ್ಯ, ಥಾಯಿರ್ ಪೀಸಾ - ಇವನ್ನೆಲ್ಲ ಇಟ್ಟು, ಅವಳ ಕೈ ಮೇಲೆ ಮದುಮಗನ ಕೈಯಿಡಿಸುತ್ತಾರೆ. ವಧುವಿನ ತಾಯಿ ತನ್ನ ಹಾಗೂ ಮದುಮಗಳ ಕೈ ಎರಡನ್ನೂ ತನ್ನ ಬಲಕಂಕುಳಲಲ್ಲಿಟ್ಟ ಮದುಮಗ ಮುಸಳೆ (ಬನಕೆ)ಯ ಸುತ್ತ ಏಳು ಬಾರಿ ಸುತ್ತಬೇಕು. ಆರು ಸುತ್ತು ಸುತ್ತುವ ತನಕ ಮದುಮಗಳ ತಾಯಿ ಮಗಳ ಜೊತೆಗಿದ್ದು ಏಳನೇ ಸುತ್ತಿಗೆ ಮಗಳ ಕೈ ಬಿಟ್ಟು ದೂರ ಉಳಿಯುತ್ತಾಳೆ. ಆಗ ಮದುಮಗಳು ಈ ರೀತಿ ಹಾಡಿಕೊಂಡು ದುಃಖಿಸುತ್ತಾಳೆ.

ಅವಡಾ ಜಲಮೇರೊ
ಜಲಮಾಣೋ ಕೀದಿ ನಾಯಕಣ ಯಾಡಿ
ಅವಡಾ ದಾವ್ ಕೀದಿರೇ ನಂಗರ ನಾಯಕ ಬಾಪು ಅಂಹೀಯಾsss|

ಎಂಥ ಜನ್ಮ ನನ್ನದು, ನಾನು ಯಾವ ಕರ್ಮ ಮಾಡಿದೆ ಎಂದು ನನ್ನನ್ನು ಇಂಥ ಕೋಟಲೆಯ ಜೀವನ ಸಾಗಿಸಲು ಕಳುಹಿಸುತ್ತಿದ್ದೀರೆಂದು ನೆನೆನೆನೆದು ಅಳುತ್ತಾಳೆ.

ಮದುಮಗಳ ದುಃಖತಪ್ತವಾದ ಹೃದಯದಿಂದ ಹೊರಹೊಮ್ಮುವ ಈ ಗೀತೆಯು ಕರುಣರಸಪೂರಿತವಾದುದು. ದುಃಖಪೂರಿತವಾದ ಅವಳ ಈ ಮಾತುಗಳನ್ನು ಕೇಳಿದವರ ಕಣ್ಣುಗಳು ಹನಿಗೂಡಲಾರದೆ ಇರಲಾರವು. ಬಹುಶಃ ಲಂಬಾಣಿಗರ ಕುಟುಂಬದಲ್ಲಿನ ಹೆಣ್ಣಿನ ಕಷ್ಟಕೋಟಲೆಗಳೇ ಇದಕ್ಕೆ ಪ್ರಮುಖ ಕಾರಣವಿರಬಹುದೆನಿಸುತ್ತದೆ.

ಮಾಂಗಲ್ಯಧಾರಣ - ಮದುವೆಯ ಹಲವಾರು ಕಾರ್ಯಗಳಲ್ಲಿ ಮಾಂಗಲ್ಯಧಾರಣವು ಅತೀ ಮಹತ್ವದ್ದು. ಮದುವೆಯ ದಿನ ಸಾಯಂಕಾಲ ಮದುಮಗಳು ತನ್ನ ಹಳೆಯ ಬಟ್ಟೆಗಳನ್ನು

ಕಳಚಿ ಗಂಡಿನ ಮನೆಯವರು ಕೊಟ್ಟಂತಹ ಹೊಸ ಬಟ್ಟೆಗಳನ್ನು ಧರಿಸಿಕೊಳ್ಳುವಳು. ಇವರ ಮಾಂಗಲ್ಯಸೂಚಕವೆಂದರೆ ಗಂಡಿನ ಮನೆಯವರು ತಂದಿರುವ 'ಘುಘುರಿ' ಮತ್ತು 'ಚೂಡೋ'. ಮುತ್ತೈದೆಯರು ಮುಂಗೂದಲಿಗೆ ಘುಘುರಿ ಹಾಕಿ ಇಳಿಬಿಟ್ಟು, ತೋಳುಗಳಿಗೆ ಚೂಡೋಗಳನ್ನು ತೊಡಿಸುತ್ತಾರೆ. ಹಾಗೆಯೇ ಭುರ್ಯಾ, ಹಾಂಸಲಿ, ಟೀಕಿ, ಕಾನ್ಯಾ ಮುಂತಾದ ತೊಡುಗೆಗಳನ್ನು ತೊಡಿಸುತ್ತಾರೆ. ಇವನ್ನೆಲ್ಲ ಉಟ್ಟು ತೊಟ್ಟ ಮದುಮಗಳು 'ಈ ಒಡವೆಗಳೇ ನನ್ನ ಬಾಳಸಂಗಾತಿ'ಗಳೆಂದು ದುಃಖಿಸುತ್ತಾಳೆ. ಜೊತೆಗೆ ಕುಟುಂಬದ ಸದಸ್ಯರ ಮತ್ತು ಗೆಳತಿಯರ ಗುಣಗಾನ ಮಾಡಿ 'ಢಾವಲೋ' ಮಾಡುತ್ತಾಳೆ.

ಮತ ಪೇರಾವೊ ಯಾಡಿಯೇ
ವೆರಾಣಿ ಘರೇರೋ ವೆರಾಣೊ ಸೋಬೊ
ಮತ ಪೇರಾವೊ ಸಾತಣೊಯೆ
ಹೆಮಾರ ಬಾಳಪಡೇರೋ ಬಾಳಪಡಾವೊ ಸೋಬೋ
ಅಪಣೆ ಘರೇರೋ ಸೋಬೋ ಪೇರಾವತೋ
ಅಪಣಿ ವಾಜಿಯೂ ಅಂಹೀಯಾssss|

ನನಗೆ ಅವರ ಮನೆಯ ಬಳೆ ತೊಡಿಸದಿರಿ, ನಮ್ಮ ಮನೆಯ ಬಳೆಯನ್ನೇ ತೊಡಿಸಿ. ನಾನು ನಿಮ್ಮವಳಾಗಿಯೇ ಉಳಿಯುತ್ತೇನೆಂದು ಬೇಡುತ್ತಾಳೆ. ಆದರೆ ಮುತ್ತೈದೆಯರು ಬಳೆ ತೊಡಿಸಿಬಿಡುತ್ತಾರೆ.

ಢಾವಲೋ ಕಲಿಸುವುದು - ಮಾರನೇ ಮುಂಜಾನೆ ಅನುಭವಿ ಮುತ್ತೈದೆಯರು ಮದುಮಗಳನ್ನು ಹತ್ತಿರ ಕೂರಿಸಿಕೊಂಡು 'ಢಾವಲೋ' ಕಲಿಸುತ್ತಾರೆ.

ಮತ ಬೊಲ ಮುರಗಾರೆ
ಮಾರಿ ನಾಯಕಣಯಾಡಿ ಪಾಳೋ ಮುರುಗ
ತೋನೆ ಸೋನೇರ ಡಾಂಚ್ ಗಲಾದು ಮುರುಗ
ಗಡಿ ಎಕ ಮತ ಬೋಲ ಮುರುಗ ಅಂಹೀಯಾssss|
ರೂಪೇರ ಪಂಕ್ಯಾ ಮಂಡಾದು ಮುರಗ
ಗಡಿ ಏಕ ಮತ ಬೋಲ ಮುರಗ ಅಂಹೀಯಾssss|

ಇಂದೊಂದು ಘಳಿಗೆ ಕೂಗದಿರು ಹುಂಜವೆ, ನನ್ನ ತಾಯಿ ಸಾಕಿರುವ ಪ್ರೀತಿಯ ಹುಂಜವೆ ನಿನಗೆ ಚಿನ್ನದ ಕೊಕ್ಕು ಮಾಡಿಸಿ ಕೊಡುವೆ, ನಿನಗೆ ಬೆಳ್ಳಿಯ ರೆಕ್ಕೆ ಕಟ್ಟಿಸಿಕೊಡುವೆ. ನೀನಿಂದು ಕೂಗಿದರೆ ಬೆಳಗಾಗಿ ನಾನು ಅವರ ಜೊತೆ ಹೋಗುವ ಸಮಯ ಸನ್ನಿಹಿತವಾಗುತ್ತದೆ. ಹಾಗಾಗಿ ನೀನು ಇದೊಂದು ದಿನ ಸುಮ್ಮನಿದ್ದು ಬಿಡು.

ಕೋಳಿ ಕೂಗಿದರೇನೆ ಬೆಳಕಾಗುವುದು ಎಂಬ ಮುಗ್ಧ ಆಲೋಚನೆ ಅವಳ ಈ ಹಾಡಿನಲ್ಲಿದ್ದು, ಇದೊಂದು ದಿನ ಕೋಳಿ ಕೂಗದೆ ಸುಮ್ಮನಿದ್ದರೆ ತಾನು ಅವರೊಂದಿಗೆ

ಹೋಗುವಂತಿಲ್ಲ ಎಂಬ ಅವಳ ಚಿಂತನೆ, ಆಕೆಯ ಮಾನಸಿಕ ತೊಳಲಾಟ ಹಾಗೂ ಸಂಕಟವನ್ನು ಧ್ವನಿಸುತ್ತದೆ.

ವೈಯಕ್ತಿಕವಾದ ವಧುವಿನ ಹಾಡಿನೊಂದಿಗೆ ಅವಳ ಗೆಳತಿಯರು ಹಾಗೂ ಮುತ್ತೈದೆಯರು ಧ್ವನಿಗೂಡಿಸುವುದರಿಂದ ಹಾಡಿನ ಗತ್ತು, ಲಯದ ಪ್ರಭಾವವು ಕೇಳುಗರ ಮೇಲೆ ಮತ್ತಷ್ಟು ಪರಿಣಾಮವನ್ನುಂಟು ಮಾಡುತ್ತದೆ. ಸಮಾರಂಭದಲ್ಲಿ ಪಾಲ್ಗೊಳ್ಳುವವರ ಕಣ್ಣಿನಿಂದ ತನ್ನಿಂತಾನೆ ಕಣ್ಣೀರು ಸುರಿಯುವಂತಾಗುತ್ತದೆ ಅತ್ಯಂತ ಗಂಭೀರವಾದ ದುಃಖದ ಭಾರವು ಅವಳ "ಅಂಹೀಯಾ"ಎಂಬ ನಿಡಿದಾದ ನಿಟ್ಟುಸಿರಿನ ಮೂಲಕ ಸಹಜವಾಗಿ ಹೊರಸೂಸುತ್ತದೆ. ಭಾವಕ್ಕೆ ಅನುಗುಣವಾದ ನಿಡಿದಾದ ನುಡಿಗಳು ಇಲ್ಲಿ ಮೂಡಿಬಂದಿರುವುದು ಸಹಜವಾಗಿದೆ.

ಎಲ್ಲರ ಉಪಹಾರದ ಬಳಿಕ ಮನೆಯ ಜಗಲಿಯಲ್ಲಿ ವಧುವರರನ್ನು ಕೂರಿಸಿ, ಮದುಮಗಳ ಸಹೋದರ ಪಂಚಲೋಹದ ತಂತಿಯಿಂದ ಮದುಮಗಳ ತೋಳಿಗೆ ತೊಡಿಸಿರುವ ಚೂಡೋ (ಬಳೆ)ವನ್ನು ಬಿಗಿದುಕಟ್ಟುತ್ತಾನೆ. ಈ ಸಂದರ್ಭದಲ್ಲೂ ಕೂಡ ಮದುಮಗಳು ತನ್ನ ತಮ್ಮನನ್ನು ಕುರಿತು ಪದಕಟ್ಟಿ ಹಾಡುತ್ತಾಳೆ.

ವಳಿಯಾಜ ತೀಪರೆ
ಸೋನಿಡಾ ಬೇಟ ತಾರ್ ತೀಪಜ ಗಡಿಯೇರ
ತಾರ್ ತೀಪಜ ಲಾಗಿಯೇರ ಅಂಹೀಯಾsss|

ನನ್ನ ಮುದ್ದಿನ ಸಹೋದರನೆ, ನನ್ನ ತೋಳಿನ ಈ ಬಳೆಯನ್ನು ಮೆಲ್ಲನೆ ಬಿಗಿದು ಕಟ್ಟು. ನೀನು ಕಟ್ಟುವಾಗ ಬೆಳ್ಳಿ ಹಾಗೂ ಚಿನ್ನದ ತಂತಿ ನನ್ನ ತೋಳುಗಳಿಗೆ ತಾಕಿ ಗಾಯವಾದೀತು. ಅದರಂತೆ ನನ್ನ ಬದುಕೂ ಕೂಡ ಗಾಯದಂತಾಗಬಾರದಲ್ಲವೇ? ಎಂದು ಸಂಕಟಪಡುತ್ತಾಳೆ.

ಚೂಡೋವನ್ನು ಬಿಗಿದು ಕಟ್ಟಿದ ಮೇಲೆ ಮದುಮಕ್ಕಳಿಗೆ ಹೊಸ ಬಟ್ಟೆ ಉಡಿಸಿ, ಮದುಮಗಳಿಗೆ ಎಲ್ಲ ತೊಡುಗೆಗಳನ್ನು ತೊಡಿಸಿ ಸಿಂಗರಿಸುತ್ತಾರೆ. ಮದುಮಕ್ಕಳನ್ನು ಮನೆಯಿಂದ ಹೊರ ಕರೆತರುವ ಮುನ್ನ ಮದುಮಗಳು ತನ್ನ ತಾಯಿಯ ಮಡಿಲಿಲ್ಲ ತಲೆಯಿಟ್ಟು ಮನೆಯ ಮುಂದೆ ನಿಂತಿರುವ 'ದೇಜುವಾ' (ಎತ್ತು) ವನ್ನು ಉದ್ದೇಶಿಸಿ ಪದಕಟ್ಟಿ ಹಾಡುತ್ತಾಳೆ.

ದೇಜುವಾರೆ ತೋತಿ ಭೋಟೋ
ಮಾರಿ ನಾಯಕಣ ಯಾಡಿರೋ ಗೋದೋ ಅಂಹೀಯಾsss|
ಮೋತಿ ಭೋಟೋ ಕಾಳೀಕುಂಡೇರ ಪಾಣಿ
ತೋತಿ ಭೋಟೋ ದೇಜುವಾ ಅಂಹೀಯಾsss|

ಓ ದೇಜುವಾ (ಬಸವ) ನಿನ್ನಿಂದ ನನ್ನ ತಾಯಿಯ ಮಡಿಲ ಸುಖವನ್ನು ಬಿಡುವಂತಾಯಿತು. ಜೊತೆಗೆ ಕಪ್ಪುನೀರಿನ ಮಡುವು ಸಹ ನನ್ನಿಂದ ದೂರವಾಯಿತು. ನೀನೊಂದು ಘಳಿಗೆ ಮರಳಿ ಹೋಗು ಬಸವನೇ ನೀನಿಲ್ಲೆ ಇದ್ದರೆ ನಾನು ಈ ಎಲ್ಲದ್ದರಿಂದ ದೂರಹೋಗಬೇಕಾಗುತ್ತದೆ.

ಮದುಮಗಳು ಹೀಗೆ ದೇಜುವಾನ ಹೆಸರೇಳಿ ಅಳಲು ಇನ್ನೊಂದು ಪ್ರಮುಖ ಕಾರಣವೆಂದರೆ, ಲಂಬಾಣಿಗಳಲ್ಲಿ ಈ ದೇಜುವಾಗೆ ಪವಿತ್ರ ಸ್ಥಾನವಿದೆ. ಮದುಮಗಳನ್ನು ಗಂಡನ ಮನೆಗೆ ಕಳುಹಿಸಿಕೊಡುವ ಸಂದರ್ಭದಲ್ಲಿ 'ದೇಜುವಾ'(ಎತ್ತು)ನ ಮೇಲೆ ಕೂರಿಸುತ್ತಾರೆ. ಆ ಬಸವ ಸ್ವಲ್ಪ ದೂರ ನಡೆದರೆ ಕನ್ಯೆ ಪವಿತ್ರಳಾಗಿದ್ದಾಳೆಂದು ಎತ್ತು ಅಲ್ಲಿಯೆ ನಿಂತರೆ ಮದುಮಗಳ ಶೀಲವನ್ನೇ ಶಂಕಿಸುವ ಪದ್ಧತಿ ಇವರಲ್ಲಿದೆ. ಹಾಗಾಗಿ ಅವಳ ಶೀಲ ಪಾವಿತ್ರ್ಯವನ್ನು ನಿರ್ಧರಿಸುವ ದೇಜುವಾನ ಮೇಲೆ ಎಲ್ಲಿಲ್ಲದ ಗೌರವ ಇವರಿಗಿದೆ.

ಬಾರ್‌ಕಾಡೇರೋ - ಮದುಮಗಳನ್ನು ಮನೆಯಿಂದ ಹೊರಕರೆತರುವ ಸನ್ನಿವೇಶ ತುಂಬಾ ವೈಶಿಷ್ಟ್ಯ ಪೂರ್ಣವಾದುದು. ಈ ಸಂದರ್ಭದ ಹಾಡುಗಳಲ್ಲಿ ಕರುಣರಸ ಮಡುಗಟ್ಟಿರುತ್ತದೆ. ಮದುಮಗಳನ್ನು ತನ್ನ ತವರುಮನೆಯಿಂದ ಹೊರಕರೆತರುವಾಗ ಬಾಗಿಲುವಾಡಾದ ಮೇಲ್ಭಾಗವನ್ನು ಎರಡು ಕೈಗಳಿಂದ ಹಿಡಿದು ರೋದಿಸುತ್ತಾಳೆ.

ಹವೇಲಿ - ಮದುಮಕ್ಕಳನ್ನು ಬೀಳ್ಕೊಡುವ ಪೂರ್ವದಲ್ಲಿ ತಾಂಡಾದ ಹಿರಿಯ ಮುತ್ತೈದೆಯರೆಲ್ಲ ಸೇರಿಕೊಂಡು ರಾತ್ರಿಯ ಬೆಳದಿಂಗಳಲ್ಲಿ ಸುಮಾರು ನಾಲ್ಕೈದು ದಿವಸಗಳವರೆಗೆ ಅಳುವ ವಿಧಾನವನ್ನು ಅವಳಿಗೆ ಕಲಿಸಿಕೊಡುತ್ತಾರೆ. ಹೆಣ್ಣು, ತನ್ನ ಸಂಬಂಧಿಕರು ಮನೆಗೆ ಬಂದಾಗ ಅವರನ್ನು ಬರಮಾಡಿಕೊಂಡು ತನ್ನ ಹೃದಯದ ಭಾರವನ್ನು ಕಣ್ಣೀರಿನೊಂದಿಗೆ ಯಾವ ರೀತಿಯಲ್ಲಿ ಮಾತಿನ ಮಾಧ್ಯಮದ ಮೂಲಕ ಹೊರಹಾಕಬೇಕೆಂಬುದನ್ನು ಕಲಿಸಿಕೊಡುತ್ತಾರೆ. ಇದಕ್ಕೆ ಅವರು 'ಮೇಳೇರೋ' ಎಂದು ಕರೆಯುತ್ತಾರೆ. ಈ ಹಿಂದೆಯೆ ತಿಳಿಸಿರುವಂತೆ ಮದುವೆಯ ಪ್ರಸಂಗದಲ್ಲಿ ತನ್ನ ತಂದೆ-ತಾಯಿಗಳಿಂದ, ಬಂಧು-ಬಾಂಧವರಿಂದ ಬೀಳ್ಕೊಳ್ಳುವಾಗ ತನ್ನ ದುಃಖವನ್ನು ಹಾಡಿನ ಮುಖಾಂತರ ತೋಡಿಕೊಳ್ಳುತ್ತಾಳೆ. ಇದಕ್ಕೆ ಅವರು 'ಧಾವಲೋ' ಎಂದು ಕರೆಯುತ್ತಾರೆ.

ಅದೇ ರೀತಿಯಲ್ಲಿ ಕನ್ಯೆಯು ತಾಂಡಾದವರನ್ನು ಬೀಳ್ಕೊಂಡು ಹೋಗುವ ಪ್ರಸಂಗದಲ್ಲಿ ತನ್ನ ಸಂಬಂಧಿಕರಿಗೆ ಹಾಗೂ ಸಮಸ್ತ ತಾಂಡಾದವರಿಗೆ ಒಳ್ಳೆಯದಾಗಲೆಂದು ಶುಭ ಹಾರೈಸುವ ಗೀತೆಯನ್ನು 'ಹವೇಲಿ ಗೀತೆ' ಎಂದು ಕರೆಯುತ್ತಾರೆ.

ಈ ಗೀತೆಯನ್ನು ಕೂಡ ಲಂಬಾಣಿ ಮಹಿಳೆಯರು ಕಲಿಸಿಕೊಡುತ್ತಾರೆ.

ಹವೇಲಿಯೇ ಯಾ ಅಂಹೀಯಾssss|
ವೊಟೋ ಘರ ಆವೊಂತೋ
ಮಾರೋ ನಾಯಕ ಬಾಪುರೋ
ನಂಗರಿಯೇ ಹರಿವೇಶ್ ಹರಿಯಾಳಿವೇಶ್
ದೂದುವೇಶ್ ಪೂದುಪಳೇಶ್ ಅಂಹೀಯಾssss|
ಹವೇಲಿಯ ಯಾ ಅಂಹೀಯಾssss|
ಘುಲರೇ ಜೀಂವು ವದೇಸ್
ವಡಲಾಸು ಫೇಲಾಯೇಸ್
ಮಾಕಿ ಜೀಂವು ಲೀಪಾಯಿಸ್ ಅಂಹೀಯಾssss|

ಓ ನನ್ನ ಹಡೆದ ತಾಯಿಯೇ, ನಾವು ಹಿಂತಿರುಗಿ ಬರುವಾಗ ನನ್ನ ತಂದೆಯ ತಾಂಡಾ ಹಸಿರುಹುಲ್ಲಿನಂತೆ ನಿತ್ಯ ಹಸಿರಾಗಿರಲಿ, ಓ ನನ್ನ ಹಡೆದ ತಾಯಿ ನನ್ನಪ್ಪನ ಮನೆತನ ಅತ್ತಿಯ ಗಿಡದಂತೆ ಬೆಳೆದು, ಆಲದ ಬೀಳಲಿನಂತೆ ಪಸರಿಸಿ ನಿತ್ಯ ಹಸಿರಾಗಿರಲಿ, ಏನೇ ಕಷ್ಟ ಬಂದರೂ ನೋಣವು ನುಣುಚಿಕೊಂಡು ಪಾರಾಗುವಂತೆ ಆ ಕಷ್ಟದಿಂದ ಪಾರಾಗಿರಿ. ನಾನು ಇಲ್ಲಿ ಚಂದದ್ದು ತೊಟ್ಟು, ಬೇಕಾದ್ದನ್ನು ಉಂಡೆ. ಆದರೆ ಈಗ ನಾನು ಹೊರಡುವ ಹೊತ್ತಾಯಿತು. ಓ ಬಂಧುಗಳೇ ನನ್ನ ತಾಯಿಯ ಮಡಿಲಿನ ಆಸರೆ ತಪ್ಪಿತು. ನಾನೀಗ ಪರರ ಆಶ್ರಯಕ್ಕೆ ತೆರಳುವ ಹೊತ್ತಾಯಿತು. ಹಾಗಾಗಿ ನಿಮ್ಮೆಲ್ಲರಿಗೂ ಒಳ್ಳೆಯದಾಗಲೆಂದು ಆ ದೇವರಲ್ಲಿ ಪ್ರಾರ್ಥಿಸುವೆ.

ತಂದೆಯ ಮನೆಯನ್ನು ತೊರೆದು ಗಂಡನ ಮನೆಗೆ ಹೊರಟುನಿಂತ ಹೆಣ್ಣೊಂದು ತಾನು ಹುಟ್ಟಿ ಬೆಳೆದ ಮನೆಯ ಸಂಬಂಧ ಕಡಿದು ಹೋಗುವ ಸಂದರ್ಭದಲ್ಲಿ ಎಂಥ ಮಾನಸಿಕ ತೊಳಲಾಟವನ್ನು ಅನುಭವಿಸುತ್ತಾಳೆ. ಆ ಮನೆಯ ಬಗೆಗೆ ಅವಳಿಗಿರುವ ಕಳಕಳಿ ಎಂಥದ್ದು ಎಂಬುದು ಹವೇಲಿ ಗೀತೆಯಲ್ಲಿ ಮಡುಗಟ್ಟಿನಿಂತಿದೆ. ಕುಮಾರಿಯಾದ ನನ್ನ ಮಡಿಲು ಫಲಿಸಲಿ ಎಂದು ಮನೆಯನ್ನು ಕುರಿತು ಪ್ರಾರ್ಥಿಸುವುದು ಅರ್ಥಗರ್ಭಿತವಾಗಿದೆ.

ಆಲದ ಹಾಗೆ ಹಬ್ಬಲಿ ಹವೇಲಿ.* ಹೂವಿನಂತೆ ಇರಲಿ ಹವೇಲಿ ಎಂಬ ಹಾರೈಕೆಯ ಸಾಲುಗಳು 'ಹಾಲುಂಡ ತವರೀಗೆ ಏನೆಂದು ಬಾಡಲಿ, ಹೊಳೆ ದಂಡೇಲಿರುವ ಗರಕೀಯ ಕುಡಿಹಾಂಗ ಹಬ್ಬಾಲಿ ಅವರ ರಸಬಳ್ಳಿ' ಎಂಬ ಕನ್ನಡ ಜನಪದ ತ್ರಿಪದಿಯೊಂದನ್ನು ಅನಾಯಾಸವಾಗಿ ನೆನಪಿಗೆ ತರುತ್ತದೆ ಹಾಗೂ ಅಷ್ಟೇ ಭಾವತೀವ್ರತೆಯನ್ನು ಬಿತ್ತುವ ಸಾಲುಗಳಾಗಿವೆ ಕೂಡ. ಬಳ್ಳಿಬಿಟ್ಟ ಹೂಗಳೆಲ್ಲ ಫಲಿಸುವಂತೆ ತಂದೆಯ ಹವೇಲಿಯು ಬಿಟ್ಟ ಹೂಗಳು ಫಲತುಂಬಲಿ ಎಂಬ ಹಾರೈಕೆ ಅದ್ಭುತ ಭಾವನಾಶಕ್ತಿಗೆ ಹಿಡಿದ ಕೈಗನ್ನಡಿಯಾಗಿದೆ. ಅಲ್ಲದೆ ಈ ಶಾಸ್ತ್ರವು ತವರೂರನ್ನು ತೊರೆದು ಗಂಡನ ಮನೆಗೆ ಹೊರಟು ನಿಂತ ವಧುವಿನ ಮಾನಸಿಕ ತೊಳಲಾಟವನ್ನು ಅತ್ತು ಹಾಡಿನ ಮೂಲಕ ತೋಡಿಕೊಂಡು ಮನಸ್ಸು ಹಗುರ

* 'ಹವೇಲಿ' ಎಂದರೆ 'ಮನೆತನ' ಎಂದರ್ಥ.

ಮಾಡಿಕೊಳ್ಳಲು ಮದುಮಗಳಿಗೆ ಕಲ್ಪಿಸಿಕೊಟ್ಟ ಅವಕಾಶವಾಗಿ ಮನೋವೈಜ್ಞಾನಿಕ ನೆಲೆಯಲ್ಲಿ ಅರ್ಥವತ್ತಾಗಿದೆ. ಈ ಹಿನ್ನಲೆಯಲ್ಲಿ ಈ ಹವೇಲಿ ಶಾಸ್ತ್ರಕ್ಕೆ ಲಂಬಾಣಿ ಜನರಲ್ಲಿ ವಿಶಿಷ್ಟ ಸ್ಥಾನವಿದೆ.

ಈ ರೀತಿಯಾಗಿ ಹೇಳಿಕೊಂಡು ಅಳುತ್ತಿರುವ ವಧುವನ್ನು ಮನೆಯಿಂದ ಹೊರಕರೆತಂದು 'ದೇಜುವಾ' (ಎತ್ತು) ನ ಮೇಲೆ ಸೂರ್ಯನ ಕಡೆ ಮುಖ ಮಾಡಿ ಕೂರಿಸುತ್ತಾರೆ. ಎತ್ತಿನ ಮೇಲೆ ಕುಳಿತ ಮದುಮಗಳು ಮತ್ತೆ ಹವೇಲಿ ಮಾಡುತ್ತಾಳೆ.

ದೇಜುವಾರೆ ಹರಿವೇಶ್ ಹರಿಯಾಳಿವೇಶ್
ಮಾರೋ ಗೇನಿ ವಿರಣಾರೆ ನಂಗರಿ
ಹರಿವೇಶ್ ಹರಿಯಾಳಿವೇಶ್
ದೂದುವೇಶ್ ಊದೂಪಳೇಶ್ ಅಂಹೀಯಾsss|
ಸಂಬ್ರಿಜೀಂವು ಸೇರಜಾಯೇಸ್
ಒಡೇಲಾ ಜೀಂವು ವದೇಸ್ ಅಂಹೀಯಾsss|

ಓ ಬಸವನೇ ನನ್ನ ಅಣ್ಮ್ತತಮ್ಮಂದಿರ ಈ ತಾಂಡ ಎಂದೆಂದಿಗೂ ಹಸಿರಸಿರಾಗಿರಲಿ. ಹಾಲು ಉಕ್ಕುವ ಹಾಗೆ ಉಕ್ಕಲಿ, ಎಲ್ಲವು ತುಂಬಿದ ಹಾಗೆ ಇರಲಿ. ಮೆದೆಯ ಹಾಗೆ ಎಲ್ಲವು ಸೇರಿ ಒಟ್ಟಾಗಿರಲಿ ಆಲದ ಬೀಳಲಿನ ಹಾಗೆ ಪಸರಿಸಿ ಹಬ್ಬಲಿ ಎಂದು ಶುಭ ಹಾರೈಸುತ್ತಾಳೆ. ಲಂಬಾಣಿ ಹೆಣ್ಣು ಮಗಳು ತನ್ನ ಜೀವಿತಾವಧಿಯಲ್ಲಿ ಒಂದು ಸಲ ಮಾತ್ರ ಈ 'ಹವೇಲಿ' ಮಾಡುವ ಅವಕಾಶವನ್ನು ಹೊಂದಿರುತ್ತಾಳೆ. ಮರುಮದುವೆ ಇಲ್ಲವೆ ಕೂಡಾವಳಿ ಮದುವೆಯಾದಲ್ಲಿ ಹವೇಲಿ ಮಾಡುವ ಅವಕಾಶವಿರುವುದಿಲ್ಲ. ಲಂಬಾಣಿಗರು ತಮ್ಮ ಮಗಳು ಹವೇಲಿ ಮಾಡುವುದು ಪ್ರತಿಷ್ಠೆಯ ಸಂಕೇತವೆಂದು ಭಾವಿಸುತ್ತಾರೆ.

ಮದುಮಗಳನ್ನು ದೇಜುವಾನಿಂದ ಕೆಳಗಿಳಿಸಿ ಮನೆಯ ಮುಂದೆ ಸೂರ್ಯ ಉದಯಿಸುವ ಕಡೆ ಮುಖಮಾಡಿ ಕೂರಿಸುತ್ತಾರೆ. ಮದುಮಗಳ ಬೆನ್ನಿಗೆ ಮದುಮಗನ ಬೆನ್ನು ತಾಕುವಂತೆ ಕೂರಿಸಿ ಅತ್ತೆ, ಅಳಿಯನ ಕೊರಳು ತಬ್ಬಿ ಅಳುತ್ತಾಳೆ. 'ನನ್ನ ಮಗಳನ್ನು ಚೆನ್ನಾಗಿ ಸಾಕಿ ಸಲುಹಿ ಜೋಪಾನವಾಗಿ ನೋಡಿಕೊಳ್ಳಿ' ಎಂದು ಅತ್ತೆ, ಅಳಿಯನಲ್ಲಿ ಕೇಳಿಕೊಳ್ಳುವ ಈ ಪದ ಹೆಣ್ಣು ಹೆತ್ತವರ ಎದೆಯನ್ನು ಬಿರಿಯುವಂತೆ ಮಾಡುತ್ತದೆ.

ಮದುಮಗಳನ್ನು ಗಂಡನ ಮನೆಗೆ ಕಳುಹಿಸಿಕೊಡುವ ಸಂದರ್ಭ ಹತ್ತಿರವಾಗುತ್ತಿದ್ದಂತೆ ಅವಳ ತಾಯಿ ದುಃಖ ತಡೆಯಲಾರದೆ ತನ್ನ ತೋಳುಗಳಿಂದ ಮಗಳ ಕೊರಳು ತಬ್ಬಿ ದುಃಖಿಸುತ್ತಾಳೆ.

ಕೋವಲಬೇಟಿ ತಿರಣಾಮಲೇರಿ ಮಾರಿ ಕೋವಲಬೇಟಿ
ಕಂಬಲೇರ ಫುಲೇಡಾ ಕರನ ಪಾಳಿ
ಸೂರತೇರ ಫುಲೇಡಾ ಕರನ ಪಾಳಿ ಅಂಹೀಯಾऽऽऽ।
ಮಾ ವೇರಾಣೇರ್ ಪೇಟಿ ಠಾಲೋ, ಘರಿ ಠಾಲೋ
ಚಲಕೋಡಿ ವಡಜೀಂವು
ವಡೇರ್ ವೇಳಾವೇಗೋ ಅಂಹೀಯಾऽऽऽ।

ನನ್ನ ಮುದ್ದಿನ ಕೋಗಿಲೆಯೇ ನಿನ್ನನ್ನು ಅಂದಚಂದದ ಹೂವಿನ ಹಾಗೆ ಸಾಕಿ ಸಲುವಿದೆ. ಆದರೀಗ ನನ್ನ ಮನ-ಮನೆಯೆಲ್ಲಾ ಖಾಲಿಖಾಲಿ ಎನಿಸುತ್ತಿದೆ. ನೀನು ಹಕ್ಕಿಯ ಹಾಗೆ ಹಾರಿಹೋಗುವ ಕಾಲ ಸನ್ನಿಹಿತವಾಗುತ್ತಿದೆ.

ತಾಯಿಯ ಕಣ್ಣೀರನ್ನು ನೋಡಲಾರದೆ ಮದುಮಗಳು ತಾಯಿಯ ಕೊರಳು ತಬ್ಬಿ ಅಳುತ್ತಾಳೆ.

ಮಾರ ನಾಯಕಣಯಾಡಿ ನವು ಮೀನಾ ಸರಡೋಯಿ
ತೀನ ಮೀನಾ ಖಾರೋ ಫೀಕೋ ಖಾದಿಯೇ
ವರ್ಷೋ ಪಾಲಣೋ ಹೀಂಚೆಯೇ ಅಂಹೀಯಾऽऽऽ।
ತಾರ್ ಕೋವಲ ಬೇಟಿರ್
ಲಾವಾ ಲಸ್ಕರ್ ಲಾದೇರ್ ವೇಳಾವೇಗೋ ಅಂಹೀಯಾऽऽऽ।

ಪ್ರಸ್ತುತ ಈ ಗೀತೆಗಳಲ್ಲಿ ಲಂಬಾಣಿ ಸ್ತ್ರೀಯ ಆರ್ತತೆ ಹಾಗೂ ಹೃದಯ ವೈಶಾಲ್ಯತೆ ತೆರೆದುಕೊಂಡಿದೆ. ತಮ್ಮನ್ನು ಬೀಳ್ಕೊಳ್ಳದಿರಲು ತನ್ನ ತಂದೆ-ತಾಯಿ, ಬಂಧು-ಬಳಗದವರಿಗೆಲ್ಲ ಪರಿಪರಿಯಾಗಿ ಸೆರಗೊಡ್ಡಿ ಬೇಡಿಕೊಳ್ಳುತ್ತಾಳೆ. ಆತ್ಮ ನಿವೇದನೆಯನ್ನು ಮಾಡಿಕೊಳ್ಳುತ್ತಾಳೆ. ಮುಂದುವರಿದು ಅಗಲಿಕೆ ಅನಿವಾರ್ಯವೆಂದು ಅರಿತು ತನಗೆ ಜೀವಕೊಟ್ಟು ಸಾಕಿ ಸಲಹಿದವರಿಗೆ ಹಾಗೂ ಇಡೀ ತಾಂಡಾಕ್ಕೆ ಶುಭವಾಗಲಿ, ಯಾವತ್ತೂ ಸಂಪತ್ತು ಸಮೃದ್ಧಿ ತುಂಬಿ ತುಳುಕುವಂತಾಗಲೆಂದು ಹಾರೈಸುತ್ತಾಳೆ.

ತವರಿನವರು ಕೊಟ್ಟ ಎತ್ತಿನ ಮೇಲೆ ನಿಂತು, ತೋಳುಗಳನ್ನು ಮೇಲೆತ್ತಿ ಎರಡೂ ಕೈಗಳನ್ನು ತಲೆಯ ಮೇಲಿಟ್ಟು ಪರಿಪರಿಯಿಂದ ಅಳುತ್ತಾ ಹಾಡಿಕೊಂಡು ತನ್ನ ತಾಂಡಾದ ಸಮಸ್ತ ಜನರಿಗೂ ಶುಭಕೋರುವ ಪ್ರಸ್ತುತ ಗೀತೆಯು ಎಂಥ ಕಠಿಣ ಹೃದಯವನ್ನು ಕರಗಿಸಬಲ್ಲುದು. ಕರುಣರಸದ ಹೊನಲಾಗಿರುವ ಈ ಗೀತೆಯು ಲಂಬಾಣಿ ಸ್ತ್ರೀಯ ಹೃದಯ ವೈಶಾಲ್ಯತೆ ಹಾಗೂ ವೇದನೆಗೆ ಪ್ರತಿಮೆಯಾಗಿದೆ.

ಭಾವನೆಗಳ ಸಹಜವಾದ ಅಭಿವ್ಯಕ್ತಿಯೇ ಉತ್ಕೃಷ್ಟವಾದ ಕಾವ್ಯವಾಗಬಲ್ಲುದೆಂಬುದಕ್ಕೆ ಈ 'ಹವೇಲಿ ಗೀತೆ'ಯು ತೋರುಬೆರಳಿನಂತಿದೆ. ಲಂಬಾಣಿ ಸ್ತ್ರೀಯ ಹೃದಯದ ವೇದನೆಯು

ಶಬ್ದರೂಪದ ಹರಳುಗಳಾಗಿ ಸಿಡಿದು ಬಂದಿದೆ. ನಿಡಿದಾದ ಭಾವಗಳು ಸಹಜವಾಗಿಯೇ ನಿಡಿದಾದ ಲಯವನ್ನು ಪಡೆದುಕೊಂಡಿದೆ. ಸಹೋದರ, ತಂದೆ, ತಾಯಿ ಹಾಗೂ ಗೆಳತಿಯರ ವರ್ಣನೆಗಳು ಸ್ತ್ರೀಯ ಕೋಮಲವಾದ ಹೃದಯ ಹಾಗೂ ಪ್ರೇಮಗಳಿಗೆ ಕೋಡನ್ನು ಮೂಡಿಸಿವೆ. ಕರುಣರಸದ ಮಡುವಾಗಿರುವ ಈ ಸನ್ನಿವೇಶವು ಶಕುಂತಲೆಯು ಕಣ್ವ ಋಷಿಯನ್ನು ಅಗಲಿಹೋಗುವಾಗಿನ ಪ್ರಸಂಗವನ್ನು ನೆನಪಿಗೆ ತರುತ್ತದೆ.

ಮದುಮಕ್ಕಳನ್ನು ಬೀಳ್ಕೊಡುವುದು :- ತಾಂಡಾದ ಹಿರಿಯರಿಗೆಲ್ಲ ನಮಸ್ಕರಿಸಿ ಆಶೀರ್ವಾದ ಪಡೆದು ದಿಬ್ಬಣ ಗಂಡಿನ ಮನೆಗೆ ಹೊರಡುತ್ತದೆ. ತಾಂಡಾದ ಹಿರಿಕಿರಿಯರೆಲ್ಲ ಅವರನ್ನು ಬೀಳ್ಕೊಡಲು ಬರುತ್ತಾರೆ. ಅವಳ ದುಃಖ ಭರಿತವಾದ 'ಹವೇಲಿ'ಯನ್ನು ಕೇಳಿ ಎಲ್ಲರ ಕಣ್ಣಲ್ಲೂ ನೀರೂರುತ್ತದೆ. ಆಗ ವಧುವು ಪ್ರತಿಯೊಬ್ಬರ ಕೊರಳುತಬ್ಬಿ ಅಳುತ್ತಾಳೆ. ಕೊನೆಗೆ ಹಿರಿಯರು ಹಿತೋಪದೇಶಗಳನ್ನು ಹೇಳಿ ಬೀಳ್ಕೊಡುತ್ತಾರೆ. ಆ ಉಪದೇಶಕ್ಕೆ ಪ್ರತಿಯಾಗಿ ವಧುವು 'ಢಾವಲೋ' ಮಾಡುತ್ತಾಳೆ.

"ತಮಾರೆ ಸೀಕೆ ವಾಡೀನ ಅಂಟೆಘಾಲು
ಗಾಂಟೆ ಘಾಲು, ಸೂಯಿವೇನ್ ಮಾಯಿಗೀತೊ
ಕೀಡಿವೇನ್ ಚಾಲಿಯು ತಮಾರಿ
ನಂಗರೀನ ಒಳಮಾಕೋನಿಲಾವು ಬಾಪು ಅಂಹೀಯಾ|
ಸಾಸು ಸಸರೇನ ಮಾ ಬಾಪ ಕಳಿಯು
ಜೇಟ ಜಟಾಣಿನ, ದೇವರ ನಣದೇನ್
ಭಾಯಿ-ಬೇನ ಕರನ ಚಾಲಿಯು
ತಮಾರಿ ನಂಗರಿರ ನಾಮ್ ಲಾಯು ಬಾಪು".

(ಪಿ.ಕೆ.ಖಂಡೋಬಾ : ೧೯೯೧; ೧೪೩)

ನಿಮ್ಮೆಲ್ಲರ ಹಿತೋಪದೇಶಗಳನ್ನು ನಾನು ನನ್ನ ಜೀವನದುದ್ದಕ್ಕೂ ಮರೆಯಲಾರೆ. ಎಂಥ ಕಷ್ಟ ಕಾಲದಲ್ಲಿಯೂ ನಾನು ಎಲ್ಲರೊಡನೆ ನಮ್ರತೆಯಿಂದ ನಡೆದುಕೊಳ್ಳುವೆ. ಬಟ್ಟೆ ಹೊಲಿಯುವಾಗ ಸೂಜಿ ಸುಲಭವಾಗಿ ಪ್ರವೇಶಿಸಿ ಪಾರಾಗುವಂತೆ ಗಂಡನ ಮನೆಯಲ್ಲಿ ಸುಲಭವಾಗಿ ಕೆಲಸವನ್ನು ನಿರ್ವಹಿಸಿ ಪಾರಾಗುವೆ. ಒಟ್ಟಿನಲ್ಲಿ ನಿಮಗೂ ಈ ತಾಂಡಾಕ್ಕೂ ನಾನೆಂದಿಗೂ ಅಪಕೀರ್ತಿಯನ್ನು ತರಲಾರೆ.

ಅತ್ತೆ ಮಾವಂದಿರನ್ನು ತಂದೆ-ತಾಯಿಯಂತೆ ನೋಡಿಕೊಳ್ಳುವೆ. ಗಂಡನ ಅಣ್ಣತಮ್ಮಂದಿರನ್ನು ಹಾಗೂ ಅಕ್ಕ ತಂಗಿಯರನ್ನು, ನನ್ನ ಅಣ್ಣ-ತಮ್ಮ, ಅಕ್ಕ -ತಂಗಿಯರಂತೆ ಭಾವಿಸುವೆ. ಏನೇ ಆದರೂ ಈ ನಿಮ್ಮ ತಾಂಡಾಕ್ಕೆ ಯಾವುದೇ ರೀತಿಯ ಚ್ಯುತಿ ಬರದಂತೆ ಕೀರ್ತಿ ತರುವೆನೆಂದು ಪ್ರತಿಜ್ಞೆಗೈದು ಎಲ್ಲರನ್ನು ಬೀಳ್ಕೊಂಡು ಗಂಡನ ಮನೆ ಪ್ರವೇಶಿಸುತ್ತಾಳೆ.

ಹೀಗೆ ಲಂಬಾಣಿಗರ ಬದುಕಿನಲ್ಲಿ ಅಳುವುದು ಒಂದು ವಿಶೇಷ ಸಂಪ್ರದಾಯವಾಗಿ ಅವರಲ್ಲಿ ಉಳಿದುಬಂದಿದೆ. ಅವರ ಈ ಸಂಪ್ರದಾಯವು ಸಂಬಂಧದ ಗಾಢತೆಯನ್ನು, ಅನುಭವದ ತೀವ್ರತೆಯನ್ನು ಸಾಂಸ್ಕೃತಿಕ ಅನನ್ಯತೆಯನ್ನು ತೋರಿಸಿಕೊಡುತ್ತದೆ. ಈ ಬಗೆಯ ಹೃದಯಸ್ಪರ್ಶಿಯಾದ ಸಂಪ್ರದಾಯವು ಅವರಲ್ಲಿ ಇಂದಿಗೂ ಎಲ್ಲೆಡೆಯೂ ಕಂಡುಬರುತ್ತದೆ. ಹಾಗಾಗಿ ಈ ಸಂಪ್ರದಾಯವು ಸಂಸ್ಕೃತಿಯ ಪ್ರಾದಿಮರೂಪವನ್ನು ಧ್ವನಿಸುತ್ತದೆ.

ಪರಾಮರ್ಶನ ಗ್ರಂಥಗಳು

೧. ಖಂಡೋಬಾ ಪಿ. ಕೆ - 'ಕರ್ನಾಟಕದ ಲಂಬಾಣಿಗಳು; ಒಂದು ಸಾಂಸ್ಕೃತಿಕ ಅಧ್ಯಯನ', ದಿ ತೇಜಸಿಂಗ್ ರಾಠೋಡ ಮೆಮೋರಿಯಲ್ ಟ್ರಸ್ಟ್, ಗುಲ್ಬರ್ಗಾ. ೧೯೯೧

೨. ನಾಯಕ ಡಿ. ಬಿ. - 'ಲಂಬಾಣಿ ಜನಪದ ಸಾಹಿತ್ಯ', ಬಂಜಾರಾ ಪ್ರಕಾಶನ, ಗುಲ್ಬರ್ಗಾ. ೨೦೦೦

೩. ಮಹಾದೇವಿಬಾಯಿ - 'ಲಂಬಾಣಿ ಜನಪದ ಕಲಾವಿದೆ : ಸಕ್ರಿಬಾಯಿ ಆತ್ಮಕಥೆ', ಐಶ್ವರ್ಯ ಪ್ರಕಾಶನ, ಮೈಸೂರು. ೨೦೦೨

೪. ಸಣ್ಣರಾಮ - 'ಲಂಬಾಣಿ-ಸಂಸ್ಕೃತಿ', ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು. ೧೯೯೯

೫. ಹರಿಲಾಲ್ ಪವಾರ್ - 'ಲಂಬಾಣಿಗರಲ್ಲಿ ಮದುವೆ ಸಂಪ್ರದಾಯಗಳು' (ಉಪನ್ಯಾಸ ಗ್ರಂಥಮಾಲೆ), ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೯೬

ವ್ಯಾಸರಾಜರು ಮತ್ತು ವಾದಿರಾಜರು

ಪ್ರೊ. ವಿ. ಎನ್. ಶೇಷಗಿರಿರಾವ್

ಶ್ರೀ ವ್ಯಾಸರಾಜರು ಮಹಾಶಾಸ್ತ್ರಜ್ಞರು, ತಾತ್ವಿಕ ಕ್ಷೇತ್ರದಲ್ಲಿ ಅವರದು ಎತ್ತಿದ ಕೈ. 'ನ್ಯಾಯಾಮೃತ' 'ತರ್ಕ ತಾಂಡವ' 'ತಾತ್ಪರ್ಯ ಚಂದ್ರಿಕಾ' ಮುಂತಾದ ತಾತ್ವಿಕ ಉದ್ಗ್ರಂಥಗಳನ್ನು ಅವರು ಬರೆದು ಭಗವಂತನ ಸರ್ವೋತ್ಕೃಷ್ಟತೆಯನ್ನು, ಸರ್ವೋತ್ತಮತ್ವವನ್ನು ಹಾಗೂ ಮಹಿಮಾತಿಶಯವನ್ನು ಎತ್ತಿ ತೋರಿಸಿದ್ದಾರೆ. ತಮ್ಮ ಗುರುಗಳಾದ ಶ್ರೀಪಾದ ರಾಜರಿಂದ ಧರ್ಮಶಾಸ್ತ್ರಗಳ ಜ್ಞಾನವನ್ನು ಅವರು ಪಡೆದುಕೊಂಡರು. ಪಂಡಿತರಿಗಾಗಿ ಸಂಸ್ಕೃತದಲ್ಲಿ ಶ್ರೇಷ್ಠಗ್ರಂಥಗಳನ್ನು ರಚಿಸಿದ ವ್ಯಾಸರಾಜರು ಪಾಮರರ ಕಡೆಗೂ ತಮ್ಮ ಗಮನವನ್ನು ನೀಡಿದ್ದಾರೆ. ಅವರು ಸ್ವಯಂ ಕೀರ್ತನಕಾರರು, ಹೇರಳವಾಗಿ ಕೀರ್ತನೆಗಳನ್ನು ರಚಿಸಿದ್ದಾರೆ. ಅಷ್ಟೇ ಅಲ್ಲ ದಾಸಪಂಥವನ್ನೇ ಅವರು ನೂತನವಾಗಿ ರೂಪಿಸಿದರು. ಪುರಂದರದಾಸರು, ಕನಕದಾಸರು, ವಾದಿರಾಜರು ಮುಂತಾದ ಶಿಷ್ಯರಿಗೆ ಜ್ಞಾನೋಪದೇಶ ಮಾಡಿದ ಗುರುಗಳು ಅವರು. ಶಿಷ್ಯರೂ ದಾಸಪಂಥದಲ್ಲಿ ಸೇವೆಮಾಡಲು ಪ್ರೋತ್ಸಾಹಿಸಿ ಹುರಿದುಂಬಿಸಿದರು. ಜ್ಞಾನ, ಭಕ್ತಿ, ವೈರಾಗ್ಯಗಳ ಶ್ರೇಷ್ಠತೆಯನ್ನು ಸರ್ವರೂ ಮನಗಾಣುವಂತೆ ತಮ್ಮ ಕೀರ್ತನೆಗಳಲ್ಲಿ ಅವರು ಶ್ರಮಿಸಿದ್ದಾರೆ, ಅಷ್ಟೇ ಅಲ್ಲದೆ ತಮ್ಮ ಶಿಷ್ಯರೂ ಅಗಾಧ ಕೀರ್ತನೆಗಳನ್ನು ರಚಿಸುವಂತೆ ಪ್ರೇರೇಪಿಸಿ ಮಾರ್ಗದರ್ಶಿಗಳಾಗಿ ಮುಂದೆ ನಿಂತು. ದಾಸ ಸಾಹಿತ್ಯದ ಅಭಿವೃದ್ಧಿಗೆ ಅಪಾರವಾದ ಸೇವೆ ಸಲ್ಲಿಸಿದ್ದಾರೆ. ಶ್ರೀ ವ್ಯಾಸರಾಜರದು ಪ್ರಸನ್ನ ವಾಣಿ; ಅವರ ಲೋಕಾನುಭವ ಅಸದೃಶವಾದದ್ದು. ವಿಜಯನಗರದ ತುಳುವ ರಾಜವಂಶದ ನರಸನಾಯಕ, ವೀರ ನರಸಿಂಹ, ಕೃಷ್ಣದೇವರಾಯ, ಅಚ್ಯುತರಾಯ ದೊರೆಗಳಿಗೆ ವ್ಯಾಸರಾಜರು ಕುಲಗುರುಗಳಾಗಿದ್ದರು. ಅವರ ಪ್ರಭಾವ ನೆರೆಯ ಆಂಧ್ರದೇಶದಲ್ಲಿಯೂ ಪಸರಿಸಿತು. ವೈಷ್ಣವ ಧರ್ಮದ ವಿವರಗಳನ್ನು ಶ್ರೀ ವ್ಯಾಸರಾಜರಿಂದ ಪಡೆದುದು ತಮ್ಮ ಸೌಭಾಗ್ಯವೆಂದು ಬಂಗಾಳದ ವೈಷ್ಣವಾಗ್ರಣ್ಯ ಶ್ರೀ ಚೈತನ್ಯ ಮಹಾಪ್ರಭು ಸಂತಸಪಟ್ಟಿದ್ದಾರೆ. ವಲ್ಲಭರ ಪುಷ್ಟಿ ಭಕ್ತಿ ಮಾರ್ಗವೂ ವ್ಯಾಸರಾಜರ ವೈಷ್ಣವ ಭಕ್ತಿಮಾರ್ಗದ ಬೋಧನೆಗಳಿಂದ ಪ್ರೇರಿತಗೊಂಡಿದೆ.

ಮಾನವರು ಆತ್ಮಶೋಧನೆ ಮಾಡಿಕೊಳ್ಳಬೇಕು. ಸತ್ಕಾರ್ಯಕ್ಕಾಗಿ ಪಂಚೇಂದ್ರಿಯಗಳ ಚಂಚಲ ಸ್ವಭಾವವನ್ನು ಮೆಟ್ಟಿ ನಿಲ್ಲಬೇಕು. "ಛೀ ಛೀ ಮನವೆ ನಾಚದ ತನುವೆ, ನೀಚ ವೃತ್ತಿಯ ಬಿಟ್ಟು ನೆನೆಕಂಡ್ಯ ಹರಿಯ" ಎಂದು ವ್ಯಾಸರಾಜರು ಉಪದೇಶಿಸುತ್ತಾರೆ. "ನನ್ನ ಮನ ಕಂಡಕಡೆಗೆ ಎರಗುತಿದೆ, ನಿನ್ನಲಿ ನಿಲಿಸಿ ಕಾಯೋ" ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತಾರೆ.

ವ್ಯಾಸರಾಜರ ಕೃತಿಗಳ ಸಂದೇಶವೇ ಭಕ್ತಿ ಸುಧಾರಸದ ಹೆಚ್ಚುಗಾರಿಕೆ ಹಾಗೂ ಅಪರೋಕ್ಷ ಜ್ಞಾನ. ಅವರು ಹೇಳುತ್ತಾರೆ. "ಏನು ಸುಖವೋ ಎಂಥಾ ಸುಖವೋ ಹರಿಯ, ಧ್ಯಾನ ಮಾಡುವವರ ಸಂಗ' ಎಂದು. "ಅಂತರಂಗದಲ್ಲಿ ಹರಿಯ ಕಾಣದವ ಹುಟ್ಟು ಕುರುಡನೋ" ಎಂದು ಎಚ್ಚರಿಸುತ್ತಾರೆ. "ಎಂದೆಂದು ಎನ್ನ ಮನದಿಂದ ಅಗಲದಿರೊ ನಂದ ನಂದನನೆ ಆನಂದ ಮೂರತಿಯೆ" ಎಂದು ಹೃದಯಸ್ಪರ್ಶಿಯಾಗಿ ನುಡಿಯುತ್ತಾರೆ. ಪರಮಾತ್ಮ ಪತಿತ ಪಾವನ ಎಂದು ಕೊಂಡಾಡುತ್ತಾರೆ.

ಶ್ರೀಕೃಷ್ಣ, ಸಿರಿಕೃಷ್ಣ, ಕೃಷ್ಣ ಎಂಬ ಅಂಕಿತದಿಂದ ಕೊನೆಗೊಳ್ಳುವ ವ್ಯಾಸರಾಜರ ಕೀರ್ತನೆಗಳು ನೀತಿಬೋಧೆಯನ್ನು ಹೊರಸೂಸುತ್ತವೆ: "ನೀರಿಲ್ಲದ ಬಾವಿ ಊರಿಲ್ಲದ ಮಠವು ಇಲ್ಲದಿದ್ದರೆ ಏನು?" "ನೆರಳಿಲ್ಲದ ಮರ, ಫಲವಿಲ್ಲದ ಲತೆ ಇಲ್ಲದಿದ್ದರೆ ಏನು?" "ಧನವಿಲ್ಲದ ದಾತ, ದಯವಿಲ್ಲದ ನಾಥ ಇಲ್ಲದಿದ್ದರೆ ಏನು?" "ಮನಸಿಲ್ಲದ ಶಕುತಿ, ಭಯವಿಲ್ಲದ ಭಕುತಿ ಇಲ್ಲದಿದ್ದರೆ ಏನು?" ಎಂದು ಹೇಳಿ, "ನರಹರಿ ಮುಕುಂದ ಶ್ರೀಕೃಷ್ಣ ಎನ್ನದ ನರರಿದ್ದು ಫಲವೇನು, ಇಲ್ಲದಿದ್ದರೆ ಏನು, ಎಂದು ಮಾರ್ಮಿಕವಾಗಿ ನುಡಿಯುತ್ತಾರೆ. "ಸುರಧೇನು ಇರುವಾಗ ಸೂಕರ ಮೊಲೆಹಾಲು ಕರೆದು ಕುಡಿಯುವುದು ಏಕೆ?" ಆನೆ, ರಥ ಕುದುರೆ ಇರಲು, ಅವನ್ನು ಬಿಟ್ಟು ನೆಲಕ್ಕೆ ಕೆಡಹುವ ಕತ್ತೆಯನು ಏರಬೇಡಿ ಎಂದು ವ್ಯಾಸರಾಜರು ಅರ್ಥವತ್ತಾಗಿ ನುಡಿದಿದ್ದಾರೆ. ಅವರ ರಸವತ್ತಾದ ಉದ್ಗಾರಗಳು ಮನಮೆಚ್ಚುವಂಥಾದ್ದಾಗಿವೆ.

ಶ್ರೀ ವ್ಯಾಸರಾಜರ ವ್ಯಕ್ತಿತ್ವ ಅಸಾಧಾರಣವಾದುದು. ಅವರು ವಿದ್ಯಾಸಿಂಹಾಸನಾಧಿಪತಿಗಳು, ಕರ್ನಾಟಕ ಸಾಮ್ರಾಜ್ಯ ರತ್ನ ಸಿಂಹಾಸನಾಧೀಶ್ವರರು. ಶ್ರೀ ಬ್ರಹ್ಮಣ್ಯ ತೀರ್ಥರ ಕೃಪಾಶೀರ್ವಾದದ ಬಲ ಅವರಿಗಿತ್ತು. ವಿದ್ಯಾಪಕ್ಷಪಾತಿಗಳಾಗಿ ವಿದ್ವಜ್ಜನಕಲ್ಪತರುವಾಗಿ ಅವರು ಶೋಭಿಸಿದರು. ಜ್ಞಾನ ಭಕ್ತಿ ವೈರಾಗ್ಯಗಳಿಗೆ ಮತ್ತೊಂದು ಹೆಸರೇ ವ್ಯಾಸರಾಜರು. ಸಜ್ಜನ ಸಂಗದ ಅವಶ್ಯಕತೆಯನ್ನು ಅವರು ಒತ್ತಿ ಹೇಳಿದರು. "ಸಂಗವಾಗಲಿ, ಸಾಧುಸಂಗವಾಗಲಿ, ಸಂಗದಿಂದ ಲಿಂಗದೇಹ ಭಂಗವಾಗಲಿ" ಎಂದು ಉಪದೇಶಿಸುತ್ತಾರೆ. ಏರಿದ ಧ್ವನಿಯಲ್ಲಿ ಅವರು ಹೇಳುತ್ತಾರೆ: 'ದುರಿತ ಭಯವೆ, ಶ್ರೀ ಕೃಷ್ಣನ ದಾಸರ ಸಂಗವಿರಲು'

ಶ್ರೀ ವಾದಿರಾಜರು ಆಧ್ಯಾತ್ಮವಿದ್ಯೆಯ ಪಾಂಡಿತ್ಯಶಾಲಿ; ಧರ್ಮಶಾಸ್ತ್ರ ವೇದಶಾಸ್ತ್ರಗಳಲ್ಲಿ ಪಾರಂಗತರು. ಉಭಯ ಭಾಷಾ ಪಂಡಿತರು, ಸಂಸ್ಕೃತದಲ್ಲಿ 'ಯುಕ್ತಿಮಲ್ಲಿಕಾ' ಎಂಬ ಶಾಸ್ತ್ರಗ್ರಂಥವನ್ನು ರಚಿಸಿದ್ದಾರೆ. ವ್ಯಾಸರಾಜರ ಶಿಷ್ಯರಾದ ವಾದಿರಾಜರ ತಾಯಿ ಭಾಷೆ, ತುಳು ಹಾಗೂ ಕನ್ನಡದ ಮೇಲಿನ ಅಭಿಮಾನದಿಂದ, ಕೀರ್ತನೆಗಳನ್ನೂ ರಚಿಸಿ ದಾಸಪಂಥದ ಮತ್ತೊಬ್ಬ ಚಿತ್ತಾಕರ್ಷಕ ಯತಿಗಳಾಗಿದ್ದಾರೆ. ಅವರು ಕವಿಯೂ ಹೌದು. "ವೈಕುಂಠ ವರ್ಣನೆ" "ರುಕ್ಮಿಣೀಶ ವಿಜಯ" "ಸರಸ ಭಾರತೀ ವಿಲಾಸ" ಅವರು ಬರೆದ ಮೂರು ರಸಗಟ್ಟಿಗಳಾಗಿವೆ.

ಅವರ "ಶ್ರೀ ಲಕ್ಷ್ಮೀ ಶೋಭಾನೆ ಹಾಡು" ಜನಜನಿತವಾದದು. ಶಾಸ್ತ್ರ ಹಾಗೂ ಸಾಹಿತ್ಯಗಳ ಅಪೂರ್ವ ಸಂಗಮವಾಗಿದ್ದರು ಶ್ರೀ ವಾದಿರಾಜರು.

ಶ್ರೀ ವಾದಿರಾಜರು ಧಾರ್ಮಿಕಕಾರ್ಯ ದುರೀಣರು. ಅವರು ಅನೇಕ ಸಾಮಾಜಿಕ ಹಾಗೂ ಧಾರ್ಮಿಕ ಕಾರ್ಯಗಳನ್ನು ಮಾಡಿದ್ದಾರೆ. ಧರ್ಮಸ್ಥಳದಲ್ಲಿ ಮಂಜುನಾಥ ದೇವರನ್ನು ಪ್ರತಿಷ್ಠಾಪಿಸಿದವರು ಅವರೇ. ಉಡುಪಿಯ ಶ್ರೀಕೃಷ್ಣನಿಗೆ ಸಂಬಂಧಿಸಿದ ಪೂಜಾಕೈಂಕರ್ಯ ಪದ್ಧತಿಯಾದ ಪರ್ಯಾಯವನ್ನು ಪ್ರಾರಂಭಿಸಿದ ಕೀರ್ತಿ ಅವರಿಗೆ ಸಲ್ಲಬೇಕು. ಹಯವದನ ಮೂರುತಿ ಅವರ ಇಷ್ಟದೇವತೆ; 'ಹಯವದನ' ಅವರ ಅಂಕಿತವಾಗಿದೆ. ಶ್ರೀ ವಾದಿರಾಜರು ಧರ್ಮಸಮನ್ವಯಕಾರರು. ಅವರು ನೂರಿಪ್ಪತ್ತು ವರ್ಷಗಳ ತುಂಬು ಜೀವನವನ್ನು ಬಾಳಿ ಲೋಕ ಕಲ್ಯಾಣ ಮಾಡಿ ಸಮಾಜಕ್ಕೆ ಮಹೋಪಕಾರ ಮಾಡಿದ್ದಾರೆ.

ಮಾನವ ವಿಷಯಾಭಿಲಾಷೆಯಿಂದ, ಪಾಂಡಿತ್ಯಮದದಿಂದ ಪರಮಾತ್ಮನಿಂದ ದೂರಸರಿಯುತ್ತಾನೆ. ಪರರ ಸೌಭಾಗ್ಯ, ಮಕ್ಕಳ ಪರೋಭಿವೃದ್ಧಿಯನ್ನು ಕಂಡುಮರುಗಿ, ಮನದೊಳಗೆ ಸೊರಗುವವರನ್ನು ವಾದಿರಾಜರು ಛೇಡಿಸುತ್ತಾರೆ. ಸಂಸಾರದಲ್ಲಿನ ಪ್ರಲೋಭನೆಗಳಿಗೆ ಬಲಿಯಾಗಬಾರದೆಂದು ಎಚ್ಚರಿಸುತ್ತಾರೆ. ಹಾಗೆಯೇ ವ್ಯರ್ಥಕಾಲಹರಣ ಕೂಡದೆಂದು ವಾದಿರಾಜರು ಸೂಚಿಸುತ್ತಾರೆ. 'ಹೋಗುತಿದೆ ಹೊತ್ತು ಕಳೆದು ವ್ಯರ್ಥವಾಗಿ, ಪರಮಾತ್ಮನ ನೆನೆಯದೆ ಎಂದು ಚಿಂತಾಕ್ರಾಂತರಾಗುವರು: "ಕೆಲಹೊತ್ತು ಹಸಿವೆ ನಿದ್ರೆಗಳಿಂದಲಿ, ಕೆಲಹೊತ್ತು ಕಾಕಪೋಕರ ಕಥೆಗಳಿಂದ, ಕೆಲಹೊತ್ತು ಪರವಾರ್ತೆಪರನಿಂದೆಗಳಿಂದ, ಕಾಲವು ಕಡೆಯಾಗೆ, ಹರಿ ನಿಮ್ಮನರ್ಚಿಸೆ ವೇಳೆಯಿಲ್ಲದೆ ಹೋಯಿತು...... ಹೊತ್ತು ಪಾಲಿಸೋ ದಯಮಾಡಿ ಸಿರಿ ಹಯವದನ " ಎನ್ನುವರು. ದುರದೃಷ್ಟವಶಾತ್ 'ಉದರ ಯಾತ್ರೆಯೇ ಮಹಾಯಾತ್ರೆಯಾಗಿದೆ ಹಣ ಹೊನ್ನು ಎಣಿಸುವುದೇ ಜಪವಾಗಿದೆ' ಎಂದು ಮಾನವನ ಮನಸ್ಥಿತಿಯನ್ನು ಚಿತ್ರಿಸುತ್ತಾರೆ. ಅದನ್ನು ಬಿಟ್ಟು ಪರಮಾತ್ಮನ ನಾಮಸ್ತುತಿಯನ್ನು ಮಾಡಬೇಕೆಂದು ಹಂಬಲ ವ್ಯಕ್ತಪಡಿಸುತ್ತಾರೆ: "ಪಾವನ ಮಾಡುವುದು ನಾಮಾಮೃತ ರಸ, ಪಾವನ ಮಾಡುವುದು ಶ್ರೀನಿವಾಸನ ನಾಮಸುಧಾರಸ" ಎಂದು. ಹಯವದನನನ್ನು ಭಜಿಸಿ ಬಾಳಿನ ಏಳಿಗೆಯನ್ನು ಹೊಂದಬೇಕೆಂದು ರಮಣೀಯವಾಗಿ ವಾದಿರಾಜರು ತುಂಬುಕೊರಳಿನಿಂದ ಹೇಳುತ್ತಾರೆ. "ಮುಂದು, ಹಿಂದು ಎಂದೆಂದಿಗೂ ಗೋವಿಂದನೇ ಎನಗೆ ಬಂಧು" ಎಂದು ಸ್ವಾರಸ್ಯವಾಗಿ ಅನಿಮಿತ್ತ ಬಂಧುವಾದ ಪರಮಾತ್ಮನನ್ನು ಸ್ತುತಿಸುತ್ತಾರೆ. ಚಪಲಚಿತ್ತದ ಉದ್ವೇಗವನ್ನು ಕಡೆಗಾಣಿಸಲು ನಿಶ್ಚಲ ನಿರ್ಧಾರಮಾಡಬೇಕೆಂದು ಸೂಚಿಸುತ್ತಾರೆ. ಅದು ಸಾಧ್ಯವಾಗುವುದೂ ಪರಮಾತ್ಮನ ಕೃಪೆಯಿಂದಲೇ ಎನ್ನುತ್ತಾರೆ. ಸ್ವಾಮಿ ಭಕ್ತನಿಗೆ ಧಾರ್ಷ್ಟ ದಿಟ್ಟತನಗಳು ಬೇಕೆಂದು ಭಕ್ತಾಗ್ರೇಸರ ಹನುಮಂತನ ಬಾಯಿಂದ ತಮ್ಮ ಕೀರ್ತನೆಗಳಲ್ಲಿ ಹೇಳಿಸುತ್ತಾರೆ.

ಶ್ರೀ ವಾದಿರಾಜರು ಜೀವನದಲ್ಲಿ ಸಂಯಮದ ಮಹತ್ವವನ್ನು ಒತ್ತಿ ಹೇಳುತ್ತಾರೆ. ಸಂಯಮವು ಒಂದು ತಪವೇ ಆಗಿದೆ. "ಬದುಕಿನಲ್ಲಿ ದುಡುಕುವುದು ಸುಲಭ; ಅದರ ಫಲ ಕೆಡುಕು. ಆದರೆ ಕೆಣಕಿ ಕೆರಳಿಸುವ ಸನ್ನಿವೇಶಗಳ ಮಧ್ಯೆಯೂ ಸಂಯಮ ತಪಸ್ಸನ್ನು ಹೊಂದುವುದು ಸೌಭಾಗ್ಯದ ಸಂಭ್ರಮವಾಗುವುದು". ಇದು ಶ್ರೀ ವಾದಿರಾಜರ ಲೋಕಪ್ರಜ್ಞೆ; ಅವರ ಹಿತೋಕ್ತಿಗಳು ಮಾನವನಿಗೆ ಎಂದೆಂದಿಗೂ ಸ್ಫೂರ್ತಿಶಕ್ತಿಯಾದ ಆದರ್ಶಗಳು.

ಶ್ರೀ ವಾದಿರಾಜರದು ಘನ ಪಾಂಡಿತ್ಯ. ವಾದಿ ನಿಗ್ರಹ ಮಾಡುವುದರಲ್ಲಿ ಅವರದು ಎತ್ತಿದ ಕೈ. ಎಷ್ಟು ಅರ್ಥಪೂರ್ಣವಾಗಿದೆ ವಾದಿರಾಜ ಎಂಬ ಹೆಸರು! ಸಂಸ್ಕೃತಕ್ಕೆ ಸಮಾನವಾದ ಸ್ಥಾನವನ್ನು ಕನ್ನಡಕ್ಕೆ ಗಳಿಸಿಕೊಟ್ಟದ್ದು ಅವರ ಹಿರಿಮೆಯನ್ನು ಸಾರುತ್ತದೆ. ಸೋದೆಯ ಪಾಳೇಗಾರನಾಗಿದ್ದ ಅರಸಪ್ಪ ನಾಯಕ, ಶ್ರೀ ವಾದಿರಾಜರ ಶಿಷ್ಯ. ಅಲ್ಲಿಯೇ ಶ್ರೀ ವಾದಿರಾಜರು ಮಠವನ್ನು ಸ್ಥಾಪಿಸಿದರು. ಅವರದು ೧೨೦ ವರ್ಷಗಳ ಸುದೀರ್ಘ ಸಾರ್ಥಕ ಬದುಕು. ಅವರಷ್ಟು ದೀರ್ಘಕಾಲದ ಪೀಠಾಧಿಪತ್ಯವನ್ನು ಹೊಂದಿದವರು ಬಹುಶಃ ಮತ್ತೊಬ್ಬರಿಲ್ಲ. ವೈಭವಾತಿಶಯ ಮಹಿಮೆಗಳಿಂದ ತುಂಬಿ ತುಳುಕುತ್ತಿರುವ ಅವರ ವೃಂದಾವನವು ಅಸಂಖ್ಯಾತ ಭಕ್ತರನ್ನು ಇಂದಿಗೂ ಸೋದೆಯಲ್ಲಿ ಆಕರ್ಷಿಸುತ್ತಿದೆ.

ಶಾರದಳಿಗೆ ಪತಿಯ ಸಾವಿನ ಭಯದ ಗೀಳು
(Obsession)

ಪ್ರೊ. ಪಿ. ನಟರಾಜ್

ಒಂದು ದಿನ ರಾತ್ರಿ ಸಹೋದ್ಯೋಗಿಯೊಬ್ಬರು ನನ್ನನ್ನು ಭೇಟಿಯಾಗಿ, ನನ್ನ ಬಂಧು ಒಬ್ಬರಿಗೆ ಯಾವುದೋ ಒಂದು ರೀತಿಯ ಮಾನಸಿಕ ಸಮಸ್ಯೆ ನಿರಂತರವಾಗಿ ಕಾಡುತ್ತಿದೆ. ತುಂಬಾ ಕಂಗಾಲಾಗಿದ್ದಾರೆ. ನನ್ನಲ್ಲಿ ಹೇಳಿಕೊಳ್ಳಲು ತುಂಬಾ ನಾಚಿಕೆಯಿಂದ ಹೇಳಿಕೊಳ್ಳುತ್ತಿಲ್ಲ. ಯಾರಾದರೂ ಮನೋವೈದ್ಯರ ಪರಿಚಯ ಮಾಡಿಸಿಕೊಡಿ, ತುಂಬಾ ಪುಣ್ಯ ಬರುತ್ತದೆ ಎಂದು ಬೇಡಿಕೊಳ್ಳುತ್ತಿದ್ದಾರೆ. ಅವರನ್ನು ನಿಮ್ಮಲ್ಲಿಗೆ ಎಂದು ಕರೆದು ತರಲಿ ಎಂದು ಕೇಳಿದರು. ಈ ವಾರ ಸಾಧ್ಯವಿಲ್ಲ, ಮುಂದಿನ ಮಂಗಳವಾರ ಐದು ಘಂಟೆಗೆ ಕರೆದು ತನ್ನಿ ಎಂದು ಹೇಳಿ ಕಳುಹಿಸಿದೆ. ಅವರು ಭೇಟಿಯ ಕಾಲಕ್ಕೆ ಸರಿಯಾಗಿ ಅವರನ್ನು ಕರೆದು ತಂದು ಪರಿಚಯಿಸಿದರು.

ಇವರು ನನ್ನ ಬಂಧು "ಶಾರದ". ಇವರ ಬಗ್ಗೆಯೇ ನಾನು ಹಿಂದಿನ ವಾರ ಭೇಟಿಯ ಅವಕಾಶವನ್ನು ಕೇಳಿದುದು ಎಂದು ಹೇಳಿ, ಅವರನ್ನು ನನ್ನ ಕ್ಲಿನಿಕ್‌ನಲ್ಲಿ ಬಿಟ್ಟು ಹೋದರು. ಶಾರದ ನನ್ನಲ್ಲಿಗೆ ಚಿಕಿತ್ಸೆಗಾಗಿ ಬಂದಾಗ ಭಯದಿಂದ ಬಳಲಿದ್ದಳು. ಅವಳಿಗೆ ೪೫ ವರ್ಷ ವಯಸ್ಸು, ವಿದ್ಯಾವಂತೆ, ವಿವಾಹವಾಗಿ ೧೭ ವರ್ಷಗಳಾಗಿದ್ದವು. ಆಕೆಯ ಪತಿ ಒಂದು ಸರ್ಕಾರಿ ಆಫೀಸ್‌ನಲ್ಲಿ ಪ್ರಥಮ ದರ್ಜೆ ಕಾರಕೂನನಾಗಿದ್ದ. ಈಕೆಗೆ ಇಬ್ಬರು ಹೆಣ್ಣುಮಕ್ಕಳಿದ್ದರು. ಮೊದಲ ಮಗಳಿಗೆ ೧೨ ವರ್ಷ, ಎರಡನೆಯವಳಿಗೆ ೯ ವರ್ಷ ವಯಸ್ಸು. ಹಿರಿಯವಳು ಪ್ರೌಢಶಾಲೆಯಲ್ಲಿ ಮತ್ತು ಕಿರಿಯವಳು ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದರು. ಆಕೆಗೆ ಗಂಡುಸಂತಾನದ ಕೊರತೆ ಕಾಡುತ್ತಿತ್ತು.

ಆಕೆಯೊಡನೆ ಲೋಕಾಭಿರಾಮವಾಗಿ ಮಾತನಾಡಿ, ವಿಶ್ವಾಸ ಮೂಡಿಸಿದ ಬಳಿಕ ತನ್ನ ಅಳಲನ್ನು ಹೇಳಿಕೊಳ್ಳಲಾರಂಭಿಸಿದಳು. ಪ್ರಾರಂಭದಲ್ಲಿ ಸಂಕೋಚ ಅಡ್ಡಿ ಬರುತ್ತಿದ್ದರೂ, ಕ್ರಮೇಣ ಎಲ್ಲವನ್ನು ಮುಚ್ಚು ಮರೆಯಿಲ್ಲದೆ ಹೇಳಿಕೊಂಡಳು "ನಾನು ಹಿಂದಿನ ವರ್ಷದವರೆಗೂ, ನನ್ನ ಪತಿ ಮತ್ತು ಮಕ್ಕಳೊಡನೆ ಸುಖವಾಗಿ ಸಂಸಾರ ಮಾಡಿಕೊಂಡಿದ್ದೆ. ಯಾವ ಸಮಸ್ಯೆಯೂ ಇರಲಿಲ್ಲ, ಹಿಂದಿನ ವರ್ಷ ಮಾರ್ಚಿ ತಿಂಗಳಲ್ಲಿ ಮೊದಲು ನನ್ನ ಚಿಕ್ಕಮ್ಮ, ಅನಂತರ ಅವರ ಮಗ ಅನಂತರ ಅವರ ಅಳಿಯ ಅನುಕ್ರಮವಾಗಿ ಹಾಗೂ ಅನಿರೀಕ್ಷಿತವಾಗಿ ಸಾವನ್ನಪ್ಪಿದರು. ಆ ಮೂವರ ಅನಿರೀಕ್ಷಿತ ಸಾವು ಆಘಾತವನ್ನುಂಟು

ಮಾಡಿದವು. ಹಲವಾರು ತಿಂಗಳು ಅವರ ಸಾವಿನ ಭಯ, ಚಿಂತೆ ಕಾಡಲಾರಂಭಿಸಿದವು. ಅನಂತರ ಒಂದು ದಿನ ಅನಿರೀಕ್ಷಿತವಾಗಿ ನನ್ನ ಪತಿಯ ಸಾವಿನ ಭಯ ಕಾಣಿಸಿಕೊಂಡಿತು. ಟಿ.ವಿ.ಯಲ್ಲಿ ಯಾವುದಾದರೂ ಸಾವಿನ ದೃಶ್ಯವನ್ನು ನೋಡಿದಾಗ, ಯಾವುದಾದರೂ ಶವವನ್ನು ನೋಡಿದಾಗ ಅಥವಾ ಯಾವುದಾದರೂ ಸಾವಿನ ಸುದ್ದಿಯನ್ನು ಓದಿದಾಗ ಅಥವಾ ಕೇಳಿದಾಗ, ನನ್ನ ಪತಿಯ ಸಾವಿನ ಭಯ ಆಗಿಂದಾಗ್ಗೆ ಬಂದು ಕಾಡುತ್ತಿತ್ತು. ಎಷ್ಟು ಸಮಾಧಾನ ಪಟ್ಟುಕೊಂಡರೂ ಅಥವಾ ಮರೆಯಲು ಇತರ ಚಟುವಟಿಕೆಗಳಲ್ಲಿ ತೊಡಗಿದರೂ, ಪ್ರಯೋಜನವಾಗುತ್ತಿರಲಿಲ್ಲ. ಪ್ರಪಂಚದ ಯಾವುದೇ ಧರ್ಮದ ವಿವಾಹಿತ ಸ್ತ್ರೀಯಾಗಲಿ, ತನ್ನ ಪತಿಗೆ ದೀರ್ಘಾಯಷ್ಯವನ್ನು ಕೊಡು, ಅವರಿಗೆ ಸುಖ ಶಾಂತಿಯನ್ನು ನೀಡು ಎಂದು ಭಗವಂತನನ್ನು ಪ್ರಾರ್ಥಿಸುವುದು ಸರ್ವೇಸಾಮಾನ್ಯ ಹಾಗೂ ಅದು ಪತ್ನಿಯ ಧರ್ಮ. ಆದರೆ ಇದಕ್ಕೆ ತದ್ವಿರುದ್ಧವಾಗಿ ಆತನ ಸಾವಿನ ಬಯಕೆ ಮತ್ತು ತತ್ಸಂಬಂಧದ ಭಯ ಕಾಡುತ್ತಿತ್ತು. ಕೆಲವೊಮ್ಮೆ ಆತನ ಹಿಂದೆ ಸ್ಕೂಟರ್‌ನಲ್ಲಿ ಹೋಗುವಾಗಲೂ ಆತನ ಸಾವಿನ ಭಯ ಕಾಡುತ್ತಿತ್ತು. ಕೆಲವೊಮ್ಮೆ ಕನಸ್ಸಿನಲ್ಲಿ ಆತನ ಸಾವನ್ನು ಕಂಡು ಭೀತಳಾಗಿ ಎಚ್ಚರಗೊಂಡು ಅತ್ತಿದ್ದುವುಂಟು. ಹಬ್ಬ ಹರಿದಿನಗಳಲ್ಲಿ ಮುತ್ತೈದೆಯನ್ನು ಆಹ್ವಾನಿಸಿ ಅವರಿಗೆ ತಾಂಬೂಲ ಮತ್ತು ಅರಿಶಿನ ಕುಂಕುಮವನ್ನು ಕೊಡುವುದು ಮತ್ತು ದೀರ್ಘಸುಮಂಗಲಿಯಾಗಿರು, ಪುತ್ರ ಸಂತಾನವಾಗಲಿ ಎಂದು ಅವರು ಹರಸಲಿ ಎಂದು ಬಯಸುವುದು ನಮ್ಮ ಧಾರ್ಮಿಕ ಪದ್ಧತಿ. ಆದರೆ ಇದಕ್ಕೆ ವಿರುದ್ಧವಾಗಿ ಅರಿಶಿನ ಕುಂಕುಮವನ್ನು ಕೊಟ್ಟಾಗ, ಅವರು ನನ್ನ ಸುಮಂಗಲಿತನ ಕಡೆಯಾಗಲಿ ಎಂದು ಅವರು ಹರಸಲಿ ಎಂದು ಮನಸ್ಸು ಬಯಸುತ್ತಿತ್ತು. "ಒಂದು ದಿನ ರಾತ್ರಿ ಆಕೆ ಮಲಗಿ ನಿದ್ರಿಸುತ್ತಿದ್ದಾಗ ಪತಿ ಸತ್ತಂತೆಯೂ, ಅವನ ಶವವನ್ನು ಅಂತ್ಯಕ್ರಿಯೆಗೆ ಕೊಂಡೊಯ್ಯುತ್ತಿದ್ದಂತೆಯೂ ಅದರಿಂದ ತನಗೆ ಸಮಾಧಾನವಾದಂತೆಯೂ ಕನಸುಬಿದ್ದಿತು." ಈ ಒಂದು ಸಮಸ್ಯೆಯನ್ನು ಮತ್ತೊಬ್ಬರಲ್ಲಿ ಹೇಳಿಕೊಳ್ಳಲು ಆಕೆಗೆ ನಾಚಿಕೆ ಮತ್ತು ಭಯ. ಹೇಳಿಕೊಳ್ಳದಿದ್ದರೆ ವಿಧಿಯಿಲ್ಲ ಮರೆಯಲು ಎಷ್ಟು ಪ್ರಯತ್ನಪಟ್ಟರೂ ಸಾಧ್ಯವಾಗುತ್ತಿಲ್ಲ. ಏನೂ ಮಾಡಲೂ ತೋಚುತ್ತಿಲ್ಲ. ನಾನು ಸಾಯುವವರೆಗೂ ಇದು ನನ್ನನ್ನು ಕಾಡುತ್ತಲೇ ಇರುವುದೇನೋ ಎಂದೆನಿಸುತ್ತಿದೆ. ಈ ನನ್ನ ಮಾನಸಿಕ ಸಮಸ್ಯೆಯನ್ನು ಪರಿಹರಿಸಿಕೊಡುವಿರಾ ಎಂದು ತನ್ನ ಅಳನ್ನು ತೋಡಿಕೊಂಡಳು.

ಸಂದರ್ಶನಕಾಲದಲ್ಲಿ ಆಕೆ ನೀಡಿದ ವಿವರಗಳು, ವರದಿಯಲ್ಲಿ ಬರೆದುಕೊಟ್ಟ ವಿವರಗಳು, ಮತ್ತು ಆಕೆ ನನಗೆ ಬರೆದ ಪತ್ರಗಳು ಮತ್ತು ಟಿ.ಎ.ಟಿ. ಪರೀಕ್ಷೆಯಿಂದ ಸಂಗ್ರಹಿಸಿದ ವಿವರಗಳಿಂದ ಆಕೆಯನ್ನು ಕಾಡುತ್ತಿರುವುದು ಪತಿಯ ಸಾವಿನ "ಗೀಳು" ಎಂಬುದು ಸ್ಪಷ್ಟವಾಗುತ್ತದೆ. ಯಾವುದಾದರೂ ಅಸಂಬದ್ಧ, ಅರ್ಥಹೀನ, ಅನುಭವ ಅಥವಾ ಅನಿಸಿಕೆ, ಅಥವಾ ಬಯಕೆ ಮೇಲಿಂದ ಮೇಲೆ ಬಂದು ಕಾಡುವುದಕ್ಕೆ "ಗೀಳು" (obsession) ಎನ್ನುತ್ತಾರೆ. ಇದೊಂದು "ಸರಳ ಮನೋಬೇನೆ" (Minor mentel disorder). ಈ ಅನಿಸಿಕೆಯನ್ನು

ತಡೆಗಟ್ಟಲು ಎಷ್ಟು ಪ್ರಯತ್ನಪಟ್ಟರೂ ಬರುಬರುತ್ತಾ ಪ್ರಬಲವಾಗುತ್ತದೆಯೇ ವಿನಃ ತಗ್ಗುವುದಿಲ್ಲ. ಮುಂದುವರಿದಂತೆ ಇದರಿಂದ ರೋಗಿಯ ಕಾಲವೆಲ್ಲಾ ವ್ಯರ್ಥವಾಗುತ್ತದೆಯೇ ವಿನಃ, ಏನು ಮಾಡಲೂ ಸಾಧ್ಯವಾಗುವುದಿಲ್ಲ. ಅತಿಯಾದಂತೆ ಬಾಳು ನರಕವಾಗುತ್ತದೆ. ಆ ಅನಿಸಿಕೆ ಮನಸ್ಸಿಗೆ ಬಂದು ಹೋದನಂತರ ಮನಸ್ಸಿಗೆ ಸ್ವಲ್ಪ ಸಮಾಧಾನವಾಗುತ್ತದೆಯಾದರೂ ಅನತಿ ಕಾಲದಲ್ಲಿ ಮತ್ತೆ ಕಾಣಿಸಿಕೊಳ್ಳುತ್ತದೆ. ಕೆಲವೊಮ್ಮೆ ಈ ಬಯಕೆ ಅಥವಾ ಅನಿಸಿಕೆಗೆ ಸಂಬಂಧಪಟ್ಟ ಇತರ ಅನುಭವಗಳು ಅಥವಾ ಅನಿಸಿಕೆಗಳು ಕಾಡಲಾರಂಭಿಸುವ ಸಾಧ್ಯತೆಗಳೂ ಉಂಟು. ಒಟ್ಟಿನಲ್ಲಿ ಈ ಅಸಂಬದ್ಧ ಬಯಕೆ ಅಥವಾ ಅನಿಸಿಕೆ ರೋಗಿಯನ್ನು ಕಂಗಾಲು ಮಾಡುತ್ತದೆ ಅಸಹಾಯಕಳನ್ನಾಗಿಸುತ್ತದೆ.

ಆಕೆ ನೀಡಿದ ವಿವರಗಳ ವಿಶ್ಲೇಷಣೆಯಿಂದ "ಆಕೆಗೆ ಆತನನ್ನು ವಿವಾಹವಾಗಲು ಇಷ್ಟವಿರಲಿಲ್ಲ. ಹಿರಿಯರ ಬಲವಂತಕ್ಕೆ ಮಣಿದು ವಿವಾಹವಾಗಿದ್ದಳು. ಆತ ಕೇವಲ ಕಾರಕೂನನಾಗಿದ್ದುದರಿಂದ ಹಾಗೂ ಆತನಿಗೆ ಕುಟುಂಬದ ಜವಾಬ್ದಾರಿ ತುಂಬಾ ಇದ್ದುದರಿಂದ ಆಕೆಗೆ ತುಂಬಾ ಅತೃಪ್ತಿ ಮತ್ತು ಅಸಮಾಧಾನಗಳಿದ್ದವು. ವಿಧಿಯಿಲ್ಲದೆ ವಿವಾಹವಾಗಿ, ಯಾಂತ್ರಿಕವಾಗಿ ದಾಂಪತ್ಯ ಜೀವನ ನಡೆಸುತ್ತಿದ್ದಳು. ಪತಿ-ಪತ್ನಿಯರ ನಡುವೆ ಬಹಳಷ್ಟು ಸಾರಿ ಘರ್ಷಣೆಗಳಾಗುತ್ತಿದ್ದವು. ದಾಂಪತ್ಯದ ಪ್ರಾರಂಭದಲ್ಲಿ ಪತ್ನಿ ಏನೇನೋ ಹಗಲುಗನಸು ಕಾಣುವುದು ಸಹಜ ಆದರೆ ಕುಟುಂಬದ ಜವಾಬ್ದಾರಿ, ಸಂಪಾದನೆಯ ಕೊರತೆ ಇತ್ಯಾದಿಗಳಿಂದ ಆಕೆ ತುಂಬಾ ಹತಾಶಳಾಗಿದ್ದಳು. ಮಕ್ಕಳಾದ ನಂತರ ಜವಾಬ್ದಾರಿ ಇನ್ನು ಹೆಚ್ಚಾಗಿ, ಆರ್ಥಿಕ ಸ್ಥಿತಿ ಇನ್ನೂ ಹದಗೆಡುತ್ತಾ ಬಂದಿತು ಆಗಿಂದಾಗ್ಗೆ ಕಲಹಗಳಾಗುತ್ತಿದ್ದವು. ಈ ಎಲ್ಲಾ ಕಹಿ ಅನುಭವಗಳ ಫಲವಾಗಿ ಪತಿಯ ಬಗ್ಗೆ ಕೋಪ, ದ್ವೇಷ, ಮತ್ತು ಆತನ ಸಾವಿನ ಬಯಕೆ ಆಗಿಂದಾಗ್ಗೆ ಮೂಡಿಬರುತ್ತಿದ್ದವು. ಒಂದೆಡೆ ಅವನ ಸಾವಿನ ಬಯಕೆ ಮೊಳೆತು ಬೆಳೆಯುತ್ತಿದ್ದರೆ ಮತ್ತೊಂದೆಡೆ ಆತನ ಸಾವಿನಿಂದಾಗುವ ಅನಾಹುತ ಮತ್ತು ಅನುಭವಿಸಬೇಕಾದ ಕಷ್ಟನಷ್ಟಗಳ ಭಯ ಆಕೆಯನ್ನು ಕಂಗಾಲು ಮಾಡಿದ್ದವು. ಸಾವಿನ ಬಯಕೆ ಮತ್ತು ಅದರಿಂದುಂಟಾದ ಭಯದ ನಡುವಣ ಘರ್ಷಣೆಯ (ಬಗೆಹರಿಯದ) ಫಲವಾಗಿ ಹಲವಾರು ತಿಂಗಳು ಉದ್ವಿಗ್ನತೆ(ಆತಂಕ) ಯನ್ನು ಅನುಭವಿಸುತ್ತಿದ್ದಳು. ಈ ಉದ್ವಿಗ್ನತೆಯನ್ನು ಮರೆಯುವ ಅಥವಾ ಅದರಿಂದ ತಲೆ ಮರೆಸಿಕೊಳ್ಳುವ ಪ್ರಯತ್ನದ ಫಲವೇ ಈ "ಗೀಳು" ಎಂದು ಹೇಳಬಹುದು.

ಆಕೆಯ "ಗೀಳನ್ನು" ಪರಿಹರಿಸಲು ಈ ಮುಂದಿನ ಕ್ರಮಗಳನ್ನು ಕೈಗೊಳ್ಳಲಾಯ್ತು.

೧. ಆಕೆಗೆ, ಆಕೆಯ ಗೀಳಿನ ಕಾರಣವನ್ನು ಮನವರಿಕೆ ಮಾಡಿಕೊಟ್ಟು, ನೈಜತೆಗೆ ಹೊಂದಿಕೊಳ್ಳಲು ಪುನರ್ ಶಿಕ್ಷಣ ನೀಡಲಾಯ್ತು.

೨. ಆಕೆಯ "ಆತಂಕವನ್ನು" ಪರಿಹರಿಸಲು "ತನು-ಮನ ವಿಶ್ರಾಂತಿಯ" ವಿಧಾನವನ್ನು ಕಲಿಸಿಕೊಡಲಾಯ್ತು.

೩. ಅತಿಯಾಗಿ ಕಾಡುತ್ತಿದ್ದ ಭಯವನ್ನು ಪರಿಹರಿಸಲು "ಕ್ರಮಬದ್ಧ ವಿಶ್ಚೋದನಾ" ಕ್ರಮವನ್ನು (Systematic desensitization) ಅನುಸರಿಸಲಾಯ್ತು.

೪. ಆಕೆ ಪ್ರತಿವಾರ ದೂರದ ಊರಿನಿಂದ ಬರಲು ಸಾಧ್ಯವಾಗದುದರಿಂದ, ತನ್ನ ಮನದುಮ್ಮಳವನ್ನು ಹೊರಹಾಕಿ ಸೆಟೆತವನ್ನು ತಗ್ಗಿಸಿಕೊಳ್ಳಲು, ಆಕೆಗಾಗುವ ಕಹಿ ಅನುಭವಗಳನ್ನು ಮತ್ತು ಆಗುತ್ತಿರುವ ಮಾರ್ಪಾಟುಗಳನ್ನು ನನಗೆ ತಿಳಿಸಲು ಪ್ರತಿವಾರ ಮುಕ್ತ ಮನಸ್ಸಿನಿಂದ ಒಂದು ಪತ್ರವನ್ನು ಬರೆಯುವಂತೆ ಸಲಹೆ ನೀಡಲಾಯ್ತು.

೫. ಕಾಡುತ್ತಿರುವ ಮನದುಮ್ಮಳವನ್ನು ದೂರಮಾಡಲು ಯಾವುದಾದರೂ ಸಮಾಜ ಸೇವಾಕಾರ್ಯದಲ್ಲಿ ಅಥವಾ ಮನರಂಜನಾಕಾರ್ಯದಲ್ಲಿ ತೊಡಗುವಂತೆ ಸಲಹೆ ನೀಡಲಾಯ್ತು. ಈ ಎಲ್ಲಾ ಕಾರ್ಯಕ್ರಮಗಳ ಫಲವಾಗಿ ಅವಳ "ಗೀಳು" ಆರು ತಿಂಗಳಲ್ಲಿ ಪೂರ್ಣವಾಗಿ ಪರಿಹಾರವಾಯ್ತು.

ಆರು ತಿಂಗಳ ತರುವಾಯ ಆಕೆಯಿಂದ ಒಂದು ಅನಿರೀಕ್ಷಿತ ಪತ್ರ ಬಂದಿತು "ಈಗ ನಾನು "ಗೀಳಿ" ನಿಂದ ಪೂರ್ಣವಾಗಿ ಮುಕ್ತಳಾಗಿದ್ದೇನೆ. ನಾನು, ನನ್ನ ಪತಿ, ಆತನ ಉದ್ಯೋಗ, ಸಂಬಳ, ಮತ್ತು ಕೌಟುಂಬಿಕ ಜವಾಬ್ದಾರಿಗಳಿಗೆ ಪೂರ್ಣವಾಗಿ ಹೊಂದಿಕೊಂಡಿದ್ದೇನೆ. ಕುಟುಂಬದ ಇತರ ಸದಸ್ಯರಿಗೇ ಅಲ್ಲದೆ ಇತರರಿಗೂ ಹೊಂದಿಕೊಂಡಿದ್ದೇನೆ. ಕೆಲವು ಉಪಯುಕ್ತ ಚಟುವಟಿಕೆಗಳನ್ನು ಹಮ್ಮಿಕೊಂಡಿದ್ದೇನೆ. ನಿಮ್ಮ ಆಶೀರ್ವಾದದಿಂದ ಮತ್ತು ಸಹಾಯದಿಂದ ನಮ್ಮ ಕುಟುಂಬ ತುಂಬಾ ಸಂತೋಷವಾಗಿದೆ, ಎಂದು ಬರೆದಿದ್ದಳು. ಇದಾದ ಅನಂತರ ಕೆಲವು ದಿನಗಳಲ್ಲೇ ಯಾವುದೋ ಒಂದು ಸಮಾರಂಭದಲ್ಲಿ ಆಕೆಯ ನಗುಮುಖ, ಮತ್ತು ಓಡಾಟವನ್ನು ಕಂಡು, ನನ್ನ ಶ್ರಮ ಸಾರ್ಥಕವಾಯ್ತು ಎಂದೆನಿಸಿತು.

ಚಂದ್ರಕಾಂತನ ಉದ್ವಿಗ್ನತೆ ಮತ್ತು ಬರಹಗಾರನ ಕೈಸೇದು

ಪ್ರೊ. ಪಿ. ನಟರಾಜ್

ಚಂದ್ರಕಾಂತ ೪೫ ವರ್ಷದ ಮಧ್ಯವಯಸ್ಕ. ನಗರದ ಒಂದು ಬ್ಯಾಂಕ್‌ನ ಹಿರಿಯ ಅಧಿಕಾರಿ. ಮೂರು ಮಕ್ಕಳ ತಂದೆ. ಬೇರೊಂದು ಊರಿನಲ್ಲಿ ವಾಸವಾಗಿದ್ದ ಅವರು ಮುಂಗಡವಾಗಿ ಫೋನ್ ಮಾಡಿ ಅಪಾಯಿಂಟ್‌ಮೆಂಟ್ ತೆಗೆದುಕೊಂಡು ಬಂದರು. ಸಾಮಾನ್ಯ ವೈದ್ಯರು ಮತ್ತು ಮನೋವೈದ್ಯರಿಂದ ಚಿಕಿತ್ಸೆಯನ್ನು ಪಡೆದರೂ ಅವರ "ಉದ್ವಿಗ್ನತೆ ಮತ್ತು ಬರಹಗಾರನ ಕೈಸೇದು" ಪರಿಹಾರವಾಗದೆ ನನ್ನಲ್ಲಿಗೆ ಬಂದಿದ್ದರು. ಅವರನ್ನು ಕುಳ್ಳಿರಿಸಿ, ಲೋಕಾಭಿರಾಮವಾಗಿ ಮಾತನಾಡಿ ವಿಶ್ವಾಸ ಮೂಡಿಸಿದನಂತರ, ಐದು ವರ್ಷಗಳಿಂದ ಕಾಡುತ್ತಿದ್ದ ತಮ್ಮ ಬವಣೆಯನ್ನೂ ತೋಡಿಕೊಂಡರು.

"ನಾನು ಒಂದು ನಗರದ ಮುಖ್ಯವಾದ ಬ್ಯಾಂಕ್‌ನಲ್ಲಿ ಹಿರಿಯ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದೇನೆ. ಒಂದು ದಿನ ಬ್ಯಾಂಕ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಇದ್ದಕ್ಕಿದ್ದಂತೆ ತೀವ್ರ ಉದ್ವಿಗ್ನತೆ ಕಾಣಿಸಿಕೊಂಡಿತು. ಹೃದಯ ವೇಗವಾಗಿ ಹಾಗೂ ಜೋರಾಗಿ ಬಡಿದುಕೊಳ್ಳಲಾರಂಭಿಸಿತು. ಬಾಯಿ ಒಣಗಿ ನೀರು ಕುಡಿಯಬೇಕೆನಿಸುತ್ತಿತ್ತು, ಉಸಿರಾಟ ವೇಗವಾಗತೊಡಗಿತು, ಕೈ ಅದುರಲಾರಂಭಿಸಿ, ಒಂದು ರೀತಿಯ ಆಂತರಿಕ, ಭಯ ಕಾಣಿಸಿಕೊಂಡವು. ಬಲಗೈ ಎಷ್ಟು ಅದುರುತ್ತಿತ್ತೆಂದರೆ ಪೆನ್ ಹಿಡಿದು ಬರೆಯಲಾಗಲೇ ಇಲ್ಲ. ಕೈಯಲ್ಲಿ ಪೆನ್ ಹಿಡಿದುಕೊಂಡಾಗ ಮಾಂಸಖಂಡಗಳು ಸೆಟೆದುಕೊಂಡು ನೋವು ಅಸಹನೀಯ ವಾಗುತ್ತಿತ್ತು. ಬ್ಯಾಂಕ್‌ನ ಮುಖ್ಯ ಅಧಿಕಾರಿಯಾಗಿ ದೈನಂದಿನ ವ್ಯವಹಾರಿಕ ಪತ್ರಗಳಿಗೆ ಮತ್ತು ಚೆಕ್‌ಗಳಿಗೆ ರುಜು ಹಾಕಲು ಸಾಧ್ಯವಾಗುತ್ತಿರಲಿಲ್ಲ. ಇನ್ನೂ ಹೆಚ್ಚಾಗಿ ಬ್ಯಾಂಕ್‌ನ ಉನ್ನತ ಅಧಿಕಾರಿಗಳು ಮತ್ತು ಗ್ರಾಹಕರ ಮುಂದೆ ರುಜು ಹಾಕಲು ಆಗುತ್ತಿರಲಿಲ್ಲ, ಬಲಗೈ ತುಂಬಾ ನಡುಗುತ್ತಿತ್ತು. ಈ ನನ್ನ ಅಸಹಾಯಕತೆಯ ಫಲವಾಗಿ ಮೂಡಿಬಂದ ವ್ಯಾಗ್ರತೆಯಿಂದ ಮನಸ್ಸಿಗೆ ನೆಮ್ಮದಿ ಇಲ್ಲ, ರಾತ್ರಿ ನಿದ್ರೆ ಬರುತ್ತಿಲ್ಲ ಸುಮ್ಮನೆ ಹೊರಳಾಡುತ್ತಿರುತ್ತೇನೆ. ಏನು ಮಾಡಲು ದಿಕ್ಕುತೋಚುತ್ತಿಲ್ಲ. ಯಾರಿಗೆ ಹೇಳಿಕೊಂಡರೂ ಪ್ರಯೋಜನವಾಗಲಿಲ್ಲ. ಎಷ್ಟು ದಿನ ರಜಾ ಹಾಕಲು ತಾನೆ ಸಾಧ್ಯ? ನನ್ನ ಈ ಬವಣೆಯನ್ನು ನೋಡುತ್ತಿದ್ದ ನನ್ನಮಗಳು, ನಿಮ್ಮ ಉಪನ್ಯಾಸವನ್ನು ಕಾಲೇಜ್‌ನಲ್ಲಿ ಕೇಳಿದಾಕೆ, ನಿಮ್ಮನ್ನು

ಕಂಡರೆ ಪರಿಹಾರವಾದೀತೆಂದು ಫೋನ್ ನಂಬರ್ ಮತ್ತು ವಿಳಾಸವನ್ನು ಕೊಟ್ಟಳು. ನಿಮ್ಮನ್ನು ಭೇಟಿಯಾಗಲು ಬೇರೆ ಊರಿಗೆ ಹೋಗಬೇಕಲ್ಲಾ ಎಂದು ಕೆಲವು ದಿನ ಮುಂದೂಡಿದೆ. ನನ್ನ ಯಾತನೆ ಅಸಹನೀಯವಾಗಿ ನಿಮಗೆ ಫೋನ್ ಮಾಡಿದೆ. ಈ ನನ್ನ ಸಮಸ್ಯೆ ಪರಿಹಾರವಾಗುವುದೇ? ಸಹಾಯ ಮಾಡುವಿರಾ? ಎಂದು ಕೇಳಿಕೊಂಡರು.

ಮುಂದುವರಿಯುತ್ತಾ "ನಾನು ತಿಂಗಳಲ್ಲಿ ಒಂದೆರಡು ಬಾರಿ ಕುಡಿಯುತ್ತೇನಾದರೂ, ಕುಡಿಯುವ ಚಟವಿಲ್ಲ. ನಾನು ಮಾಡುತ್ತಿರುವುದು ಅಪರಾಧವೆನಿಸಿದರೂ, ಕುಡಿಯುವುದನ್ನು ಬಿಟ್ಟಿಲ್ಲ. ಮನೆಯಿಂದ ಬ್ಯಾಂಕ್‌ಗೆ ಹೊರಡುವಾಗ ಕಾಣಿಸಿಕೊಳ್ಳುವ ಉದ್ವಿಗ್ನತೆ, ಕ್ರಮೇಣ ಅಧಿಕವಾಗುತ್ತಾ ಬಂದು ಅನಂತರ ಕ್ರಮೇಣ ಇಳಿಮುಖವಾಗುತ್ತದೆ. ಈ ಉದ್ವಿಗ್ನತೆ ಮತ್ತು ಬರಹಗಾರನ ಕೈಸೇದು ಈ ಎರಡು ಮಾನಸಿಕ ಸಮಸ್ಯೆಗಳ ಫಲವಾಗಿ ಸಾಮಾಜಿಕ ಕೂಟಗಳಲ್ಲಿ ಅಥವಾ ಚಟುವಟಿಕೆಗಳಲ್ಲಿ ಭಾಗವಹಿಸಲು ಮತ್ತು ಬ್ಯಾಂಕ್‌ನ ಕೆಲಸಕಾರ್ಯಗಳನ್ನು ನಿರ್ವಹಿಸಲು ತುಂಬಾ ಕಷ್ಟವಾಗುತ್ತದೆ. ನಮ್ಮ ಕುಟುಂಬದ ವೈದ್ಯರು, ನರವೈದ್ಯರು ಮತ್ತು ಮನೋವೈದ್ಯರಿಂದ ಹಲವಾರು ತಿಂಗಳು ಚಿಕಿತ್ಸೆಯನ್ನು ಪಡೆದೆನಾದರೂ, ಏನೂ ಪ್ರಯೋಜನವಾಗಿಲ್ಲ. ಈ ನನ್ನ ಅನುಭವದ ಫಲವಾಗಿ ಇವು ಗುಣವಾಗದ ಖಾಯಿಲೆಗಳು, ಆಜೀವ ಪರ್ಯಂತ ಅನುಭವಿಸಲೇಬೇಕು, ಎಂಬ ಚಿಂತೆ ನನ್ನನ್ನೂ ತುಂಬಾ ಕಾಡುತ್ತಿದೆ" ಎಂದು ತಮ್ಮ ಅಳಲನ್ನು ತೋಡಿಕೊಂಡರು.

ಆ ವ್ಯಕ್ತಿ ತನ್ನ ಎರಡು ಭೇಟಿಗಳಲ್ಲಿ ತೋಡಿಕೊಂಡ ಅಳಲು ಮತ್ತು ಇತರ ವಿವರಗಳಿಂದ, ಆತನನ್ನು "ನೈತಿಕ ಉದ್ವಿಗ್ನತೆ" (Moral anxiety) ಕಾಡುತ್ತಿತ್ತು ಎಂಬುದು ಸ್ಪಷ್ಟವಾಗುತ್ತದೆ. ಏಕೆಂದರೆ, ಆತನ ಹಿಂದಿನ ತಲೆಮಾರಿನವರಾರೂ ಯಾವುದೇ ಕಾರಣದಿಂದ ಮದ್ಯಪಾನ ಮಾಡುತ್ತಿರಲಿಲ್ಲ. ಅದು ಪಾಪ ಎಂದು ವರ್ಜಿಸಿದ್ದರು. ಈತ ತನ್ನ ಸಹವಾಸ ಅಥವಾ ಸನ್ನಿವೇಶದ ಪ್ರಭಾವಕ್ಕೆ ಬಲಿಯಾಗಿ ಕೆಲವೊಮ್ಮೆ ಮದ್ಯಪಾನ ಮಾಡುತ್ತಿದ್ದ ಕುಟುಂಬದ ನೈತಿಕ ನಿಯಮ ಅಥವಾ ಮೌಲ್ಯವನ್ನು ಭಂಗಗೊಳಿಸಿ ಮದ್ಯಪಾನ ಮಾಡುತ್ತಿದ್ದುದರಿಂದ ಅಪರಾಧ ಭಾವನೆ, ಪಾಪ ಭೀತಿಗಳಿಂದ ಮೂಡಿಬಂದ "ನೈತಿಕ ಆತಂಕ" ಕಾಡಲಾರಂಭಿಸಿತ್ತು. ಆದುದರಿಂದಲೇ ಯಾವ ಔಷಧೋಪಚಾರವೂ ಪರಿಹಾರ ನೀಡಿರಲಿಲ್ಲ. ೧. ಮಾಡುತ್ತಿರುವ ಪಾಪಕಾರ್ಯಕ್ಕೆ "ಆತ್ಮಸಾಕ್ಷಿ" (Conscience) ನೀಡುತ್ತಿರುವ ದಂಡನೆಯೇ ಈ "ನೈತಿಕ ಆತಂಕ - ಉದ್ವಿಗ್ನತೆ" ಎಂಬುದನ್ನು ಮನವರಿಕೆ ಮಾಡಿಕೊಡಲಾಯ್ತು. ಇದರಿಂದ ಆತನ ಮನಸ್ಸಿಗೆ ಸ್ವಲ್ಪ ನೆಮ್ಮದಿಯುಂಟಾಯ್ತು. ೨. ಇದರ ಜೊತೆಗೆ ಮನಶಾಂತಿ ಮತ್ತು ನೆಮ್ಮದಿಗಾಗಿ "ತನು-ಮನ ವಿಶ್ರಾಂತಿ" ಕ್ರಮವನ್ನು ಕಲ್ಪಿಸಿ ಕೊಟ್ಟು, ಪ್ರತಿನಿತ್ಯ ಅದನ್ನು ಮಾಡುವಂತೆ ಸಲಹೆ ನೀಡಲಾಯ್ತು. ಈ ಆಚರಣೆಯ ಫಲವಾಗಿ ಬಹಳ ಬೇಗ ಆತಂಕದಿಂದ ಚೇತರಿಸಿಕೊಂಡರು. ೩. ಅಧಿಕಾರಿಗಳ ಎದುರಿನಲ್ಲಿ ಉಂಟಾಗುತ್ತಿದ್ದ ಭಯ ಮತ್ತು ನಡುಕವನ್ನು

ಪರಿಹರಿಸಲು, ಅವಕಾಶ ಸಿಕ್ಕಾಗಲೆಲ್ಲಾ, ಮೊದಮೊದಲು ಉನ್ನತ ಅಧಿಕಾರಿಗಳು, ಅನಂತರ ಹಿರಿಯ ಅಧಿಕಾರಿಗಳನ್ನು ಭೇಟಿಯಾಗುವಂತೆ ಸಲಹೆ ನೀಡಲಾಯ್ತು. ಇದರಿಂದ ಅವರ ಬಗೆಗಿನ ಭಯ ಅಥವಾ ಆತಂಕ ಮತ್ತು ಕೈನಡುಕ ಕ್ರಮೇಣ ಕಡಿಮೆಯಾಗಲಾರಂಭಿಸಿದವು (Method of Tolerance). ೪. ಆತ್ಮಸಾಕ್ಷಿಯ ದಂಡನೆಯಿಂದ ಮುಕ್ತನಾಗಲು, ಯಾವುದೇ ಕಾರಣದಿಂದ ಕುಡಿಯುವುದನ್ನು ಕೈಬಿಡುವಂತೆಯೂ ಸಲಹೆ ನೀಡಲಾಯ್ತು.

"ಬರಹಗಾರನ ಕೈಸೇದನ್ನು "ಬಗೆಹರಿಸಲು - ೧. ಸಾಮಾನ್ಯವಾಗಿ "ಡಾಟ್ ಪೆನ್" ಗಳನ್ನು ಬಹಳ ಹೆಚ್ಚಾಗಿ ಬಳಸುವವರಲ್ಲಿ ಈ ಸಮಸ್ಯೆ ಕಾಣಿಸಿಕೊಳ್ಳುತ್ತದೆ ಎಂಬುದು ಅನೇಕ ಸಂಶೋಧನಾ ವರದಿಗಳಿಂದ ತಿಳಿದು ಬರುವುದರಿಂದ, ಅದರ ಬಳಕೆಯನ್ನು ಬಿಟ್ಟು ಮಸಿ ಪೆನ್ನನ್ನು ಬಳಸುವಂತೆ ಸಲಹೆ ಮಾಡಲಾಯ್ತು. ೨. ಪ್ರತಿನಿತ್ಯ ಒಂದು ಇಂಗ್ಲಿಷ್ ಮತ್ತು ಒಂದು ಕನ್ನಡ ಕಾಪಿ (ಐದ್ಯೆದು ಸಾಲು)ಗಳನ್ನು ನಿಧಾನವಾಗಿ ಹಾಗೂ ಅಂದವಾಗಿ ಬರೆಯುವಂತೆಯೂ ಮತ್ತು ಒಂದೆರಡು ಪುಟದಷ್ಟು ಇರುವ ಯಾವುದಾದರೂ ವಸ್ತು ವಿಷಯವನ್ನು ನಕಲು ಮಾಡುವಂತೆಯೂ ಸಲಹೆ ಮಾಡಲಾಯ್ತು. ೩. ಬ್ಯಾಂಕ್‌ನ ಕೆಲಸಕಾರ್ಯಗಳನ್ನು ಅರೆಮನಸ್ಸಿನಿಂದ ಮಾಡದೆ, ಮನಸಾರ ಅಂಗೀಕರಿಸಿ ನಿರ್ವಹಿಸಬೇಕೆಂದೂ ಸಲಹೆ ನೀಡಲಾಯ್ತು.

ಈ ಎಲ್ಲಾ ಸಲಹೆಗಳನ್ನು ನಿಷ್ಠೆಯಿಂದ ಆಚರಿಸಿದುದರ ಫಲವಾಗಿ ಕೇವಲ ನಾಲ್ಕೈದು ವಾರಗಳಲ್ಲೇ ಪೂರ್ಣವಾಗಿ ಚೇತರಿಸಿಕೊಂಡು ತಮ್ಮ ಕೃತಜ್ಞತೆಯನ್ನು ವ್ಯಕ್ತ ಪಡಿಸಿದರು.

ಈ ಸಂಚಿಕೆಯ ಬರಹಗಾರರು

೧. **ಡಾ. ಎಂ. ಪಿ. ಮಹಾದೇವಯ್ಯ**
ಪ್ರಾಧ್ಯಾಪಕ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಮಾನಸಗಂಗೋತ್ರಿ, ಮೈಸೂರು-೫೭೦ ೦೦೬

೨. **ಡಾ. ಎಲ್. ಮಂಜುಳಾಕ್ಷಿ**
ಸಂಶೋಧನಾ ಸಹಯೋಜಕಿ, ಭಾಷಾವಿಜ್ಞಾನ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು-೫೭೦ ೦೦೬

೩. **ಡಾ. ಬಿ. ಕೆ. ರವೀಂದ್ರನಾಥ್**
ಅಧ್ಯಾಪಕ, ಭಾಷಾವಿಜ್ಞಾನ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು-೫೭೦ ೦೦೬

೪. **ಡಾ. ಆರ್. ರಾಮಕೃಷ್ಣ**
ರೀಡರ್
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು-೫೭೦ ೦೦೬

೫. **ಡಾ.ಬಿ.ಕೆ. ಸುವರ್ಣಾದೇವಿ**
೫೨೭, ೧೫ನೆಯ ಮುಖ್ಯ ರಸ್ತೆ
ಸರಸ್ವತೀಪುರಂ, ಮೈಸೂರು-೫೭೦ ೦೦೯

೬. **ವಿಜಯಮ್ಮ. ವಿ**
ಸಂಶೋಧನಾ ವಿದ್ಯಾರ್ಥಿನಿ, ಭಾಷಾವಿಜ್ಞಾನ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು-೫೭೦ ೦೦೬